THE BOOK WAS DRENCHED

ಸತೀಹಿತೈಷಿಣೀ ಗ್ರಂಥಮಾಲಾ ಸಂ|| ೯.

ಶ್ರೀ

ಚಂದ್ರವದನಾ.

ನಂಜನಗೂಡು.

ಸತೀಹಿತೈಷಿಣೀ ಮಾತೃಮಂದಿರದಲ್ಲಿ

ಪ್ರಕಟಿಸಲ್ಪಟ್ಟುದು.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

ಕ್ಯಾಕ್ಸ್ಟನ್ ಬ್ರಾಂಚ್ ಪ್ರೆಸ್ಸಿನಲ್ಲಿ

ಮುದ್ರಿಸಲ್ಪಟ್ಟಿತು.

1916.

ಚಂದಾದಾರರಿಗೆ ೦-೩-೦] [ಸಾಮಾನ್ಯಕ್ರಯ ೦-೧೦-೦

SATHEE HITHAISHINI GRANTHAMALA.

(QUARTERLY)

Edited and Published

BY

SHRIMATHI THIRUMALAMBA

AT THE

HITHAISHINI MATRUMANDIRAM

NANJANGUD

PRINTED AT THE CAXTON PRESS BRANCH

BANGALORE CITY

1916

ಶ್ರೀಃ

ಪ್ರಸೀದತು

ಶ್ರೀಪ್ರಸನ್ನ ಲಕ್ಷ್ಮೀನೃಸಿಹ್ಮಪರಬ್ರಹ್ಮ

ಸಮರ್ಪಣೆ.

“ಅಲ್ಪಂಚೇದನವೇಕ್ಷಣೀಯ ಸರಣಾವಾರೋಪ್ಯತಾಂ ಮತ್ಕೃತಂ ।
ಕಿಞ್ಚಿದ್ಭೂರಿಭವೇದಿದಂಯದಿಗುರೂಣಸಮ್ಪ್ರೇಕ್ಷ್ಯಮೇ ತ್ಯಜ್ಯತಾಮ್॥
ಯದ್ವಾಽನನ್ತ ಮನನ್ತವೈಭವಜುಷಾ ರಙ್ಗಕ್ಷಮಾವಲ್ಲಭ ।
ತ್ವತ್ ಕ್ಷಾನ್ತ್ಯಾಃ ಖಲು ಲಕ್ಷ್ಯತಾಮನುಗುಣಾಮಾನೀಯತಾಂ ತತ್ತ್ವಯಾ॥

(ಕ್ಷಮಾಷೋಡಶೀ)

ಯಾವಪರಮಾತ್ಮನು

ಹೃದಯಕಮಲದಲ್ಲಿ ಶ್ರೀಲಕ್ಷ್ಮಿಯನ್ನೂ, ಪಾದಕಮಲದಲ್ಲಿ
ಭೃಂಗದಂತೆ ನನ್ನ ಸಹಕಾರ ಪಾತ್ರನ ದಿವ್ಯರೂಪವನ್ನೂ
ಧರಿಸಿ, ಅನವರತವೂ ನನ್ನ ಆರಾಧ್ಯದೇವನೆನ್ನಿಸಿ
ಪ್ರಕಾಶಿಸುತ್ತಿರುವನೋ
ಆ ಶ್ರೀಪ್ರಸನ್ನಲಕ್ಷ್ಮೀನೃಸಿಹ್ಮಸ್ವಾಮಿಯ
ಚರಣಾರವಿಂದಯುಗಳದಲ್ಲಿ

ಈ ನನ್ನ ಅಲ್ಪಕೃತಿಯಾದ

ಚಂದ್ರವದನಾಖ್ಯ

ಕ್ಷುದ್ರಗ್ರಂಥವನ್ನು
ಅನನ್ಯಶರಣ್ಯಭಾವದಿಂದ
ಸಮರ್ಪಿಸಿರುವೆನು.

(ಗುರುವಾರೈಕಾದಶಿ) (ಶ್ರೀಪಾದರೇಣು)

॥ಶ್ರೀಃ॥

ಆರಾಧ್ಯದೇವನ ಅಡಿದಾವರೆಗಳಲ್ಲಿ

ಪ್ರಾರ್ಥನಾಪಂಚಕಂ

1. ಭೋ, ಭಗವನ್ ! ಸಕಲ ಚೇತನಾ ಚೇತನ ಪ್ರಪಂಚಕ್ಕೂ ಕಾರಣ-ಕಾರ್ಯನಿಯಾಮಕನಾಗಿ, ಸರ್ವವ್ಯಾಪಿಯಾಗಿ, ಜೀವಾತ್ಮ ಪರಮಾತ್ಮ ರೂಪಭೇದಗಳಿಂದ ಲೀಲಾವಿಭೂತಿಯುಗನಿರತನೆನಿಸಿ ಪ್ರಕಾಶಿಸುತ್ತಿರುವ ನಿನ್ನ ಆ ದಿವ್ಯ ಜ್ಯೋತಿಸ್ವರೂಪವು, ಈ ನಿನ್ನ ಭಕ್ತಳ ಹೃದಯಕಮಲದಲ್ಲಿ ಅನವರತವೂ ಪ್ರಕಾಶಿಸುತ್ತಿರುವಂತೆ ಅನುಗ್ರಹಿಸು.

2. ದಯಾಮಯ ! ಯಾವ ನಿನ್ನ ಹೃದಯ ಕಾಸಾರದಲ್ಲಿ ತುಂಬಿ ತುಳುಕುತ್ತ ಅಪಾಂಗವೀಕ್ಷಣಮಾತ್ರದಿಂದ ಸಮಸ್ತ ಚೇತನ ಗಳಿಗೂ ಚೈತನ್ಯದಾಯಿನಿಯಾದ ಸಾಕ್ಷಾತ್ ಜಗನ್ಮಾತೆಯೆನ್ನಿಸಿ, ಸರ್ವತೋಮುಖದಿಂದ ಸ್ತುತಿಸಲ್ಪಡುತ್ತಿರುವ ಆ ನಿನ್ನ ಕಟಾ ಕ್ಷಶ್ರೀಯ ಅನುಗ್ರಹ ವಿಶೇಷವು ನಿರಂತರವೂ ನಮ್ಮನ್ನು ಎಡಬಿ ಡದೆ ರಕ್ಷಿಸುತ್ತಿರುವಂತೆಮಾಡು.

3. ಹೇ, ಪರಂಧಾಮ ! ಪರಾತ್ಪರನಾದ ನಿನ್ನ ಸ್ವರೂಪ-ಸಂಬಂಧ ಸಾಕ್ಷಾತ್ಕಾರಗಳಿಗೆ ಸಾಧನರೂಪವಾದ ಭಕ್ತಿಯು ನನ್ನಲ್ಲಿ ಸ್ಥಿರ ವಾಗಿರುವಂತೆ ಅನುಗ್ರಹಮಾಡು.

4. ಸರ್ವಲೋಕಶರಣ್ಯ ! ಸತೀಕುಲಕ್ಕೆ ಸ್ವರ್ಗೀಯ (ಸ್ವಾಭಾವಿಕ) ವಾಗಿರಬೇಕಾದ ಸತೀತ್ವವೂ, ಪತಿಭಕ್ತಿಯೂ, ಸರ್ವಜನಸ್ತುತ್ಯ ವಾದ ಆ ಸೌಶೀಲ್ಯವೂ ಈ ನಿನ್ನ ದಾಸಿಯಲ್ಲಿ ಸ್ಥಿರಪ್ರಕಾಶದಾ ಯಕವಾಗಿರುವಂತೆ ಅನುಗ್ರಹಿಸು.

5. ಮಂಗಳಾಂಗ! ಯಾವ ಮಾತೃವಾಕ್ಯಪರಿಪಾಲನೆಯ ಮಹತ್ವ ವನ್ನು ನೀನು ಜಗದ್ವಿಖ್ಯಾತವಾಗುವಂತೆ ಮಾಡಿರುವೆಯೋ-ಅಂತಹ ಪರಮೋತ್ಕೃಷ್ಟವಾದ ಮಾತೃಭಕ್ತಿಯು, ಮಾನವನ ಇತಿಕರ್ತ ವ್ಯಕ್ಕೆ ಆದ್ಯಸ್ವರೂಪವಾದ ಆ ಮಾತೃದೈವಭಕ್ತಿಯು ನನ್ನಲ್ಲಿ ದೃಢವಾಗಿದ್ದು ಸೇವೆಯ ಏಕನಿಷ್ಠೆಯಿಂದ ಕೃತಾರ್ಥಳೆನ್ನಿಸು ವಂತೆ ಮಾಡು. ಪರಂಧಾಮ ! ಕೃಪೆಮಾಡು ಮಾಡು !!!

ಇಂತು ಬೇಡುತ್ತಿರುವ ನಿನ್ನ

ಶ್ರೀಪಾದರೇಣು

॥ಶ್ರೀ॥

ಶ್ರಿಯೈನಮಃ.

ಸತೀಹಿತೈಷಿಣೀ ಗ್ರನ್ಥಮಾಲಾ.

(ತ್ರೈಮಾಸಿಕ)

ಸಂಪಾದಯಿತ್ರಿ - ತಿರುಮಲಾಂಬಾ.-* ನಳಸಂ॥ ಭಾದ್ರಪದ ಶುದ್ಧ.

"ಸ್ತೋತಾರಂ ತಮುಶಂತಿದೇವಿ ಕವಯೋ ಯೋಸ್ತ್ವದೀಯಾನ್ಗುಣಾನ್ ।
ಸ್ತೋತವ್ಯಸ್ಯ ತತಶ್ಚತೇ ಸ್ತುತಿಧುರಾ ಮಯ್ಯೇವ ವಿಶ್ರಾಮ್ಯತಿ ॥
ಯಸ್ಮಾದಸ್ಮದಮರ್ಷಣೀಯ ಫಣಿತಿ ಸ್ವೀಕಾರ ತಸ್ತೇ ಗುಣಾಃ ।
ಕ್ಷಾಂತ್ಯೌದಾರ್ಯದಯಾದಯೋಭಗವತಿಸ್ತ್ವಾಂಪ್ರಸ್ನುವೀರನ್ಪ್ರಥಾಮ್"

(ಶ್ರೀಗುಣರತ್ನಕೋಶ)

ಸವಿನಯ ನಿವೇದನ.

ಸುಹೃದರೇ !

ದಯಾಮಯಿಯಾದ ಭಗವತಿಯ ಪರಮಾನುಗ್ರಹ, ಗುರುಜನರ ಆಶೀರ್ವಾದ, ಸ್ವಾಮಿಯ ಅಂತರಂಗಸಹಾಯ, ಬಂಧು ಭಗಿನಿಯರ ಪ್ರೋತ್ಸಾಹ ಇತ್ಯಾದಿಗಳಿಂದ ಹಿತೈಷಿಣಿಯ ದೇಶಸೇವೆಯಲ್ಲಿ ಎರಡು ವರ್ಷಗಳ ಕಾಲಧನವು ಯಥೋಚಿತವಾಗಿ ವಿನಿಯೋಗಿಸಲ್ಪಟ್ಟಂತಾಯಿತು. ನಾವು ಮಾಡಿದ್ದವಾಗ್ದಾನದಂತೆ ಇಂದಿಗೆ ಎರಡು ವರ್ಷಗಳ ಕಾಲವಾಗಿ ಸುಶೀಲೆಯಿಂದ **ಮೊದಲುಮಾಡಿ, ವಿಕ್ರಮದವರೆಗೆ** ಎಂಟು ಪುಸ್ತಕಗಳನ್ನೂ ನಿಮ್ಮ ಸಮ್ಮುಖದಲ್ಲಿ ಒಪ್ಪಿಸಿದಂತಾಯ್ತಲ್ಲದೆ, ಈವರೆಗೆ ನಿಮ್ಮ ಅಭಿಮಾನಕ್ಕೆ ಅಭಿನಂದನವಾಗಿ 'ಭದ್ರಗೀತಾವಲಿ' ಎಂಬ ಗೀತಾ ಪುಸ್ತಕವನ್ನು, 'ವಿದ್ಯಾವಿಚಾರ' 'ಸೇವಾವಿಚಾರ' ಗಳೆಂಬ ಎರಡು ಉಪ ನ್ಯಾಸಗಳನ್ನೂ, ಸನ್ಮಾನರೂಪದಿಂದ ಸಮರ್ಪಿಸಿದ್ದಾಯಿತು. ಈ

ಮಾಲೆಯ ಎಂಟು ಪುಸ್ತಕಗಳಲ್ಲಿ 1-2-7. ಈ ಮೂರುಗ್ರಂಥಗಳು ಚಿಕ್ಕ ದಾಗಿವೆ. ಉಳಿದುವುಗಳೆಲ್ಲವೂ ನಿರೀಕ್ಷೆಗೆ ಇಮ್ಮಡಿಯಾದಷ್ಟು ಬೆಳೆದು ಹೋಗಿವೆ. ಆದರೂ ಅವುಗಳನ್ನು ಪ್ರಕಟಿಸುವುದರಲ್ಲಿ ಹಿತೈಷಿಣಿಯು ಹಿಂದೆಗೆದಿರುವುದಿಲ್ಲವೆಂದೂ, ವರ್ಗಣೀದಾರರಿಗೆ ತಕ್ಕಮಟ್ಟಿಗೂ ಬೆಲೆ ಯನ್ನು ಕಡಮೆ ಮಾಡಿಯೇ ಇರುವಳೆಂದೂ ಬೇರೆಹೇಳಬೇಕಾಗಿಲ್ಲ. ಇರಲಿ; ಈವರೆಗಿನ ನಮ್ಮ ಅನುಭವಕ್ಕೆ ಬಂದಿರುವ ವಿಚಾರಗಳಿಂದ ನಮ್ಮ ಗ್ರಂಥಮಾಲೆಯಲ್ಲಿ ಕೆಲವು ಸುಧಾರಣೆಗಳನ್ನು ಮಾಡಬೇಕೆಂಬ ಯೋಜನೆ ಯುಂಟಾಗಿ, ಈರೀತಿಯಾಗಿ ಬದಲಾಯಿಸಿದೆಯಲ್ಲದೆ ಕೆಳಗೆ ಕೊಡುವ ಸೂಚನೆಗಳಂತೆ ಮುಂದೆ ನಡೆಯುವದಾಗಿ ನಿಶ್ಚಯಿಸಿದೆ. ಹೇಗೆಂದರೆ:—

1. ಮಾಲೆಯು ಈ ವರೆಗೆ ಹೊರಟಂತೆ ಹೊರಡದೆ ಮುಂದೆ ನಿಯ ತಕಾಲಿಕವಾಗಿ ಗೊತ್ತಾದ ಕಾಲಗಳಲ್ಲಿ ಎಂದರೆ ಮೂರುತಿಂಗಳಿಗೊಂದು ಬಾರಿ ಹೊರಡುವಂತೆ ಏರ್ಪಡಿಸುವುದಲ್ಲದೆ, ವರ್ಗಣೀದಾರರಿಗೆ ಬಹು ಮಾನ ಪುಸ್ತಕಗಳನ್ನು ಕೊಟ್ಟು ಪ್ರೋತ್ಸಾಹಿಸುವುದೂ;

2. ಪ್ರತಿಸಂಚಿಕೆಯಲ್ಲಿಯೂ, ಒಂದು ಕಥೆಯನ್ನೂ, ಆ ಬಳಿಕ ವಿಚಾರವಿಮರ್ಶಾರೂಪವಾಗಿ ಬರೆವ ಉಪನ್ಯಾಸವೊಂದನ್ನೂ ಪ್ರಕ ಟಿಸಿ, ಸೋದರ ಸೋದರಿಯರಮನಸ್ಸಿಗೆ ಚನ್ನಾಗಿ ಹಿಡಿಯುವಂತೆ ಮಾಡುವುದೂ;

3. ಮಾಲೆಯಲ್ಲಿ ಪ್ರತಿಯೊಂದು ಗ್ರಂಥವೂ ಸಾಧ್ಯವಾದಷ್ಟು ಸಂಗ್ರ ಹವಾಗಿರುವಂತೆ ಎಂದರೆ ರಮಾನಂದ ಚಂದ್ರವದನೆಗಳಷ್ಟೇ ಇರಲು ಪ್ರಯತ್ನಿಸುವುದೂ,

4. ನವನ್ಯಾಸ ರೂಪದಲ್ಲಿ ಒಂದೆರಡು ಗ್ರಂಥಗಳಂತೆಯೂ, ನಾಟ ಕರೂಪದಲ್ಲಿ ಒಂದೆರಡು ಗ್ರಂಥಗಳಂತೆಯೂ ಪ್ರಕಟಿಸುತ್ತ ಬರುವುದೂ;

4. ಶೈಲಿಯನ್ನು ಇನ್ನೂ ಸಲಭರೀತಿಗೆ ತರಲು ಪ್ರಯತ್ನಿಸುವುದೂ; ಸಾಧ್ಯವಾದಂತೆ ಬೆಲೆಯನ್ನು ಕಡಿಮೆ ಮಾಡುವುದೂ; ಮತ್ತು ಪುಸ್ತಕ ಗಳ ತುದಿ ಮೊದಲಿಗೆ ಧರ್ಮವಚನಗಳನ್ನು ಕೊಡುತ್ತ ಬರುವುದೂ;

5. ಸಾಮಾಜಿಕ ಚಿತ್ರವನ್ನು, ಮುಖ್ಯವಾಗಿ ಕರ್ಣಾಟಕದ ಸ್ಥಿತಿಗಯನ್ನು ಚನ್ನಾಗಿ ಬಿಂಬಿಸಿ ನ್ಯೂನಾತಿರಿಕ್ತ ದೋಷಗಳನ್ನು ಕ್ರಮಪಡಿಸುವಂತೆ ಭಾವಪ್ರದರ್ಶನ ಮಾಡಲು ಬರೆದು ಪ್ರಕಟಿಸುವುದು.

ಮೇಲೆ ಹೇಳಿದ ನಿಯಮಾನುಸಾರವಾಗಿಯೇ ಈಬಾರಿಗೆ ''ವಿಧವಾತತ್ವ''ವನ್ನು ಪ್ರಕಟಿಸಿದ್ದೇವೆ, ಇದು ಮೂರುವರ್ಷದಕೆಳಗೆ ಪ್ರಕಟವಾಗಬೇಕಾಗಿದ್ದಿತು. ಕಾರಣಾಂತರಗಳಂದಾಗಲಿಲ್ಲವಾಗಿ ಈಗ ಇದರಲ್ಲಿ ಪ್ರಕಟಿಸಿದೆ. ಅಲ್ಲದೆ ಮುಂದಿನ ಗ್ರಂಥಗಳಲ್ಲಿ 'ಬ್ರಹ್ಮಚಾರಿಣಿ' ಎಂಬ ಒಂದು ಗ್ರಂಥವನ್ನು ಬಿಟ್ಟು ಉಳಿದುವುಗಳನ್ನು ಸಂಗ್ರಹವಾಗಿಯೇ ಪ್ರಕಟಿಸುತ್ತೇವೆ. ಮಾಲೆಯ ಮೂರನೆವರ್ಷದ ಈ ಸಂಚಿಕೆಯು ಈ ಭಾದ್ರಪದಮಾಸದಲ್ಲಿ ಹೊರಟಿರುವುದು. ಇನ್ನು ಕ್ರಮವಾಗಿ, ಮಾರ್ಗಶಿರ, ಫಾಲ್ಗುನ, ಜ್ಯೇಷ್ಠ ಮತ್ತು ಭಾದ್ರಪದ ಮಾಸಗಳಲ್ಲಿ ಹೊರಡುತ್ತವೆ. ಸದ್ಯಕ್ಕೆ ವಾರ್ಷಿಕ ಚಂದಾ ನಿರ್ಣಯಿಸಲನುಕೂಲವಿಲ್ಲವಾದುದರಿಂದ ಮೊದಲಿನಂತೆಯೇ ಇದೊಂದು ವರ್ಷವೂ ನಡೆಯಿಸಲು ಸಂಕಲ್ಪಿಸಿರುತ್ತೇವೆ.

ಈ ನಮ್ಮ ಏರ್ಪಾಟುಗಳಿಂದ ನಮ್ಮ ಸ್ತ್ರೀಜನಾಂಗಕ್ಕೆ ಹೆಚ್ಚಿನ ಉಪಯೋಗಗಳಾಗುವಂತೆ ತೋರಿದರೆ, ನಾವು ಮತ್ತೆ ಮತ್ತೆಯೂ ಹೆಚ್ಚಿದ ಉತ್ಸಾಹದಿಂದ ಇನ್ನೂ ಕೆಲವು ಸುಧಾರಣೆಗಳನ್ನು ತಂದು, ಮಾಲೆಯಲ್ಲಿ ಬಹುಮಾನವಾಗಿಯೂ, ಅಭಿನಂದನವಾಗಿಯೂ, ನಿಬಂಧಗಳಾಗಿಯೂ ಹಲವು ಗ್ರಂಥಕುಸುಮಗಳನ್ನು ಆನಂದದಿಂದ ಪ್ರಕಾಶ ಪಡಿಸುತ್ತ ಬರಬೇಕೆಂದಿರುತ್ತೇವೆ.

ಇನ್ನೂ ಪ್ರಕೃತಕ್ಕೆ ಬೇಕಾದುದೆರಡು ಮಾತುಗಳನ್ನು ಹೇಳಿ ವಿರಮಿಸುವೆವು. ಚಂದ್ರವದನೆಯನ್ನು ನೋಡಿ,ಹಲವರು ಅದ್ಭುತವೆಂದಾಗಲೀ ಈ ಕಾಲಕ್ಕೆ ಅಸಂಭವವೆಂದಾಗಲಿ, ಆಕ್ಷೇಪಿಸುವರಾದೀತು. ಆದರೆ ನಾವು ಹೇಳುವುದೇನಿದೆ ? ಸ್ತ್ರೀಯರು ಲೇಖನ ಕ್ರಿಯೆಗೆ

ಅನರ್ಹರೆಂದೂ, ಸ್ತ್ರೀಯರಿಂದ ಇಂತಹ ಗ್ರಂಥಗಳು ಎಂದಿಗೂ ಬರೆಯಲ್ಪಡಲಾರವೆಂದೂ, ಆರೋ ಸುಶಿಕ್ಷಿತರಾದ ಪುರುಷರೇ ಇದನ್ನು ಹೀಗೆ ಸ್ತ್ರೀ ಕರ್ತೃತ್ವದಲ್ಲಿ ಹೊರಡುವಂತೆ ಗುಪ್ತವಾಗಿದ್ದು ಪ್ರಚುರಿಸುತ್ತಿರುವರೆಂದೂ, ಇನ್ನೂ ಹಲವು ಸಂದೇಹಗಳಿಂದ ಹುಚ್ಚುಹುರುಳಾಗಿ ಹೇಳುತ್ತಿರುವಲ್ಲಿ ಇಂತಹ ಆಕ್ಷೇಪವುಂಟಾಗುವುದೇನೂ ಅತಿಶಯವಲ್ಲ. ಆದರೆ ನಮ್ಮ ಸಮಾಧಾನವಿಷ್ಟೆ; ಸಂಶಯರೋಗಕ್ಕೆ ಚಿಕಿತ್ಸೆಯಿಲ್ಲ. ಪ್ರಯತ್ನ ಮತ್ತು ಅಭ್ಯಾಸಗಳಿಗೆ ಅಸಾಧ್ಯವಾದ ಕೆಲಸಗಳು ಪ್ರಾಯಃ ಇರಲಾರವು. ಪುರುಷನಿಗೆ ಇರುವಷ್ಟು ಮೇಧಾಶಕ್ತಿ, ಪ್ರತಿಭಾಸಂಪನ್ನತೆಗಳು ಸ್ತ್ರೀಯರಲ್ಲಿಯೂ ಸ್ವಾಭಾವಿಕಗುಣಗಳಾಗಿದ್ದು, ಕೆಲವು ಸಂದರ್ಭಗಳಲ್ಲಿ ಅಧಿಕತರವಾಗಿಯೇ ಕೌಶಲ್ಯದಂತೆಹೊರೆಹೊಮ್ಮುವುದೂ ಉಂಟು. ಇದೇನೂ ಅಜ್ಞಾತವಿಷಯವಿಲ್ಲ. ಹಾಗಿದ್ದೂ ಹಿತೈಷಿಣೆಯ ವಿಷಯದಲ್ಲಿ ಆಕ್ಷೇಪಿಸುವರು, ಇಲ್ಲವೆ ಅನುಮಾನಿಸುವರು ಇರುವುದಾದರೆ ನಾವು ಮಾಡುವುದೇನು?

ಇನ್ನು ನಮ್ಮ ಕೃತಿರಚನೆಯಲ್ಲಿ ಸೇರಿರಬಹುದಾದ ನ್ಯೂನಾತಿರಿಕ್ತ ದೋಷಗಳನ್ನು ಕ್ರಮಪಡಿಸಲು, ನಮ್ಮ ಧರ್ಮಭಾತೃವರ್ಗೀಯರು ಬದ್ಧಕಂಕಣರಾಗಿಯೇ ಇರುವಲ್ಲಿ ನಾವು ಪ್ರಾರ್ಥಿಸುವುದಾದರೂ ಏಕೆ? ಆದರೂ ಒಂದುಮಾತು:—ಚಂದ್ರವದನೆಯಲ್ಲಿ ಸೂತ್ರಗಳಲ್ಲಿಯೂ, ಒಂದೆರಡು ಶ್ಲೋಕಗಳಲ್ಲಿಯೂ ಪ್ರಮಾದವಶದಿಂದ ಸೇರಿರುವ ಕೆಲವು ಮುದ್ರಣದೋಷಗಳನ್ನು ವಾಚಕರೇ ಸರಿಪಡಿಸಿ, ದ್ವಿತೀಯ ಮುದ್ರಣಕ್ಕೆ ಸರಿಪಡಿಸಿಕೊಳ್ಳುವಂತೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೋರುವೆವಲ್ಲದೆ, ನಮ್ಮ ಕಾರ್ಯದಲ್ಲಿ ಮುಖ್ಯಸಹಾಯಕರರಾಗಿರುವ ಶ್ರೀಕೃಷ್ಣಮುದ್ರಾಲಯ, ಕ್ಯಾಕ್ಸಟನ್ ಬ್ರಾಂಚ್ ಮುದ್ರಾಲಯ, ಕ್ರೌನ್ ಮುದ್ರಾಲಯಾಧಿಕಾರಿಗಳ ಭಾತೃಸಹಾಯದ ಸೌಜನ್ಯಕ್ಕಾಗಿ ನಾವು ಅವರನ್ನು ಮನಃಪೂರ್ವಕವಾಗಿ ವಂದಿಸಿ ಪರಮಾತ್ಮನಲ್ಲಿ

ಅವರ ಶ್ರೇಯೋಭಿವೃದ್ಧಿಯನ್ನು ಕೋರುತ್ತ ಇಲ್ಲಿಗೆ ವಿರಮಿಸುವೆವು.

ಇಂತು, ನಿವೇದಿಸುತ್ತಿರುವ ಹಿತೈಷಿಣಿ.

ಲಕ್ಷ್ಮೀನೃಸಿಹ್ಮಪ್ರಸನ್ನ.

ವಿಧವಾತತ್ತ್ವ.

"ಮೃತೇ ಭರ್ತರಿ ಸಾಧ್ವೀ ಸ್ತ್ರೀ ಬ್ರಹ್ಮಚರ್ಯೆ ವ್ಯವಸ್ಥಿತಾ"
ಸ್ವಯಂಗಚ್ಛತ್ಯಪುತ್ರಾಪಿ ಯಥಾತೇ ಬ್ರಹ್ಮಚಾರಿಣಃ ||

ಎಂಬೀ ಶ್ಲೋಕದ ಅರ್ಥಾಭಿಪ್ರಾಯವಾದರೂ ಏನು ?

"ಬ್ರಹ್ಮನಿಷ್ಠರಾದ ಮುಹನೀಯರು, ಎಂದರೆ ವೇದವೇದಾಂತರಹಸ್ಯಾದಿತತ್ತ್ವವನ್ನು ತಿಳಿದು, ಜಿತೇಂದ್ರಿಯರಾಗಿ ತಮ್ಮ ಅಭ್ಯಾಸಯೋಗಬಲದಿಂದ ತಪಸ್ಸಿದ್ಧಿಯನ್ನು ಹೊಂದಿದ ಮುಹನೀಯರು, ತಾವು ಪುತ್ರರಿಲ್ಲದವರಾದರೂ, ತಮ್ಮ ಸ್ವಾರ್ಜಿತವಾದ ಪುಣ್ಯಪ್ರಭಾವದಿಂದ ಪರಮಪದವನ್ನು ಹೇಗೆ ಹೊಂದುವರೋ – ಹಾಗೆಯೇ, ಪತಿವಿಹೀನೆಯಾಗಿ ನಿರಂತರ ಸ್ಥಿರಬ್ರಹ್ಮಚರ್ಯವ್ರತನಿಷ್ಠಳಾದ ಸಾಧ್ವಿಯು ಕೂಡ, ತನ್ನ ಮನೋಯೋಗ, ಅಭ್ಯಾಸಯೋಗಗಳ ಪ್ರಭಾವದಿಂದ ಉತ್ತಮೋತ್ತಮ ಪದವನ್ನು ಹೊಂದುವಳು." ಇದೇ ಅದರ ಮುಖ್ಯಾಶಯವು. ಅದೇತಕ್ಕಾಗಿ ಈ ಶ್ಲೋಕವುಂಟಾಯಿತು ? ಪತಿವಿಹೀನೆಯಾದ ಮಾತ್ರದಿಂದ ಘೋರತರವಾದ ಬ್ರಹ್ಮಚರ್ಯಕ್ಲೇಶವನ್ನೇ ಹೊಂದಬೇಕೆಂಬ ಆಶಯವೇನು ? ಹೀಗೆಂದು ಕೇಳುವಿರಲ್ಲವೇ–ಭಗಿನಿಯರೇ ! ಸಹಜ. ವಿಚಾರಪೂರ್ವಕವಾಗಿ ಸಮಾಧಾನವನ್ನು ಕೊಡುವೆನು, ಕೇಳಿರಿ. ಆದರೆ ಮೊದಲೊಂದುಮಾತು:––

ಸಾಮಾನ್ಯವಾಗಿ ನೋಡಿದರೆ, "**ವಿಧವಾ**" ಎಂಬ ಶಬ್ದಕ್ಕೆ ಧವನವಿಯೋಗವನ್ನು ಹೊಂದಿದವಳೆಂದಾಗುವದು. ಎಂದರೆ ಗಂಡನಿಲ್ಲದ

ವಳೆಂದು ಅರ್ಥ. ಗಂಡನಿಲ್ಲದವಳನ್ನು ಕಂಡಕಂಡವರು-'ಮುಂಡೆ, ಯೆಂದಾಡಿಕೊಳ್ಳುವರಷ್ಟೆ? ಕಾರಣವೇನು ? 'ಮುಂಡೆ' ಎಂಬಲ್ಲಿ ಅರ್ಥ ವೇನು!? ಹೆಂಗಸರಿಗೆ ಗಂಡನೇ ಶಿರಸ್ಸು, ಆತನೇ ಉತ್ತಮಾಂಗವು. ಆದುದರಿಂದ ಆ ಉತ್ತಮಾಂಗವಾದ ಶಿರವು ದೈವಗತಿಯಿಂದ ಅದೃಶ್ಯ ವಾಯಿತೆಂದರೆ, ಮುಂಡದಗತಿಯೇನು ? ರುಂಡವಿಲ್ಲದ ಬಳಿಕ, ಈ ಡಿಂಭಕ್ಕೆ ಮತ್ತೇನು ಹೆಸರು ! ಮುಂಡಕ್ಕೆ ''ಮುಂಡೆ'' ಎಂದೇ ಹೆಸರಾಗುವುದಲ್ಲವೆ ? (ಇದೇ ಅವರ ವೈರೂಪ್ಯಧಾರಣೆಯ ಮಾಲಿನ್ಯದೆಸೆ.)

ಈ 'ಮುಂಡೆ' ಎಂಬ ಶಬ್ದವು ಸ್ತ್ರೀ ಸಮುದಾಯಕ್ಕೆಲ್ಲಾ ಕೆಟ್ಟ ಬೈಗುಳಾಗಿರುವುದು. 'ವಿಧವಾ' 'ವಿತಂತು' 'ಮುಂಡೆ' ಮೊದಲಾದ ಶಬ್ದಗಳು ಕಿವಿಗೆ ಬಿದ್ದೊಡನೆಯೇ ಎಂತಹ ಕಲ್ಲೆದೆಯೊದರೂ ಕರಗಿ ಹೋಗದಿರಲಾರದು. ಏಕೆಂದರೆ, ಅಂತಹ ವಿಧವೆಯರಿಗೆ ಅಡಿಗಡಿಗೂ ತೊಡರಿಕೊಳ್ಳುತ್ತಿರುವ ಕಷ್ಟ, ನಷ್ಟ, ನಿಷ್ಠುರಗಳ ವಿಚಾರವು, ಆ ಶಬ್ದಶ್ರವಣಮಾತ್ರದಿಂದಲೇ ಕಣ್ಣಮುಂದೆ ಬಂದು ನಿಂತಂತಾಗಿ, ಮೈ ಮೇಲೆ ಮುಳ್ಳೇಳುವಂತೆ ಮಾಡುವುದರಿಂದ ಸತಿಯರ ಸರ್ವನಾಶಕರ ವಾದ ಈ ವೈಧವ್ಯವನ್ನು ದ್ವೇಷಿಸುವುದಾಗಲೀ, ಈ ಶಬ್ದದಿಂದ ಬೈದವರಮೇಲೆ ಉರಿದು ಬೀಳುವದಾಗಲೀ ಸ್ತ್ರೀಯರಿಗೆ ಸ್ವಾಭಾವಿಕವಾಗಿಯೇ ಇರುವುದು ! ಇರಲಿ, ಪ್ರಕೃತದಲ್ಲಿ ನಮಗೆ ಬೇಕಾದುದೇನು ? 'ವಿಧವಾ ತತ್ತ್ವವು.' ಎಂದರೆ ವಿಧವಾ ಶಬ್ದದ ಅರ್ಥಾಭಿಪ್ರಾಯವೇನು ? ಹೀಗಾಗಿರಲು ಭಗವಂತನ ಸೃಷ್ಟ್ಯುದ್ದೇಶವೇನು ? ವಿಧವೆಯರ ಕರ್ತವ್ಯವಾವುದು ? ಎಂಬೀ ವಿಷಯಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ತತ್ವಜ್ಞತೆಯು. ಇಲ್ಲಿ 'ವಿಧವಾ' ಎಂದರೆ, ವಿರಕ್ತಿಯನ್ನು ಧರಿಸುವವಳು, ಅಥವಾ ಧರಿಸಲರ್ಹಳಾದವಳೆಂದು ಭಾವಿಸಬೇಕು. ಏಕೆಂದರೆ-ಧವನನ್ನು ಅಂತರ್ಹಿತನಾಗಿ ಮಾಡಿಕೊಂಡಬಳಿಕ ಇವಳಿಗೆ ಅವಲಂಬನವಿನ್ನಾವದು ? ವೈರಾಗ್ಯವೇ ! ಹಾಗೆಯೇ,—'ವಿತಂತು' ಎಂಬಲ್ಲಿ

ಕೂಡ ವಿ–ವಿಚ್ಛೇದವಾದ, ತಂತು–ಧಾರವುಳ್ಳವಳೆಂದು ತಿಳಿಯಬೇಕು. ಹೇಗೆಂದರೆ, ಸ್ತ್ರೀಯರ ಸಮಸ್ತ–ಐಹಿಕಾ–ಮುಷ್ಮಿಕ (ಇಹಪರ) ಸುಖ ಸಂಪತ್ತಿಗಳಿಗೂ–ಸ್ವಾಮಿ–ಧವ– ಪತಿಯೇ ಸಹಕಾರ ಪಾತ್ರವು. ಆ ಸ್ವಾಮಿಯ ಸಹವಾಸದಿಂದಲೇ ಇವಳ ಇಹವ್ಯಾಪಾರದ ಭೋಗೋಪ ಭೋಗಗಳೂ ಲಭಿಸಬೇಕು. ಅಂತಹ ಸ್ವಾಮಿಯನ್ನು ಕಳೆದುಕೊಂಡ ಬಳಿಕ ಇವಳಿಗೆ ಮೇಲಿನ ಭೋಗಲಾಲಸೆಯು ನಾಶವಾದಂತೆಯೇ ಸರಿ. ಎಂದರೆ ವಿಷಯಸುಖಾಭಿಲಾಷೆಯನ್ನು ಕಿತ್ತೆಸೆದುಬಿಡಬೇಕೆಂಬ ಅರ್ಥವು. ಇನ್ನು 'ಪತಿವಿಯೋಗಿನಿಯರ ಕರ್ತವ್ಯವೇನೆಂಬು' ದನ್ನು ವಿಚಾರಮಾಡ ಬೇಕಷ್ಟೆ; ಪ್ರಿಯಸೋದರಿಯರೇ !

ವಿಧವಾತತ್ತ್ವವನ್ನು ನಿರೂಪಿಸುವುದೆಂದರೆ, ಬಹು ಸಾಹಸದ ಮಾತಾದರೂ, ಸ್ವಾನುಭವಬಲದಿಂದ ನಾಲ್ಕಾರು ಮಾತುಗಳಿಂದಾದರೂ ನಮ್ಮವರಿಗೆ (ಅನಾಥಭಗಿನಿಯರಿಗೆ ಮಾತ್ರ) ತಿಳಿಯಹೇಳುವುದೇ ನನ್ನ ಇಂದಿನ ಮುಖ್ಯಗುರಿಯು. ಏಕೆಂದರೆ ಈ ಸೋದರಿಯುಕೂಡ ಆ ಅಭಾ ಗಿನೀ–ಭಗಿನಿಯರಂತೆಯೇ ಓರ್ವವಿತಂತು ಸ್ತ್ರೀ! ಹಾಗೂ, ಕರಣಪಟುತ್ವ ವಿಲ್ಲದ, ಪವಿತ್ರತರವಾದ ಬಾಲ್ಯದಲ್ಲಿಯೇ ಮೇಲಿನ ಅನುಭವಕ್ಕೆ ಪಾತ್ರ ಳಾದವಳು !! ಆದರೂ ಇದನ್ನು ನಾನು ಕಷ್ಟವೆಂದಾಗಲೀ, ಈ ಜನ್ಮ ಧಾರಣವು ಅಸಾರವಾದುದೆಂಬಾಗಲೀ, ನಮ್ಮ ಇಹ ಜೀವನವು ತುಚ್ಛ ವೆಂದಾಗಲೀ, ಅಥವಾ ಭೂಭಾರಭೂತವಾದುದೆಂದಾಗಲಿ ಕನಸು ಮನಸಿ ನಲ್ಲಿಯಾದರೂ ಭಾವಿಸಲಾರೆನು !!! ಅದೇಕೆನ್ನುವಿರಿ ? ಅವುದೇ ಒಂದು ಹುಲ್ಲುಕಡ್ಡಿಯು ಕೂಡ ಕಾಲಾನುಕ್ರಮದಿಂದ ಮಹೋಪಕಾರಿಯಾಗಿ ಪರಿಣಮಿಸುವದೆಂಬ ಆರ್ಷ ವಚನವನ್ನು ತಿಳಿದಿರುವ ನಾನು "ಕರಣ–ಕಳೇ ಬರಗಳಿಂದೊಡಗೂಡಿ, ಪ್ರಜ್ಞಾಧಾರವಾದ ಬುದ್ಧ್ಯೇಂದ್ರಿಯ ಸಹಾಯ್ಯ ದಿಂದ ಸಕಲರಹಸ್ಯವನ್ನೂ ತಿಳಿಯಬಲ್ಲ ಈ ಮಾನವಜನ್ಮವನ್ನು ಅಸಾರ ವೆಂದು ಹೇಳಬಹುದೇ ? ಇವರಲ್ಲಿ, ಭಗವಂತನ ನಿಗೂಢವಾದ ಬಲವ

ದುದ್ದೇಶವೊಂದಾವುದೋ ಇರುವದೆಂದೂ, ಅದನ್ನು ತಿಳಿದು, ಅದರಂತೆ ನಡೆದು ಕೃತಾರ್ಥತೆ ಹೊಂದಬೇಕೆಂದೂ ನನ್ನ ಹಿಂದಿನ 12 ವರ್ಷಗಳ ಬಹುದೀರ್ಘಕಾಲವನ್ನೂ ವಿಚಾರವಿಮರ್ಶೆ ಮತ್ತು ಅಭ್ಯಾಸಗಳಲ್ಲಿಯೇ ಕಳೆದು, ಈಗಲೀಗ ಭಗವದನುಗ್ರಹಲಬ್ಧವಾಗಿರುವ ಆ ಪಾರಮಾರ್ಥಿಕ ಸಂಬಂಧವಾದ ಆತ್ಮಾನಂದದಲ್ಲಿ ನಲಿದಾಡುವಂತಾಗಿರುವೆನು, ಇದರಿಂದಲೇ ನಾನಿದನ್ನು ನಿಸ್ಸಾರವೆಂದಾಗಲೀ, ತುಚ್ಛವೆಂದಾಗಲೀ, ಹೇಳಲೊಲ್ಲದ ವಳಾಗಿರುವೆನು. ಈ ನನ್ನ ಅನುಭವಕ್ಕೊಳಪಟ್ಟ ವಿಚಾರದಲ್ಲಿ ತಿಳಿದು ಬರುವದೇನಂದರೆ—

ಈ ವೈಧವ್ಯವು ಅವರವರ ಪೂರ್ವಾರ್ಜಿತದ ಕರ್ಮಫಲವಾಗಿರುವುದು. ಹಿಂದಿನ ಅಶ್ರದ್ಧೆ, ಅತ್ಯಾಶೆ, ಪತಿದ್ರೋಹ, ವಂಚನೆ, ವಕ್ರತೆಗಳ ಫಲವಾಗಿ ಇಂದು ಈ ಅನುಭವವುಂಟಾಗಿರುವುದು. ಇದರಿಂದ ಬಿಡುಗಡೆ ಹೊಂದಬೇಕಾದರೆ ನಾವು ಈಗ ಪ್ರಯಾಸಪಡಲೇ ಬೇಕು. ಇಲ್ಲವಾದರೆ ಈ ಬಂಧನಕ್ಲೇಶವು ನಮಗೆಂದಿಗೂ ತಪ್ಪುವದಲ್ಲ. ಇದಕ್ಕಾಗಿಯೇ, ಅಲ್ಪಾಯುಗಳಾದ ಪತಿರಾಜರು ಇಹಜೀವನವನ್ನು ಕೊನೆಗಾಣಿಸಿ ಹೋಗಿಯೂ, ನಮ್ಮ ಕರ್ತವ್ಯದ ದೊಡ್ಡ ಹೊರೆಗಾಗಿ ನಾವು ಉಳಿದಿರಬೇಕಾಗಿದೆ. ಈ ಬಾಧೆವನ್ನಿಳಿಸಬೇಕಾದರೆ, ಈಗಲಾದರೂ ನಾವು, ನಮ್ಮ ಸ್ವಾಮಿಯ ರೂಪಧ್ಯಾನದಲ್ಲಿ ಮಾತ್ರವೇ ನಮ್ಮ ಆಶೆಯನ್ನೊಪ್ಪಿಸಿ, ಉಳಿದ ಶಕ್ತಿ-ಯುಕ್ತಿಗಳೆಲ್ಲವೂ, ಆ ಭಗವನ್ನಿರೂಪಿತವಾಗಿ ಪ್ರಾಯಶ್ಚಿತ್ತರೂಪವಾಗಿರುವ ಗುರುಕುಲವಾಸದ ಚಿರವ್ರತವನ್ನೇ ಹಿಡಿಯಬೇಕಾಗಿರುವುದು.

ಪ್ರಕೃತದಲ್ಲಿ ಈ ಬಗೆಯ ವಿಚಾರಪರತೆಯು ಸಾಮಾನ್ಯಜನ ಸಮುದಾಯದಲ್ಲಿ ಅಂಗೀಕಾರವಾಗಲರಿದು. ಏಕೆನ್ನುವಿರಿ ? ಇತ್ತನೋಡಿರಿ! ಧರ್ಮಪುರುಷನು ಈಗ ಅತ್ಯಂತ ಕ್ಷೀಣಸ್ಥಿತಿಗೆ ಬರುತ್ತಿರುವನು. ಹೀಗೆಯೇ ಬಿಟ್ಟರೆ, ಇನ್ನು ಅತ್ಯಲ್ಪಕಾಲದಲ್ಲಿಯೇ ಆತನು ನಿರ್ನಾಮನಾ

ಗುವದರಲ್ಲಿಯೂ ಸಂಶಯುವಿರುವುದಿಲ್ಲ. ಲೋಭಮೋಹರ ವೀರಾವೇಶದಿಂದ ಜಗತ್ತೇ ಬಂಧಿಸಲ್ಪಟ್ಟು, ಕಾಮರಾಜನ ಆಧೀನವಾಗಿ ಹೋಗಿದೆ. ಕಾಮನ ಸಾರ್ವಭೌಮತ್ವದಿಂದ ಬ್ರಹ್ಮಾನಂದಕ್ಕೆ ಕಾರಣವಾಗಿರವ ಬ್ರಹ್ಮಚರ್ಯೆಯು ಜೀರ್ಣವಾಯಿತು. ವೀರಕ್ತ್ರಧರ್ಮವು ಲೋಪವಾಯಿತು. ಸನಾತನ ಮತತತ್ವದ ಗೌರವಕ್ಕೆ ಎಲ್ಲೆಲ್ಲಿಯೂ ಅಪವಾದವು ಸುತ್ತಿಮುತ್ತುವುದಾಯಿತು. ಇಂತಹ ವಿಷಮಸ್ಥಿತಿಯಲ್ಲಿ ಆ ನಮ್ಮ ಧ್ಯೇಯಪುರುಷನಾದ ಧರ್ಮದೇವನ ಪುನರುತ್ಥಾಪನಕ್ಕೆ ಉಪಾಯವೇನೆಂದರೆ-ಒಂದೇ, ಅದೇ ನಮ್ಮ ಆತ್ಮಾವಲಂಬನೆಯು ಸ್ಥಿರಬ್ರಹ್ಮಚರ್ಯೆ!!.! ಇದರಿಂದಲೇ ಆತನು ಪ್ರಕಾಶಕನಾಗಬೇಕು. ಭಗವಂತನು ಕೂಡ, ಧರ್ಮಸಂಸ್ಥಾಪನೆಯ ಈ ಮಹತ್ಕಾರ್ಯಸಾಧನೆಗಾಗಿ ಚಿರಬ್ರಹ್ಮಚರ್ಯವ್ರತದಲ್ಲಿ ಏಕನಿಷ್ಠರಾಗಿರಬೇಕೆಂಬ ಉದ್ದೇಶದಿಂದ ನಮ್ಮ ಆಯುದಾಯವನ್ನು ಹೆಚ್ಚಿಸಿ, ಉಳಿಸಿರುವನು. ಇಂತಹ ಪರಮಾತ್ಮನ ಪರಮ ಪವಿತ್ರತಮವಾದ ಉದ್ದೇಶಕ್ಕೆ ಪ್ರತಿಕೂಲರಾಗಿ ನಡೆಯುವುದು ನಮಗೆ ಹಾನಿಕರವಲ್ಲವೆ? ಭಗವಂತನು ನಮ್ಮನ್ನು ಹೀಗೆಮಾಡಿ ನಿಲ್ಲಿಸಿರುವ ಉದ್ದೇಶವೇ ಅದಾಗಿರುವಾಗ ನಾವು ಆತನ ಉದ್ದೇಶವನ್ನು ಕಾರ್ಯಕಲಾಪಗಳಲ್ಲಿಯೂ ಸಾರ್ಥಕಪಡಿಸಿಕೊಂಡು, ಇಹಜನ್ಮದ ಕೃತಾರ್ಥತೆಯನ್ನೂ,ಪಾರತ್ರಿಕ ಸುಖದ ವೈಭವವನ್ನೂ ಸೂರೆಗೊಳ್ಳುವುದು ಅತ್ಯಾವಶ್ಯಕವಲ್ಲವೇ?

ಇತ್ತನೋಡಿರಿ-ಸೋದರಿಯರೇ!

"ರಮಣನಿಲ್ಲದ ನಾರಿ-ಪರರಕಣ್ಣಿಗೆ ಮಾರಿ" ಎಂಬಂತೆ ಪತಿವಿಹೀನೆಯರಾದ ಆ ಅಭಾಗಿನಿಯರ ಕಷ್ಟ-ದುಃಖಗಳನ್ನು ವಿವರಿಸುವದಕ್ಕಾಗಿ ಮಹನೀಯರು ಎಷ್ಟೋ ಹಾಡುಗಳನ್ನು ಕೂಡ ಬರೆದಿಟ್ಟು ಹೋಗಿರುವರು. ಅದೆಲ್ಲವೂ ಅಕ್ಷರಶಃ ನಿಜವೆಂದು ಪ್ರಮಾಣಪುರಸ್ಸರವಾಗಿ ಹೇಳಬಹುದಾಗಿದೆ. ಆದರೆ, ಹಾಗೇಕೆ? ಅವರನ್ನುಕಂಡರೆ ಕಾಡು ಮೃಗಗಳನ್ನು ಕಾಣುವುದಕ್ಕಿಂತಲೂ ಕ್ರೂರವಾಗಿ ನೋಡುವರಲ್ಲದೆ,

ಅವರ ಜೀವನ ವಿಚಾರದಲ್ಲಿ ಕೇವಲ ನೀಚ-ನಿಂದ್ಯವಾದ ಆಚಾರಗಳನ್ನು ಬೇರೆ ವಿಧಿಸಿ ದ್ವೇಷವನ್ನು ತೀರಿಸಿಕೊಳ್ಳುತ್ತಿರುವದೇಕೆ? ರಮಣರಿದ್ದಾಗ ಅವರಿಂದ ಇವರಿಗಾಗುತ್ತಿದ್ದ ಮಹೋಪಕಾರವಾವುದು? ಆ ಬಳಿಕ ಅವರಿಂದ ಇವರಿಗಾಗುವ ಅಪಕಾರವಾವುದು? ಅವರು ತಮ್ಮ ಮನೆಗಳಲ್ಲಿ ಅಶನಾರ್ಥಿಗಳಾಗಿ ಬಂದು ಸೇರಿದರೆಂದೂ, ತಮ್ಮ ತಲೆಗೆ ಹೊರೆಯಾಗಿ ಬಿದ್ದಿರುವರೆಂದೂ ಹುಚ್ಚು ಹುರುಳಾಗಿ ಹಾಡಿಕೊಳ್ಳುತ್ತಿರುವ ಅಭಿಪ್ರಾಯವೇನು? ಹೇಗಾದರೂ ಆಗಲಿ; ಅಂತಹ ಅನಾಥ-ಅಭಾಗಿನೀ-ಭಗಿನಿಯರಿಂದ ತಮ್ಮ ಪರಿವಾರಕ್ಕೂ, ಮತ್ತು ಧರ್ಮಸಂಸ್ಥಾಪನೆಗೂ ಆಗಬೇಕಾಗಿರುವ ಮಹತ್ತರವಾದ ಸಹಾಯವೆಂತಹದೆಂಬ ಧರ್ಮಸೂಕ್ಷ್ಮಜ್ಞಾನದೃಷ್ಟಿಯೇ ಅಳಿಸಿಹೋಗಿ, ಅವರೆಲ್ಲರೂ ಅಂಧರಾಗಿ ಹೋಗಿದ್ದರೆ ನಾವು ಮಾಡುವದಾದರೂ ಏನಿದೆ?—ನನ್ನ ಅಭಾಗಿನೀ-ಭಗಿನಿಯರೇ!

ಅವರ ಮಾತು ನಮಗೇಕೆ! ಮೊದಲು ನಮ್ಮ ವಿಚಾರವೇ ನಮಗೆ ಸಾಕಾಗಿರಲಿ, ನೋಡಿರಿ! ರಮಣನಿಲ್ಲದ ನಾರಿಯು, ಅಲಂಕಾರ ರಾಹಿತ್ಯ, ಸುಖಪರಾಙ್ಮುಖತೆ, ಉತ್ಸಾಹ ಹೀನತೆಗಳಿಂದ ಕೇವಲ ಮಾಲಿನ್ಯದೆಸೆಯಲ್ಲಿ ಮೃತಪ್ರಾಯರಾಗಿರುವುದರಿಂದ ಯಾವ ಶುಭಕಾರ್ಯ ಸಮಾರಂಭ ಕಾಲಗಳಲ್ಲಿಯೂ ಕಾಣಬಾರದೆಂದೂ, ಇವಳ ದರ್ಶನವು ಕೇವಲ ಅಶುಭಕಾರಣವೆಂತಲೂ ಹೇಳುವರಷ್ಟೆ! ಇದೆಲ್ಲವೂ ಹುಚ್ಚಾಟವೆಂದೂ, ಅಸಂಗತವೆಂದೂ ನೀವು ಹೇಳಬಹುದಲ್ಲವೇ? ಆದರೆ, ಇದೆಲ್ಲವೂ ನಮ್ಮ ಪುರೋವೃದ್ಧಿಗೆ ಸಾಧನಗಳೆಂದೇ ಹೇಳಬಹುದು. ಏಕೆಂದರೆ?—

ಪ್ರತಿಯೊಂದು ಉತ್ಸವಕಾಲಗಳಲ್ಲಿಯೂ ಬಹುಜನ ಸಮ್ಮೇಲನವೂ, ಗೀತವಾದ್ಯಾದಿ ಶೃಂಗಾರ, ಹಾಸ್ಯ, ವಿನೋದರಸ ಪ್ರಧಾನಗಳಾದ ಕಾರ್ಯಕಲಾಪಗಳಿಂದಲೂ, ವಿವಿಧ ರಸ ಭಕ್ಷ್ಯಭೋಜನ ಸಂಭ್ರಮಗಳಿಂದಲೂ ಕೂಡಿರುವುದು. ಅವುಗಳೆಲ್ಲವೂ ಆರಿಗೆ ಅರ್ಹವಾದುವು? ಸಂಸಾರಚಕ್ರದಲ್ಲಿ ಸಿಕ್ಕಿ, ಭೋಗಾಪೇಕ್ಷಿಗಳಾಗಿರುವ ಗೃಹಿಣೀಯರಿಗೆ

ಮಾತ್ರವೇ ತಕ್ಕವುಗಳಾಗಿರುತ್ತವೆಯೇ ಹೊರತು, ಪತಿವಿರಹಿತೆಯರಾದ ವರಿಗೆ ಯೋಗ್ಯವಲ್ಲ.

"ಏಕನಾಥನೂ, ಏಕದೈವವೂ, ಆದ ಪತಿಯ ಧ್ಯಾನದಲ್ಲಿಯೇ ನ್ಯಸ್ತಚಿತ್ತಳಾಗಿ, ಪತಿಧ್ಯಾನರೂಪವಾದ ಬಲವದ್ಯೋಗದಂಡವನ್ನು ಹಿಡಿದು, ಅದರ ಬಲದಿಂದ ಧರ್ಮಪ್ರತಿಪಾಲನಾ ಮಹತ್ಕಾರದಲ್ಲಿ ದೀಕ್ಷೆಯನ್ನು ವಹಿಸಿ ನಿಲ್ಲಬೇಕು." ಎಂದು ಹೇಳುತ್ತಿರುವ ನೀತಿಯನ್ನು ನಾವು ಏಕಾಗ್ರಚಿತ್ತದಿಂದ ಅನುಷ್ಠಾನಕ್ಕೆ ತರಬೇಕಾದುದು ನಮ್ಮ ಧರ್ಮವಾಗಿದೆ.

ಆದರೆ, ಧರ್ಮಪ್ರತಿಪಾಲನಾ ಕಾರ್ಯವು ಬಾಯಿಮಾತಿನಿಂದ ಸಾಧ್ಯವಾಗುವುದಿಲ್ಲ. ಧರ್ಮಕ್ಕೆ ಮುಖ್ಯಾಂಗಗಳಾದ ದಶಲಕ್ಷಣಗಳೂ, ತದುಪಾಶ್ರಯವಾದ ಶೀಲವೂ, ನಮ್ಮಲ್ಲಿ ಬಹು ಭದ್ರವಾಗಿರಬೇಕು. ಇವುಗಳಿಗೆಲ್ಲಕ್ಕೂ ಆಧಾರವಾದುದೇ ಪ್ರಜ್ಞೆ. ಪ್ರಜ್ಞೆಯನ್ನು ಕೆಡಿಸತಕ್ಕ ವಿಷಮಗುಣಗಳೇ ಮೇಲಿನ ವಿನೋದಗಳು. ಆದುದರಿಂದ ಸಾಧ್ಯವಾದಮಟ್ಟಿಗೂ ಮನಸ್ಸನ್ನು ವಿಕಲ್ಪಕ್ಕೆ ಗುರಿಮಾಡುವ ಚಂದ್ರಿಕಾವಿಹಾರ, ಬಹುಜನ ಸಮ್ಮೇಲನ, ಶೃಂಗಾರರಸವರ್ಣನ, ವಿರಹವರ್ಣನಾದಿಗಳ ಸನ್ನಿವೇಶದಲ್ಲಿ ಮನಸ್ಸನ್ನು ಹರಿದುಹೋಗದಂತೆ ಬಿಗಿಹಿಡಿದು, ಅಭೇದ್ಯವಾದ ವೈರಾಗ್ಯಕವಚವನ್ನು ತೊಟ್ಟು, ಸಂಕುಚಿತವಾಗಿರುವ ತಮ್ಮ ಹೃದಯವನ್ನು ಸುಜ್ಞಾನದೀಪಿಕೆಯಿಂದ ಪ್ರಕಾಶಮಾನವೂ, ವಿಸ್ತಾರವೂ ಆದುದನ್ನಾಗಿ ಮಾಡಿಕೊಳ್ಳಬೇಕೆಂಬುದೇ ನನ್ನ ಅಭಿಪ್ರಾಯ. ಮನಸ್ಸನ್ನು ಪ್ರಜ್ಞಾಪ್ರಸಾರದಿಂದ ವಿಸ್ತಾರವಾಗಿ ಮಾಡಿಕೊಳ್ಳಬೇಕಾದರೆ ವಿದ್ಯಾಭ್ಯಾಸವು ಮುಖ್ಯವಾದುದು. ವಿದ್ಯೆಯೆಂದರೆ, ಬರಿಯ ಓದು ಬರಹಗಳು ಮಾತ್ರವಲ್ಲ. ಭಗವದ್ಗುಣ—ಸ್ವರೂಪ ಸಂಬಂಧಗಳ ಅನುಭವವನ್ನುಂಟುಮಾಡಿ ಕೊಡಬಲ್ಲ ದಿವ್ಯಜ್ಞಾನವು! ಇದನ್ನೇ ಸದಸದ್ವಿವೇಕ—ವಿಜ್ಞಾನವೆಂದೂ ಹೇಳುವರು. ಇಂತಹ ವಿದ್ಯೆಯು ಗುರುಜನರ ಅನುಗ್ರಹರೂಪವಾದ ಸುಶಿಕ್ಷಣದಿಂದಲೇ ನಮಗೆ ಲಭಿಸಬೇಕಲ್ಲದಾಗದು.

ವಿದ್ಯಾಲಾಭವನ್ನು ಹೊಂದುವುದಕ್ಕೆ ಮೊದಲು ನಾವು ನಮ್ಮ ಕರ್ತವ್ಯಕರ್ಮದಲ್ಲಿ ಕೃತಾರ್ಥರಾಗಬೇಕೆಂದರಾಗಲೀ, ಇಲ್ಲವೆ ನಮ್ಮ ರಾಗಕ್ಲೇಶಗಳ ಬಂಧನದಿಂದ ಬಿಡುಗಡೆಯಾಗಬೇಕೆಂದರಾಗಲೀ ಸಾಧ್ಯವಿಲ್ಲ. ಮನಶ್ಶಾಂತಿಯನ್ನು ಹೊಂದದೆ ನಾವು ಮೇಲೆ ಹೇಳಿರುವ ಭಗವದುದ್ದೇಶವಾದ ಧರ್ಮ ಪ್ರತಿಪಾದನದಲ್ಲಿ ಎಂದಿಗೂ ಅರ್ಹರಾಗಲಾರೆವು.

ಎಂದರೆ, ವಿದ್ಯಾಲಾಭಕ್ಕಾಗಿ ದೇಶಾಂತರಗಮನವನ್ನೂ, ಸ್ಥಾನಾಂತರ ಗಮನವನ್ನೂ ಮಾಡಬೇಕೆಂಬುದು ನಮ್ಮ ಅಭಿಪ್ರಾಯವಲ್ಲ. ತಕ್ಕಮಟ್ಟಿಗೂ ಅದನ್ನು, ಎಂದರೆ-ಪರಸ್ಥಳಗಮನ-ಪ್ರವಾಸಾದಿಗಳನ್ನು ತ್ಯಾಗಮಾಡಬೇಕೆಂಬುದು ನಮ್ಮ ಮತವು. ಹಾಗಾದರೆ ವಿದ್ಯಾಭ್ಯಾಸವನ್ನೇ ಬಿಟ್ಟುಬಿಡಬೇಕಾಯಿತೆಂದು ಭಾವಿಸಬಾರದು. ನಾವು ಇದ್ದೆಡೆಯಲ್ಲಿದ್ದು, ತಮ್ಮ ಹಿರಿಯರ, ಪೋಷಕರ, ಕರ್ತರ, ಮತ್ತು ಹಿತಚಿಂತಕರ ನೈತಿಕ ಶಿಕ್ಷಣಕ್ಕೊಳಪಟ್ಟು, ನಮ್ಮ ಸ್ತ್ರೀ ಜಾತಿಗೆ ಉಚಿತವಾಗಿ ನೇಮಿಸಲ್ಪಡುವ ಕಾರ್ಯಗಳನ್ನು ಕ್ಲಿಪ್ತಕಾಲಗಳಲ್ಲಿ ನೆರವೇರಿಸುತ್ತ ನಿರಲಸತೆಯಿಂದ ತಮ್ಮ ವಿರಾಮಕಾಲಗಳಲ್ಲಿ ತಮ್ಮ ಅಭ್ಯಾಸವನ್ನು ಎಂದರೆ-ಮತಧರ್ಮ, ಪ್ರಾಪಂಚಿಕ ಸ್ಥಿತಿಗತಿ, ದೇಶಾಚಾರಪದ್ಧತಿ, ಸಮಾಜದ ಭದ್ರತೆ ಇತ್ಯಾದಿಗಳಿಗೆ ಸಂಬಂಧಪಡುವ ವಿಚಾರಗಳನ್ನು ಗುರುಜನರ ಉಪದೇಶ-ಆಶೀರ್ವಾದಗಳಿಂದ ಸಂಗ್ರಹಿಸಿ, ಅವುಗಳಲ್ಲಿ ತಮ್ಮ ನಡೆನುಡಿಗಳಿಗೆ ಆವಶ್ಯಕವಾದುವುಗಳನ್ನು ರೂಢಿಗೆತರಬೇಕಾದುದೇ ನಮ್ಮ ಅಭ್ಯಾಸವೂ, ವಿದ್ಯಾಲಾಭವೂ ಆಗಿರುವುದು. ಹಾಗಿಲ್ಲದೆ ವಿದ್ಯಾಭ್ಯಾಸವೇ ಆವಶ್ಯಕವೆಂದು ಸಲ್ಲದಭಿಮಾನವನ್ನು ಹಚ್ಚಿಕೊಂಡು, ಸ್ತ್ರೀ ಜಾತಿಗುಚಿತವಾದ ಗೃಹಕಾರ್ಯಗಳನ್ನು ಮಾಡದೆ ಅವುಗಳ ವಿಷಯದಲ್ಲಿ ಅಲಸಿಕೆಯನ್ನು ಹೊಂದಿ, ಓದು ಬರೆಹಗಳಲ್ಲಿಯೇ ಕುಳಿತರೆ, ತಳಹದಿಯನ್ನು ಬಲಪಡಿಸದೆ ಎತ್ತಿದ ಗೋಡೆಯಂತೆ, ಅತ್ಯಲ್ಪಕಾಲದಲ್ಲಿಯೇ ನಮ್ಮ ಕೃತಿಯು ನಷ್ಟವಾಗಿ ಹೋಗುವುದಲ್ಲದೆ ಪ್ರಯತ್ನಕಾರ್ಯವು ಹೇಗೂ ಫಲಕಾರಿಯಾಗುವುದಿಲ್ಲ.

ನಮ್ಮ ವಿದ್ಯಾಭ್ಯಾಸ ವಿಚಾರಕ್ಕೆಂದರೆ, ನಮಗೆ ದೊರೆಯುವ ಸರಿಯಾದ ವಿರಾಮಕಾಲವೆ ನಮಗೆ ಸಕಾಲವಾಗಿಯೂ, ಆತ್ಮಾನಂದದ ಮನೋಲ್ಲಾಸಕ್ಕೆ ಸಾಧನವಾಗಿಯೂ ಇರುವುದು. ಹಾಗೂ, ವಿದ್ಯಾಭ್ಯಸನ ವ್ಯಸನಿಗಳಾಗಿರುವ ನಮ್ಮ ಆಗಿನ ಕರ್ತವ್ಯವೇನೆಂಬುದನ್ನು ಭದ್ರವಾಗಿ ತಿಳಿದಿರಬೇಕು. ಇಲ್ಲಿ ಕರ್ತವ್ಯವೆಂದರೆ, ನಮಗೆ ಮತ್ತಾವುದೂ ಅಲ್ಲ. ನಾವು ಮಾಡುವುದು ಶಿಷ್ಯವೃತ್ತಿ; ಗುರುಕುಲವಾಸದಲ್ಲಿ ಶಿಷ್ಯರಿಗೆ ಬ್ರಹ್ಮಚರ್ಯೆಯು ಏಕನಿಷ್ಠೆಯೇ ಆಲಂಬವು. ಅಂತಹ ಪ್ರತಿಭಾಪೂರ್ಣವಾದ ಬ್ರಹ್ಮಚರ್ಯೆಯನ್ನು ವಿದ್ಯಾರ್ಥಿನಿಯರು, ಅದರಲ್ಲಿಯೂ-ಪತಿವಿಯೋಗಿನಿಯರಾಗಿರುವ ನಾವು, ತ್ರಿಕಾಲ (ಪ್ರಾತಸ್ಸಂಧ್ಯಾರಾತ್ರಿ) ತ್ರಿಕರಣ, [ಕಾಯವಾಙ್ಮಾನಸ] ಅವಸ್ಥಾತ್ರಯ [ಜಾಗ್ರತ್ಸ್ವಪ್ನಸುಷುಪ್ತಿ] ಗಳಲ್ಲಿಯೂ ಪರಿಶುದ್ಧವಾಗಿ ಕಾಪಾಡಿಕೊಂಡು ಬರಬೇಕಾದುದು ನಮ್ಮ ಆದ್ಯಕರ್ತವ್ಯಕರ್ಮವಾಗಿರುವುದು.

ಇಂತಹ ಬ್ರಹ್ಮಚರ್ಯೆಗೆ ನಮ್ಮಲ್ಲಿ ಮಿತಾಹಾರ, ಮಿತಭಾಷಣ, ಮಿತನಿದ್ರೆ ಎಲ್ಲವೂ ಮಿತವಾಗಿರಬೇಕು. ಮನಸ್ಸನ್ನು ಕೆಡಿಸತಕ್ಕ ನೋಟ, ಕೂಟ, ಊಟ, ಆಟ, ಪಾಟಗಳಿಗೆ ನಾವು ತಿರುಗಿ ನೋಡುವುದಾದರೂ ಸರಿಯಲ್ಲ. ಮತ್ತೂ, ಈ ನಮ್ಮ ಅಭ್ಯಾಸದಲ್ಲಿ, ನಮ್ಮ ಭಾವನೆಗೆ, ನಮ್ಮ ಸ್ವಾಮಿಯು ಮುಖ್ಯಗುರುಪೀಠದಲ್ಲಿರುವರೆಂಬುದು ಖಚಿತವಾಗಿರಬೇಕಲ್ಲದೆ, ಇತರ ನಮ್ಮ ಉಪದೇಶಕರೂ, ಹಿತಬೋಧಕರೂ, ಶಿಕ್ಷಕರೂ ಆದ ಪುರುಷ ಬಾಂಧವರನ್ನು ನಮ್ಮ ಪಿತೃ ಭ್ರಾತೃವರ್ಗದಲ್ಲಿ ಸೇರಿದವರೆಂಬ ಶುದ್ಧಭಾವನೆಯು ದೃಢವಾಗಿರಬೇಕು.

ಸ್ವಾಮಿಯು ಅಳಿದಮೇಲೆ ಅವನನ್ನು ಗುರುಪೀಠದಲ್ಲಿ ಪ್ರತಿಷ್ಠಿಸುವುದು ಹೇಗೆಂದು ಆಕ್ಷೇಪವಿರಬಹುದು ! ಹಾಗೆಂದಿಗೂ ಭಾವಿಸಬಾರದು. ಆತನು ತನ್ನ ಸ್ಥೂಲದೇಹಕ್ಕೆ [ಭೌತಿಕದೇಹ] ಅವಸಾನ [ಕೊನೆಗಾಲ] ಕಾಲವುಂಟಾದುದರಿಂದ ಆ ಜೀರ್ಣದೇಹವನ್ನು ಬಿಟ್ಟು, ದಿವ್ಯದೇಹ [ಜ್ಞಾನರೂಪ] ಧಾರಣದಿಂದ ನಮ್ಮ ಅಂತರಿಂದ್ರಿಯಗಳಿಗೆ ಗಮ್ಯನಾಗಿ,

ಆತ್ಮನೊಡನೆ ಐಕ್ಯಭಾವವನ್ನು ಹೊಂದುವನು. ಅಂತಹ ಜ್ಯೋತಿಸ್ಸ್ವರೂಪ ನಾದ ಆತನು ನಮ್ಮಲ್ಲಿಯೇ ಸೇರಿರುವನೆಂಬುದಕ್ಕೆ ಉದಾಹರಣವು ಬೇಕಾದರೆ, ಕ್ಷಣಮಾತ್ರವಾದರೂ ಆ ನಮ್ಮ ಭಗಿನಿಯರು ತಮ್ಮ ತಮ್ಮ ಗತಿಸಿದ ಅರಸರನ್ನು ಧ್ಯಾನಮಾಡಿದರೆ-ಇಲ್ಲವೆ – ಸ್ಮರಣ, ಗುಣಕಥನ ಮಾಡಿದರೆ ಸಾಕು; ಅದರಿಂದ ಅವರ ದೇಹದಲ್ಲಿ ಶಕ್ತಿಯು ಇಮ್ಮಡಿ ಯಾಗಿಯೂ, ಮನಸ್ಸು ತೆರೆದು ದೊಡ್ಡಪಾತ್ರದಂತೆಯೂ ಆಗುವುದನ್ನು ಅವರು ಅನುಭವಮಾಡಿಕೊಳ್ಳಬಹುದು. ಹಾಗಾಗುವುದರ ಅರ್ಥ ವೇನು? ಆತನು ನಿಮ್ಮ ಕೈಬಿಟ್ಟು ಹೊರಟೇಹೋಗಿದ್ದರೆ ನಿಮಗೆ ಹೀಗಾಗಲು ಕಾರಣವೆಲ್ಲಿ? ಆತನು ನಿಮ್ಮಲ್ಲಿಯೇ ಸೇರಿ, ನಿಮ್ಮ ಸದಾ ಚಾರ, ಸುಕೃತಗಳಿಗೆ ಸಹಭಾಗಿಯಾಗಿ ಸುಖಾನುಭವ ಮಾಡುವುದರಲ್ಲಿ ರುವದರಿಂದಲ್ಲವೆ, ನಿಮಗಾ ಪರಿವರ್ತನಾಸ್ಥಿತಿಯಾಗುವುದು? ಹಾಗೆ ಆತನನ್ನು ನೀವು ನೋಡಿ ನಲಿಯಬೇಕಾದರೆ, ನಿಮ್ಮ ನಿಷ್ಕಲ್ಮಷ ಹೃದ ಯದ ಜ್ಞಾನ ಚಕ್ಷುಸ್ಸಿನಿಂದ, ದೈವಿಕಪ್ರೇಮಪ್ರೇಷಿತವಾದ ಭಾವನಾ ಶಕ್ತಿಯನ್ನು ಹೊಂದಿ ಅಂತರಿಂದ್ರಿಯವನ್ನೂ ವಿಸ್ತಾರವಾಗಿ ಮಾಡಿ, ಬಳಿಕ ಆ ತೇಜೋರೂಪವನ್ನು ನೋಡಬೇಕಲ್ಲದೆ ಮೊದಲು ನೋಡ ಬೇಕೆಂದು ಆಶೆಪಟ್ಟಮಾತ್ರದಿಂದ ನೋಡಲಾಗುವುದೇ?

ಸ್ತ್ರೀ ಜನಕ್ಕೆ ಸಹಕಾರಪಾತ್ರವಾದ ಸ್ವಾಮಿಯ ಸಾಕ್ಷಾತ್ಕಾರ ಲಾಭವನ್ನು ಹೊಂದುವುದಕ್ಕೆ ಮೊದಲು – ನಮ್ಮ ಇತಿಕರ್ತವ್ಯವೂ ಆ ಭಗವಂತನ ಉದ್ದೇಶವೂ, ಸಾರ್ಥಕವಾಗುವುದೆಂಬುದು ಸುಳ್ಳು. ನಮ್ಮ ಅಂತರ್ಗತನಾಗಿರುವ ಸ್ವಾಮಿಯ ಸಮಾಸೀನಭಾವವನ್ನು ಹೊಂದಿದಲ್ಲದೆ, ನಮ್ಮ ಸ್ತ್ರೀ ಜನ್ಮಧಾರಣೆಯ ಪಾರಮಾರ್ಥವು ಸಿದ್ಧಿ ಯಾಗಲಾರದು. ಮತ್ತು ಸ್ವಾಮಿಯ ಸಾಮೀಪ್ಯ-ಸಾರೂಪ್ಯಗಳ ನಿಜ ತತ್ತ್ವ ವನ್ನು ತಿಳಿದಲ್ಲದೆ ಧರ್ಮೋಜ್ಜೀವನ ಮಹತ್ಕಾರ್ಯದ ಉನ್ನತಾ ಸನದ ಬಳಿಸಾರುವುದಕ್ಕಾದರೂ ನಮಗೆ ಅರ್ಹತೆಯುಂಟಾಗುವುದಿಲ್ಲ. ಆ ಸ್ವಾಮಿಯ ಅನುಗ್ರಹವೊಂದಲ್ಲದೆ ನಮ್ಮನ್ನು ಈ ಘೋರಭವಸಾಗರ

ದಿಂದ ಉದ್ಧರಿಸುವುದಕ್ಕೆ ಮತ್ತಾವುದೂ ಶಕ್ತವಾಗುವುದಿಲ್ಲ. ಇದು ಖಂಡಿತವಾದಮಾತು !!!

ಪ್ರಿಯಭಗಿನಿಯರೇ !

ಇಲ್ಲಿಯವರೆಗೆ ತತ್ವವಿಚಾರವನ್ನು ವಿಮರ್ಶಿಸಿದಂತಾಯಿತು. ಇನ್ನು ನಮ್ಮ ಆ ದೀನ-ದುಃಖಿ-ಭಗಿನಿಯರ ವಿಷಯದಲ್ಲಿ, ಆ ನಮ್ಮ ಧರ್ಮಬಾಂಧವರು ಮತ್ತು ದೇಹಾನುಬಂಧಿಗಳು ವಹಿಸಿರುವ ನಿಷ್ಠುರ-ಕಾಠಿಣ್ಯ-ಪ್ರಕೃತಿಗಳನ್ನು ಕುರಿತು ಒಂದೆರಡು ಮಾತನ್ನು ಹೇಳಬೇಕೆಂಬ ಇಷ್ಟವುಂಟು. ಏಕೆಂದರೆ-ಆ ನಮ್ಮ ಭಗಿನೀ ಬಂಧುಗಳ ವಿಚಾರವಿಮರ್ಶನಾಶೂನ್ಯತೆಯ ಅಂಥ ಹೃದಯಕ್ಕೆ ಆ-ಅಭಾಗಿನೀ ಭಗಿನಿಯರ ಈ ಅನುಭವಪ್ರಾಪ್ತಿವಿಷಯವಾದ ಪಾರಮಾರ್ಥಿಕಜ್ಞಾನವು ಅಪಿಷ್ಟಾಗಿ ತಿಳಿದಿದ್ದರೂ, ಅವರು ಇಷ್ಟು ನಿಷ್ಠುರರಾಗಿ, ಮಕ್ಕಳೆನ್ನದೆ, ಅಕ್ಕ ತಂಗಿಯ್ರೆನ್ನದೆ, ತಾಯಿಯರೆನ್ನದೆ, ಎಲ್ಲರನ್ನೂ ನಿರ್ದಯೆಯಿಂದ, ಸಮಾಜಶಾಸನವೆಂದು ಹೇಳಿಸಿಕೊಳ್ಳುವ ದಾರುಣವಾದ ಕಷ್ಟ-ಕ್ಲೇಶ-ಕರಗಳಾದ ಶಿಕ್ಷೆಗಳಿಗೆ ಗುರಿಪಡಿಸಿ, ಅವರ ಬುದ್ಧಿ ಶಕ್ತಿ,ಮೇಧಾಶಕ್ತಿಗಳನ್ನೂ, ಅವರ ನೈಸರ್ಗಿಕ ಗುಣವಾದ ಕೋಮಲತೆಯನ್ನೂ, ಕಡೆಗೆ ಸರ್ವೋತ್ಕೃಷ್ಟವಾದ ಅವರ ಸೌಶೀಲ್ಯವನ್ನೂ ಹೀಗೆ ಹಾಳುಮಾಡುತ್ತಿರಲಿಲ್ಲ. ಮುಖ್ಯವಾಗಿ ಅವರಲ್ಲಿ ಈ ಬಗೆಯ ನಿಷ್ಠುರತೆಯುಂಟಾಗುವುದಕ್ಕೆ ಕಾರಣವೇನೆಂದು ವಿಚಾರಮಾಡಿದರೆ-ನಮ್ಮವರಲ್ಲಿ ಉಚ್ಛೃಂಖಲ ಪ್ರವರ್ತನೆಯಿಂದ ಅತ್ಯಾಚಾರಕ್ಕೆರಗಿರುವ ಕೆಲವು ಮಂದಿ ವಿತಂತು ಭಗಿನಿಯರ ವಿಷಮವಿಲಾಸದ ವಿಪರೀತ ಪರಿಣಾಮವೇ ಇದೆಂದು ಹೇಳಬಹುದಾಗಿದೆ.

ಹೆಚ್ಚೇಕೆ? "ಒರ್ವಸ್ತ್ರೀಯ ಅಕಾರ್ಯದಿಂದ ಅವಳ ಕುಲಕೋಟಿಯೂ ಕೆಡುನುಡಿಗೆ ಬಲಿಬೀಳುವುದೆಂಬಂತೆ," ಅಶಿಕ್ಷಿತೆಯರಾಗಿ ಉನ್ಮಾದದಿಂದ ದಾರಿತಪ್ಪಿಹೋಗಿ-ಹೋಗುತ್ತಿರುವ ಕೆಲವರಿಂದ ನಮ್ಮ ಜನಾಂಗವೇ ತಲೆಬಾಗುವದುಸ್ಸ್ಥಿತಿಗೂ, ಸಹಾಯಶೂನ್ಯರಾಗಿ, ಅಡಿಗಡಿಗೂ ಕಷ್ಟ, ನಷ್ಟ, ನಿಷ್ಠೂರಗಳ ತೊಡರಿಗೆ ತೊಡಕಿ ಬೀಳುತ್ತಳುತ್ತಿರುವಂ

ತಹ ದೌರ್ಭಾಗ್ಯದೆಸೆಯೂ ಪ್ರಾಪ್ತವಾಗಿದೆ. ಮಾಡುವುದೇನು ? ಪರಮಾತ್ಮನನ್ನು ಕಾಡಿಬೇಡುವುದೊಂದೇ ಉಳಿದಿರುವುದು.

ಪ್ರಿಯಭಗಿನಿಯರೇ !

ಇಷ್ಟಕ್ಕೆ ವಿವರವು ಸಾಕು ; ಕಾಡುವವರೆಲ್ಲರೂ ಮನದಣಿವಂತೆ ನಮ್ಮನ್ನು ಕಾಡಿನೋಡಿ ನಲಿದಾಡಲಿ! ಆದರೆ ನಾವುಮಾತ್ರ, ಅವರಿಗೆ ಪ್ರತಿಭಟಿಸದೆ, ಅವರ ಕಾಟಗಳು ಹೆಚ್ಚಿದಷ್ಟೂ, ಪರಮಾತ್ಮನಲ್ಲಿ ನಮ್ಮ ಸತ್ವಪರೀಕ್ಷೆಯೂ ಬಲೀಯವಾಗುತ್ತ ಬಂದು, ಕಾರ್ಯಸಿದ್ಧಿಯನ್ನು, ಎಂದರೆ-ಧರ್ಮೋಜ್ಜೀವನದ ಫಲಸ್ವರೂಪವಾದ ಬ್ರಹ್ಮಾನಂದ ಲಾಭವನ್ನು ಹೊಂದಲು ಕಾರಣವಾಗುವುದೆಂಬ ಭರವಸೆಯು, ನಮ್ಮಲ್ಲಿ ದೃಢವಾಗಿರಲಿ ! ಶಾಂತಿಬ್ರಹ್ಮದಂಡದಿಂದ ನಮ್ಮನ್ನು ಪ್ರತಿಭಟಿಸುವ ಪರಿಪರಿ ವಿಘ್ನಗಳನ್ನೂ ನಿರಾಯಾಸವಾಗಿ ಜಯಿಸಿ, ಪ್ರಾಪ್ಯಸ್ಥಾನವನ್ನು ಸೇರುವಂತೆ ಮಾಡುವ ಬ್ರಹ್ಮಚರ್ಯವ್ರತವು, ನಮ್ಮಿಂದ ಅವ್ಯಾಹತವಾಗಿ ನಡೆಯಿಸಲ್ಪಡುವಂತೆ ಭಗವಂತನು ಅನುಗ್ರಹಿಸಲಿ !! ನಮ್ಮ ಮನೋಯೋಗ, ಅಭ್ಯಾಸಯೋಗಗಳಿಂದಲೂ, ಪರಮಾತ್ಮನ ಪರಮಾನುಗ್ರಹದಿಂದಲೂ, ಮೊದಲು ನಾವು ಭೀತರಾಗಿದ್ದ ಕಾಲದಲ್ಲಿ, ನಮ್ಮನ್ನು ನೀಚಭಾವನೆಯಿಂದ ಕಾಣುತ್ತಿದ್ದ ನಮ್ಮ ಇತರ ಬಂಧು ಭಗಿನಿಯರು ಕೂಡ, ಪಶ್ಚಾತ್ತಾಪ ಹೊಂದಿ, ನಮ್ಮ ಗುರುಕುಲವಾಸಕ್ಕೂ, ದೇಶಸೇವೆಗೂ ಸಹಾನುಭೂತಿಯನ್ನು ತೋರಿಸುವಂತಾಗಲಿ!!! ಮತ್ತೇನು? ಇಷ್ಟಾದರೆ ಸಾಕು, ಜ್ಞಾನಶೂನ್ಯರಾಗಿ, ಲಜ್ಜಾಮಾನಭಯಗಳನ್ನು ತೊರೆದು, ಪತ್ರಿಕಾಮುಖದಿಂದ <u>ವಿಧವಾ ವಿವಾಹಾದಿ</u> ತಮ್ಮ ಸ್ವೈರಾಲಾಪಕ್ಕೆ ಬೆಲೆಯನ್ನು ಕಟ್ಟಬೇಕೆಂದಿರುವ ಯುವತಿಯರ ವಿಷಮಸನ್ನಿಪಾತ ರೋಗಕ್ಕೆ ಇದೇ ಗಂಡುಮದ್ದಾಗಿ ತಿರುಗುವುದೆಂಬ ಭರವಸೆಯುಂಟು. ಭಗವಂತನು ನಮ್ಮ ಭರವಸೆಗೆ ಭಂಗತಾರದೆ, ಭಕ್ತಭರಣನೆಂಬ ಮಾತನ್ನು ಸ್ಪಷ್ಟಪಡಿಸಿ, ನಮ್ಮಲ್ಲಿ ಸರ್ವದಾ ಅನುಗ್ರಹಿಸುತ್ತಿರಲೆಂದು ಅನನ್ಯ ಭಕ್ತಿಭಾವದಿಂದ ಬೇಡುತ್ತಿರುವ,

ತಮ್ಮೆಲ್ಲರ ಅಭ್ಯುದಯಾ ಕಾಂಕ್ಷಿಣಿಯಾದ,

ಭಗಿನಿ-(ವಿದ್ಯಾರ್ಥಿನಿ)

|| ಓಂಶ್ಯಾಂತಿ ಶ್ಯಾಂತಿ ಶ್ಯಾಂತಿಃ ||

—(ಕೃಷ್ಣಾರ್ಪಣಂ)—

ಪ್ರಸ್ತಾವನೆ.

ಸೋದರಿಯರೇ !

ಸುಮುಖೀವಿಜಯದ ಪ್ರಸ್ತಾವನವನ್ನು ಅವಲೋಕಿಸಿದರೆ ಈ ಚಂದ್ರವದನಾ ಕಥಾನಕದ ವಿಷಯವು ನಿಮಗೆ ತಿಳಿದು ಬರುವುದಾದುದರಿಂದ ಇಲ್ಲಿ ಮತ್ತೆಯೂ ಅದನ್ನು ಎತ್ತಿ ಹೇಳುವುದು ಪುನರುಕ್ತಿಯೆಂದು ಬರೆಯಲಿಲ್ಲ. ಕ್ಷಮೆಯಿರಲಿ.

ಈ ಕಥೆಯು 5 ಪುಟಗಳಷ್ಟೇ ಚಿಕ್ಕದಾಗಿದ್ದು, ಇದು ಭಾರತದಲ್ಲಿ ಅದೆಲ್ಲಿ ಬಂದಿರುವುದೆಂಬುದಿನ್ನೂ ಗೋಚರಕ್ಕೆ ಬಾರದಿದ್ದರೂ, ಇದು ನಮ್ಮ ಸ್ತ್ರೀಸಮುದಾಯಕ್ಕೆ, ಮುಖ್ಯವಾಗಿ ತಿಳಿಗಣ್ಣಳನ್ನು ತೆರೆಯಲುಳ್ಳ ಬಾಲಿಕಾನಿವಹಕ್ಕೆ ಅತ್ಯಂತ ಸಹಕಾರಿಯಾಗುವುದೆಂಬುದನ್ನು ಸ್ವಾನುಭವದಿಂದ ತಿಳಿದು, ಭಗವತ್ಪ್ರೇರಣೆಯ ಮೇಲೆ ಇದನ್ನು ಐದು ಅಂಕಗಳಾಗಿ ವಿಭಾಗಿಸಿ, ನಮ್ಮ ಬಾಲಕಿಯರ ಶಿಕ್ಷಣವು ಯಾವರೀತಿಯದಾಗಿರಬೇಕೆಂಬುದನ್ನೂ, ತಾಯಿ ತಂದೆಗಳು ಮಕ್ಕಳ ವಿಚಾರದಲ್ಲಿ ಹೇಗೆ ವರ್ತಿಸಬೇಕೆಂಬುದನ್ನೂ ತಕ್ಕಮಟ್ಟಿಗೂ ಕ್ರೋಢೀಕರಿಸಿ, ಅಲ್ಲಲ್ಲಿ ಸವಿತೋರಿದೆಡೆಗಳಲ್ಲಿ ಒಂದೆರಡು ಹಾಡುಗಳನ್ನೂ ಸೇರಿಸಿ-ಬರೆದಿರುವುದು. ಉಳಿದಲೋಪಗಳಿದ್ದರೆ, ಪ್ರಾಜ್ಞರು ಎಚ್ಚರಿಸಿ ನನ್ನ ಕೃತಜ್ಞತಾಪೂರ್ವಕ ಧನ್ಯನಾದಗಳನ್ನು ಸ್ವೀಕರಿಸಬೇಕೆಂದು ಕೋರುವೆನು.

ನಾಟಕರೂಪದಲ್ಲಿ ತಕ್ಕಮಟ್ಟಿಗೂ ಸತೀತ್ವದ ಮಹತ್ವವನ್ನು ಪ್ರದರ್ಶಿಸುತ್ತಿರುವ ಈ ಗ್ರಂಥಾವಲೋಕನದಿಂದ ನಮ್ಮ ಸೋದರೀವರ್ಗಕ್ಕೆ ಅಷ್ಟಿಷ್ಟಾದರೂ ಉಪಯೋಗ ಅಥವಾ ಗುಣಾಂಶಗಳು ಕಂಡುಬಂದು, ಅವರಿಂದ ಅನುಕರಣೀಯಗಳೆನ್ನಿಸಿಕೊಂಡರೆ ಅದೇ ನನ್ನ ನಿರ್ದಿಷ್ಟಫಲವೆಂದು ತಿಳಿದು ಆನಂದಿಸುವೆನು.

ಇನ್ನು ಈ ಗ್ರಂಥವಿಲೇಖನ ಕಾರ್ಯದಲ್ಲಿ ನನಗೆ ಕಾಲೋಚಿತಸೂಚನೆಗಳಿಂದ ಪ್ರೋತ್ಸಾಹಿಸುತ್ತಿರುವ ನಮ್ಮ ಧರ್ಮಭ್ರಾತೃಭಗಿನೀಸ್ತೋಮಕ್ಕೂ, ಇದರ ಪರಿಷ್ಕರಣ ಮುದ್ರಣ ಪ್ರಕಟನಾದಿಗಳಿಂದ ನನ್ನನ್ನು ಸೇವಾಕಾರ್ಯದಲ್ಲಿ ವಿಶೇಷವಾಗಿ ಹುರುಡಿಸುತ್ತಿರುವ ಹಿತೈಷಿಣಿಗೂ, ಮತ್ತು ಮಾತೃಮಂದಿರಾವಾಸಿಗಳಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದಲ್ಲದೆ, ಮಾತೃಕೃಪೆಯೂ, ನಿಮ್ಮ ಸಹಾನುಭೂತಿಯೂ-ಧರ್ಮಬಾಂಧವರ ಕಾಲೋಚಿತಸಹಾಯವೂ ಬಲವಾಗಿದ್ದರೆ, ಇನ್ನು ಮುಂದೆ ನಮ್ಮ ಕರ್ಣಾಟದ ಪರಿಸ್ಥಿತ್ಯನುಗುಣವಾದ ಸಾಮಾಜಿಕ ವಿಚಾರದ ಲೇಖನವನ್ನೂ ಕೈಕೊಳ್ಳಬೇಕೆಂದಿರುವದನ್ನು ನಿವೇದಿಸಲು ಸಂತೋಷಪಡುವೆನು. ಈ ನನ್ನ ಇಂದಿನ ಸಂತೋಷಕ್ಕೆ ಪರಮಾತ್ಮನು ಮತ್ತಾವವಿಧವಾದ ಭಂಗವನ್ನೂ ಉಂಟುಮಾಡದೆ ಪೋಷಿಸುತ್ತ ಬರಬೇಕೆಂದು ಕೋರುತ್ತ ಈ ಲೇಖನವನ್ನು ಇಲ್ಲಿಗೆ ವಿರಮಿಸುವೆನು.

ಗುರುವಾರೈಕಾದಶಿ
ವ|| (ಶಾ|| ಬ|| ಏಕಾದಶಿ)
ಮಾತೃಮಂದಿರಂ
ನಂಜನಗೂಡು.

ಇತಿ—(ಶ್ರೀಪಾದರೇಣು)

ಶ್ರೀ

ನಾಟಕದಲ್ಲಿಯ ಪ್ರಧಾನಪಾತ್ರಗಳು

ಹೆಸರು.	ವಿವರ.
1 ಸತ್ಯವರ್ಮರಾಯ	(ಕಾಶ್ಮೀರದೇಶಾಧಿಪತಿ; ಚಂದ್ರವದನೆಯ ತಂದೆ)
2 ವಿಂದಾಖ್ಯ	(ಆಂಧ್ರದೇಶದಯುವರಾಜ; ಚಂದ್ರವದನೆಯಸ್ವಾಮಿ)
3 ಆಂಧ್ರರಾಜ	(ವಿಂದಾಖ್ಯನ ತಂದೆ)
4 ಪಾಂಚಾಲರಾಜ	(ಚಿತ್ರಕಲೆಯ ತಂದೆ)
5 ಭೃಗುಮಹರ್ಷಿ	(ಚಂದ್ರವದನೆಯ ಗುರು)
6 ಅಮಾತ್ಯಶೇಖರ	(ಸತ್ಯವರ್ಮರಾಯನ ಮಂತ್ರಿ)
7 ಕಂಕಭಟ್ಟ	(ಸತ್ಯವರ್ಮರಾಯನ ಪುರೋಹಿತ)
8 ವಿನಯಂಧರ	(ಸತ್ಯವರ್ಮರಾಯನ ಕಂಚುಕಿ)
9 ದೇವರಾಜ	(ಇಂದ್ರ)
10 ಚಿತ್ರಸೇನ	(ಇಂದ್ರಸಭೆಯ ಗಾಯನಶಿಕ್ಷಕ)
11 ಚಂದ್ರವದನಾ	(ಕಥಾನಾಯಕಿ; ಸತ್ಯವರ್ಮರಾಯನ ಪುತ್ರಿ)
12 ಸುಪ್ರಭಾ	(ಚಂದ್ರವದನೆಯ ತಾಯಿ; ಸತ್ಯವರ್ಮನ ಮಹಿಷಿ)
13 ಚಿತ್ರಕಲೆ	(ವಿಂದಾಖ್ಯನ ಜ್ಯೇಷ್ಠಪತ್ನಿ; ಪಾಂಚಾಲ ರಾಜಪುತ್ರಿ)
14 ಸುನೀತೆ 15 ವಿನೀತೆ	(ಚಂದ್ರವದನೆಯ ಸಖಿಯರು)

(ಇವರಲ್ಲದೆ ಬ್ರಾಹ್ಮಣರು, ರಾಜಪುತ್ರರು, ಸೇನಾಪತಿ, ಸೇವಕರು, ಮಹರ್ಷಿಗಳು, ರಂಭಾದಿ ಅಪ್ಸರಸಿಯರು ಮೊದಲಾದವರೂ ಬರುವರು)

ಮುಖ್ಯಮುಖ್ಯ ಸ್ಥಾನಗಳು

ಪ್ರಥಮಾಂಕದಲ್ಲಿ:—ಸತ್ಯವರ್ಮರಾಯನ ಆಲೋಚನಾಮಂದಿರ ಮತ್ತು ಚಂದ್ರವದನೆಯ ಸೇವಾಮಂದಿರವು

ದ್ವಿತೀಯಾಂಕದಲ್ಲಿ:—ರಾಜಬೀದಿಯ ಮಹಾದ್ವಾರ; ಚಂದ್ರವದನೆಯ ಸ್ವಯಂವರ ಮಂಟಪವು.

ತೃತೀಯಾಂಕದಲ್ಲಿ:—ಚಂದ್ರವದನೆಯ ಅಂತಃಪುರ, ಸತ್ಯವರ್ಮರಾಯನ ಶಯನಾಗಾರ, ಮತ್ತು ಚಂದ್ರವದನೆಯ ಶಯನಾಗಾರ

ಚತುರ್ಥಾಂಕದಲ್ಲಿ: —ಪಾಂಚಾಲದೇಶದ ಸಮೀಪದ ಮಂದಾರವನ; ಮಕರಂದಮಂಟಪ ಮತ್ತು ಸೇನಾಪತಿಯ ಬಿಡಾರ.

ಪಂಚಮಾಂಕದಲ್ಲಿ;—ದೇವರಾಜನ ಸಭೆ,ರಂಭಾದ್ಯಪ್ಸರಸಿಯರ ಕ್ರೀಡಾಗಾರದ ಗುಪ್ತಗೃಹ, ಮಕರಂದ ಮಂಟಪದಲ್ಲಿ ಚಂದ್ರವದನೆಯ ಸಮಾಧಿಮಂದಿರ–ಮೊದಲಾದುವು.

——o——

ಶ್ರೀ

ಕಥಾಸಾರಾಂಶವು.

ಪ್ರಥಮಾಂಕವು. 1—24

ಸತ್ಯವರ್ಮನ ಚಿಂತೆ - ಅಮಾತ್ಯನ ಹಿತ ಸೂಚನೆ. ಕನ್ಯಾಪಿತೃತ್ವದ ಉತ್ತರವಾದಿತ್ವ, ತಾಯಿತಂದೆಗಳ ಕರ್ತೃತ್ವದ ಸಾರ್ಥಕತೆಯ ವಿಚಾರ, ಭೃಗುಮುನಿಯ ಆಗಮನ, ರಾಜನ ದೈನ್ಯಪ್ರಾರ್ಥನೆ. ಗುರುಗಳ ಸಮಾಧಾನ. ರಾಜಪುತ್ರಿಯ ಇಷ್ಟದೇವತಾಪೂಜೆ. ಗುರುಗಳ ಆಆಮನ, ಮತ್ತು ಅಭಿನಂದನ. ರಾಜಪುತ್ರಿಯ ಗುರುಪಾದಪೂಜೆ. ಪ್ರಾರ್ಥನೆ-ಮತ್ತು ಚಂದ್ರವದನೆಯ ವಿಷಯವೈರಾಗ್ಯ, ಮೋಕ್ಷಪ್ರಾಪ್ತಿ ಸುಖಾಭಿಲಾಷೆ. ಗುರೂಪದೇಶ. ಚಂದ್ರವದನೆಯ ವಿಧೇಯತೆ, ಸತ್ಯವರ್ಮ-ಸುಪ್ರಭೆಯರ ಅಭಿಮತ, ಚಂದ್ರವದನೆಯ ಸಂಕಲ್ಪ ರಾಜನ ಸಮ್ಮತಿ, ಇತ್ಯಾದಿ—

ದ್ವಿತೀಯಾಂಕವು 25-37

ರಾಜ ಕಂಚುಕಿಯ ಬೇಸರದ ಬಿಡುನುಡಿ, ಬ್ರಾಹ್ಮಣರ ಗಡಬಿಡಿ, ಸ್ವಯಂವರ ಮಂಟಪದ ಸಮಾರಂಭ. ಸತ್ಯವರ್ಮರಾಜನ ಆಶಾಸನ. ಚಂದ್ರವದನೆಯ ಪ್ರಶ್ನೆಗಳು; ವಿಂದಾಖ್ಯನ ಉತ್ತರಗಳು. ರಾಜಪುತ್ರಿಯ ನಿಶ್ಚಿತಾರ್ಥ,ವಿಂದಾಖ್ಯನ ಅಭ್ಯಂತರ. ರಾಜಪುತ್ರಿಯ ದೃಢಪ್ರತಿಜ್ಞೆ; ಚಂದ್ರ

ವದನಾ ಪಾಣಿಗ್ರಹಣಕ್ಕೆ ವಿಂದಾಖ್ಯನ ಸಮ್ಮತಿ. ರಾಜ ರಾಜಪುತ್ರರ ಅಭಿನಂದನದ ಕೋಲಾಹಲ. ಸತ್ಯವರ್ಮರಾಯನ ಆನಂದಾತಿಶಯ ಮತ್ತು ಪ್ರಾರ್ಥನೆ- ಸಭ್ಯರ ಅಂಗೀಕಾರ ಇತ್ಯಾದಿ—

ತೃತೀಯಾಂಕವು. 37-50

ವಿಂದಾಖ್ಯನ ಮಾತಾಪಿತೃ ಭಕ್ತಿಪರಾಕಾಷ್ಟೆ ; ಪಿತೃವಿರಹವ್ಯಥೆ- ಚಂದ್ರವದನೆಯ ಸಮಾಧಾನ. ಸತ್ಯವರ್ಮರಾಯನ ಆನಂದಪಾರವಶ್ಯತೆ- ಪತ್ನೀಪ್ರೇಮಗೌರವ. ಸುಪ್ರಭೆಯ ಸೌಶೀಲ್ಯ, ಚಂದ್ರವದನೆಯ ಆಗಮನ. ಸತ್ಯವರ್ಮ-ಸುಪ್ರಭೆಯರ ಕೌತುಕ ಮತ್ತು ಪ್ರಶ್ನೆ. ರಾಜಪುತ್ರಿಯ ಪ್ರಾರ್ಥನೆ. ರಾಜನು ಕುವರಿಗೆ ಒಲಿದಿತ್ತ ಹಿತಸೂಚನೆಯ ಬಳುವಲಿ. ರಾಜಮಹಿಷಿಯು ಮಗಳಿಗೆ ನಲಿದಿತ್ತ ಹಿತೋಪದೇಶದ ಬುತ್ತಿ. ಚಂದ್ರವದನೆಯ ಸಡಗರ, ಸಖಿಯರ ಕಳವಳ,ಚಂದ್ರವದನೆಯ ಭರವಸೆ, ವಿಂದಾಖ್ಯನ ಮಾಗ್ದಾನ ಮತ್ತು ಚಂದ್ರವದನಾ-ವಿಂದಾಖ್ಯರ ಕರ್ತವ್ಯ ಪಾಲನಾಸಕ್ತಿ. ಇತಾದಿ—

ಚತುರ್ಥಾಂಕವು. 51-72

ರಂಭಾದ್ಯಪ್ಸರಿಯರ ವನವಿಹಾರೇಚ್ಛೆ, ಪರಸ್ಪರಾಲಾಪ, ಮಂದಾರವನದ ಮಕರಂದ ಮಂಟಪ ಪ್ರವೇಶ. ಚಂದ್ರವದನಾ - ವಿಂದಾಖ್ಯ - ಚಿತ್ರಕಲೆಯರ ಆಗಮನ ವಿಚಾರ, ಅಪ್ಸರಿಯರ ಅಸೂಯೆ-ಆಗ್ರಹ ದ್ವೇಷಸಾಧನೆಗಳ ವಿಚಾರ ವಿಮರ್ಶೆ—ವಿಂದಾಖ್ಯನ ಅಪಹರಣ. ಚಿತ್ರಕಲೆಯ ಪ್ರಲಾಪ—ಚಂದ್ರವದನೆಯ ಮನಸ್ಸ್ಥೈರ್ಯ. ಚಿತ್ರಕಲೆಗೆ ಹೇಳಿದ ಸಮಾಧಾನ - ಮತ್ತು ಧ್ಯಾನದಿಂದ ಪತಿಯ ವಾರ್ತೆಯನ್ನು ತಿಳಿದು ಹೇಳುವುದು, ಬಳಿಕ-ಅವಳ ಯೋಗಸಮಾಧಿನಿಷ್ಠೆ. ಚಿತ್ರಕಲೆಯ ದುಃಖ. ಸಖಿಯರು ಆಂಧ್ರ ಪಾಂಚಾಲ ಕಾಶ್ಮೀರಪತಿಗಳಿಗೆ ಸೇನಾಪತಿಯ ಕಡೆಯಿಂದ ವರ್ತಮಾನವನ್ನು ಕಳುಹುವುದು, ಅವರ ಆಗಮನ-ಶೋಕ-ಇತ್ಯಾದಿ—

ಪಂಚಮಾಂಕವು. 73-87

ಇಂದ್ರಸಭೆಯಲ್ಲಿ ಜನನೀ ಜನಕ ಭಕ್ತರ - ಮತ್ತು ಪತಿವ್ರತೆಯರ ವೃತ್ತಾಂತ. ಗಂಧರ್ವನ ದೂರು, ಚಂದ್ರವದನೆಯ ತಪೋಗ್ನಿಜ್ವಾಲೆಯು ಇಂದ್ರಲೋಕವನ್ನು ಸಮೀಪಿಸಿತೆಂದು ಇಂದ್ರನ ಭೀತಿ. ಗಂಧರ್ವ ಮತ್ತು ಚಿತ್ರವರ್ಮರನ್ನು ನಿಯೋಜಿಸಿ ಕಳುಹುವುದು. ಪಾತಿವ್ರತ್ಯಪ್ರಭಾವವರ್ಣನೆ, ಗಂಧರ್ವನು ಬಂದು ಚಂದ್ರವದನೆಯ ತಪೋದ್ದೇಶವನ್ನು ವಿವರಿಸುವುದು, ಚಿತ್ರವರ್ಮನು ಬಂದು ಅಪ್ಸರಿಯರ ಅಕರ್ಮವನ್ನು ಸೂಚಿಸುವುದು. ಇಂದ್ರನ ಆಗ್ರಹ ಮತ್ತು ವಿಂದಾಖ್ಯನನ್ನು ಕಾಣಲು ಹೊರಡುವುದು. ವಿಂದಾಖ್ಯನ ಶೋಕ-ರಂಭಾ ಊರ್ವಶಿಯರ ಬಲಾತ್ಕಾರ, ವಿಂದಾ

ಖ್ಯನ ತಿರಸ್ಕಾರ. ಇಂದ್ರನ ಆಗಮನ ಮತ್ತು ಅಗ್ರಹ, ರಂಭಾದ್ಯಪ್ಸರಿಯರು ಇಂದ್ರನವರೆಹೋಗುವುದು. ಚಿತ್ರವರ್ಮನ ಸೂಚನೆ. ಇಂದ್ರನ ಆಜ್ಞೆ. ವಿಂದಾಖ್ಯನಲ್ಲಿ ಇಂದ್ರನ ವಾತ್ಸಲ್ಯ ಗೌರವಗಳು - ಚಂದ್ರವದನೆಯನ್ನು ಕಾಣಲು ಹೊರಡುವುದು. ಚಂದ್ರವದನೆಯ ತಪೋನಿಷ್ಠೆ. ಕಾಶ್ಮೀರ ಆಂಧ್ರ ಪಾಂಚಾಲರಾಜರ ವಿಸ್ಮಯ ಕೌತುಕಯುಕ್ತವಾದ ವರ್ಣನೆಗಳು. ಇಂದ್ರನ ಆಗಮನ. ಚಂದ್ರವದನೆಯ ಯೋಗಸಿದ್ಧಿ ಮತ್ತು ಬಾಹ್ಯ ಜ್ಞಾನ. ವಿಂದಾಖ್ಯ-ಚಂದ್ರವದನೆಯರ ಪರಸ್ಪರ ಸಂದರ್ಶನ ಮತ್ತು ಗುರುವಂದನೆ, ಗುರುಜನರ ಆಶೀರ್ವಾದ. ಮತ್ತು ಗುರುಗಳ ಆಗಮನ. ಜಯಮಂಗಳಂ. ಇತ್ಯಾದಿ.

BALLABROOIE, Bangalore,
24th June 1916.

Dear Madam,

The Dewan desires me to convey to you his thanks for the copies of the "SATEEHITAI SHINI" series kindly sent with your letter of 14th June.

He will be pleased to subscribe for a copy of the monthly Magazine when it is published.

Yours faithfully,
(*Sd.*) S. HIRIYANNAIYA.
Private Secretary to the Dewan of Mysore.

From:—

Rajamantrapravina, Dewan Bahadur,
J. S. Chakravarti Esq., M.A., F.R.A.S.,
Comptroller, of Mysore State.

ಬೆಂಗಳೂರು 20-11-1915.

ಸತೀಹಿತೈಷಿಣಿಯ ಸಂಪಾದಯಿತ್ರಿಯವರಾದ
ಶ್ರೀ || ತಿರುಮಲಾಂಬಾಯವರ ಸ || ಕ್ಕೆ.—

ನೀವು ಪ್ರೀತಿಪುರಸ್ಸರವಾಗಿ ಕಳುಹಿಸಿಕೊಟ್ಟ ಪುಸ್ತಕವೂ, ಆದರ ರವಾನೆಯನ್ನು ಸೂಚಿಸಿದ ಕಾಗದವೂ ತಲುಪಿ ಸಂತೋಷವಾಯಿತು.

ದಕ್ಷಕನ್ಯೆಯನ್ನು ಅನುವರ್ತಿಸುವುದಾದ ನಂದಿನಿಯ ಆಗಮನವನ್ನು ನಿರೀಕ್ಷಿಸುತ್ತಲೂ, ಸರ್ವದಾ ಹಿತೈಷಿಣಿಯ ಶ್ರೇಯಸ್ಸನ್ನು ಹಾರೈಸುತ್ತಲೂ ಇರುವ. ನಿಮ್ಮ ವಿಧೇಯ

(ರುಜು) ಜೆ. ಯಸ್. ಚಕ್ರವರ್ತಿ.

|| ಶ್ರೀ ||

|| ಶ್ರೀ ಯೈ ನ ಮಃ ||

ಚಂದ್ರವದನಾ.

(ನಾಟಕರೂಪ.)

ವಾಯುರ್ಯಮೋಗ್ನಿ ರ್ವರುಣಃ ಶಶಾಙ್ಕಃ ।
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ ॥
ತ್ವಮೇವ ಸೂರ್ಯಶ್ಚ ಶಿವಶ್ಚ ವಿಷ್ಣುಃ ।
ಯೋಗೇಶ್ವರಿ ತ್ವಾಂ ಶಿರಸಾ ನಮಾಮಿ ॥

ಪ್ರಥಮಾಂಕವು.

(ರಾಜನ ಆಲೋಚನಾ ಮಂದಿರ)

[ಕಾಶ್ಮೀರದೇಶಾಧಿಪತಿಯಾದ ಸತ್ಯವರ್ಮರಾಜನು , ಮಂತ್ರಿಯೊಡನೆ ಪೀಠದಲ್ಲಿ ಕುಳಿತು, ಸಂಭಾಷಿಸುತ್ತಿರುವನು.]

ಸತ್ಯವರ್ಮ:—ಅಮಾತ್ಯಶೇಖರ ! ಈವರೆಗೆ ನೀವು ಏನೇನನ್ನು ಹೇಳಿದಿರೋ, ನನಗದೊಂದೂ ತಿಳಿಯಲಿಲ್ಲ. ಈಗ ನನ್ನ ಮನಸ್ಸು ನನ್ನದಾಗಿಲ್ಲವೆಂದೇ ಹೇಳಬೇಕು.

ಅಮಾತ್ಯ:—ಜೀಯಾ ! ಇದು ತಮ್ಮ ಸ್ವಭಾವವಾದ ದೋಷವಲ್ಲ.

ಸತ್ಯ:—(ಆತುರದಿಂದ) 'ಮತ್ತಾವುದರ ದೋಷವು ? '

ಅಮಾತ್ಯ:—ಇದು "ಕನ್ಯಾಪಿತೃತ್ವ" ದ ದೋಷವಲ್ಲದೆ, ಮತ್ತಾವುದೂ ಅಲ್ಲ. "ಕನ್ಯಾಪಿತೃತ್ವ" ವೆಂಬುದು ಬಲು ಬಲವಾದುದು. ವಿವಾಹಕಾಲವು ಮೀರುತ್ತಿದ್ದರೂ, ಮಗಳಿಗೆ ಮದುವೆಯಾಗದಿರುವ ಒಂದೇ ಚಿಂತೆಯೇ ತಮ್ಮ ಇಷ್ಟರ ಕಳವಳಕ್ಕೂ ಕಾರಣವು.

ಸತ್ಯ:—ಅಯ್ಯೋ ! ನಿಮ್ಮ ಮಾತು ನಿಜ. ಆದರೆ ಹೇಳಿರಿ, ಇದಕ್ಕೇನುಪಾಯ ?

ಅಮಾತ್ಯ:—ನಾನು ಹೇಳುವುದೇನು ? ಸುಕುಮಾರಿಯು, ತಮ್ಮಿಂದ ಸುಶಿಕ್ಷಿತೆಯಾಗಿ, ತಕ್ಕಷ್ಟು ವಿರಕ್ತ ಧರ್ಮ—

ಸತ್ಯ:—(ಅಷ್ಟಕ್ಕೇತಡೆದು) ಹೋ–ತಾಳಿರಿ–ತಾಳಿರಿ ! ಮುಂದೆ ಹೇಳಬೇಡಿರಿ. ಆ ವಿರಕ್ತಿಮಾರ್ಗವನ್ನು ಬೋಧಿಸಿದ ನಮ್ಮ ವಿಪರೀತ ಶಿಕ್ಷಣವೇ, ಈಗ ನಮಗೀ ಗತಿಯನ್ನು ತಂದಿರುವುದು. ಆ ವಿರಕ್ತಿಮಾರ್ಗವನ್ನು ತೋರದೆ, ಎಲ್ಲರಂತೆಯೇ ನಾವು ಸಾಮಾನ್ಯ ಶಿಕ್ಷಣವನ್ನು ಕೊಟ್ಟಿದ್ದರೆ, ಮಗಳು ಹೀಗೆ ಮದುವೆಯೊಲ್ಲೆನೆಂದು ಹೇಳಲಾಗುತ್ತಿರಲಿಲ್ಲ !

ಅಮಾತ್ಯ:—ದೇವ ! ತಾವು ಬೋಧಿಸಿರುವ ಮಾರ್ಗವೇ ಶ್ರೇಯಸ್ಕರವು. ಏಕೆಂದರೆ,—ಬಾಲ್ಯದಲ್ಲಿ ಕಲಿತ ವಿದ್ಯೆಯು, ಯೌವನಕಾಲದಲ್ಲಿ ವಿಕಾರಕ್ಕೆ ವಶವಾಗದೆಯೂ, ವಾರ್ಧಕ್ಯದಲ್ಲಿ ಶೋಕಮೋಹ ಪೀಡಿತವಾಗದೆಯೂ ನಿರ್ಮಲವಾಗಿದ್ದು, ನಿತ್ಯಾನಂದ ಸುಖಕ್ಕೆ ಸಾಧನವಾಗಿ ನಿಲ್ಲುವುದು. ಬಾಲ್ಯದಶೆಯು ಪವಿತ್ರವಾದುದು. ಆ ಬಾಲ್ಯದಲ್ಲಿ ಕರ್ಮೇಂದ್ರಿಯಗಳು ವಿಷಯ ಸುಖಕ್ಕೆರಗಲಾರವು. ಆದುದರಿಂದಲೇ ಗುರುಜನರು–ಎಂದರೆ, ತಾಯ್ತಂದೆಗಳು, ಇತರ ಪೋಷಕರೇ ಮೊದಲಾದ ಕರ್ತರು, ತಮ್ಮ ಮಕ್ಕಳನ್ನು ಬಾಲ್ಯದಿಂದ ಸುಧಾರಿಸಿದ ಮಾರ್ಗದಲ್ಲಿ

ಸುಶಿಕ್ಷಿತರನ್ನಾಗಿ ಮಾಡಿಸುವುದು ಅಗತ್ಯವೆಂದು ಬಲ್ಲವರು ಹೇಳುವರು. ಹಾಗೆಯೇ ತಮ್ಮ ಸುಕುಮಾರಿಯು, ತನ್ನ 'ಚಿತ್ತ' ವೆಂಬ 'ಹಲಿಗೆ' ಯಲ್ಲಿ, ತಮ್ಮ ಶಿಕ್ಷಣಾ ಕೌಶಲಕ್ಕೊಳಪಟ್ಟ ಸುಬೋಧರಾಗದಿಂದ ಚಿತ್ರಿಸಲ್ಪಟ್ಟ 'ಸೌಶೀಲ್ಯ' ವೆಂಬ ದೇವತೆ ಯನ್ನು ಯಾವಾಗಲೂ ಆರಾಧಿಸುತ್ತಿರುವಳು. ಅದರ ಮಹಿಮೆ ಯಿಂದಲೇ ಆಕೆಗೆ, ಇಹದಲ್ಲಿಯ ತುಚ್ಛವೂ, ಕ್ಷಣಿಕವೂ, ಅಪಾ ಯಕರವೂ, ದುಃಖಕ್ಕೆ ಹೇತುವೂ ಆದ ವಿಷಯ ಲಾಲಸೆಯಲ್ಲಿ ದ್ವೇಷವುಂಟಾಗಿರುವುದು. ಇದು ಸರ್ವೋತ್ತಮವಾದ ಮಾರ್ಗ ವಾದರೂ, ಇದೇ ವಿರಕ್ತಮಾರ್ಗದಲ್ಲಿದ್ದು, ಪತಿಯೊಡಗೊಂಡು, ಗೃಹಿಣೀ ಧರ್ಮವನ್ನು ಧಾರಣಮಾಡುವಂತೆ,—

ಸತ್ಯ:—ಹೇಳಿರಿ, ಹೇಳಿರಿ! ಅದನ್ನೇ ನಾನು ಕೇಳಬೇಕೆಂದಿರುವುದು! ಚನ್ನಾಗಿ ಹೇಳಿರಿ. ಹಾಗಾಗಲು ಉಪಾಯವುಂಟೇನು ?

ಅಮಾತ್ಯ:—ಮಹಾರಾಜ! ತಮ್ಮ ಸುಕುಮಾರಿಯ ಮನವು ಬದಲಾ ಯಿಸಬೇಕಾದರೆ, ಸದ್ಗುರು ಕಟಾಕ್ಷವು ದೊರೆಯಬೇಕು.

ಸತ್ಯ:—(ಕೈಮೇಲಕ್ಕೆತ್ತಿ) ಓ—ನೆನಪಿಗೆ ಬಂದಿತು. ಎಲ್ಲಿ ? ನಿನ್ನೆಯೇ ಹೇಳಿರಲಿಲ್ಲವೇ ? ಗುರುಗಳನ್ನು ಮರ್ಯಾದೆಯೊಡನೆ ಕರೆತರ ಬೇಕೆಂದು —

ಅಮಾತ್ಯ;—ಅಹುದು ; ನಾನು ಈವರೆಗೆ ಹೇಳುತ್ತಿದ್ದುದೂ ಅದೇ ಮಾತನ್ನೇ !

ಸತ್ಯ:—ಮೊದಲೇ ಹೇಳಿದೆನಷ್ಟೆ. ಬುದ್ಧಿಯು ಸ್ವಾಧೀನದಲ್ಲಿಲ್ಲವೆಂದು— ಈಗ ಹೇಳಿ, ಅದೇನಾಗಿದೆ ?

ಅಮಾತ್ಯ:—ನಮ್ಮ ಕಂಚುಕಿ, ವಿನಯಂಧರನನ್ನು ಪ್ರಾರ್ಥನಾಪತ್ರಿಕೆ ಯೊಡನೆ ಗುರು ಸನ್ನಿಧಿಗೆ ಕಳುಹಿದ್ದೆನು. ಗುರುಗಳು ಪ್ರಾರ್ಥ

ನಾಪತ್ರವನ್ನು ಸ್ವೀಕರಿಸಿ ನಿತ್ಯಕರ್ಮಗಳನ್ನು ನೆರವೇರಿಸಿ ಕೊಂಡು ಆ ಬಳಿಕ ಬರುವೆನೆಂದು ನಿರೂಪಿಸಿರುವರು.

ಸತ್ಯ:—(ಸಂತೋಷದಿಂದ) ಮಂತ್ರಿವರ್ಯ! ನನಗೆ ಈಗಲಿದೋ ಜ್ಞಾನೋದಯವಾಗುತ್ತಿದೆ. ನಿಮ್ಮ ಹಿತವಾದವು ಈಗ, ನನಗೆ ಉಚಿತವೆಂದು ತೋರುತ್ತಿದೆ. ಅದರಮೇಲೆ ನನಗುಂಟಾಗುತ್ತಿರುವ ಭಾವನೆಯೇನೆನ್ನುವಿರಿ? ಕೇಳಿರಿ,—ಬಾಲ್ಯದಿಂದ ಬರಿಯಲಾಲನೆಯಲ್ಲಿ ಬೆಳೆದ ಹೆಣ್ಣುಮಕ್ಕಳು,—ಸೋಮಾರಿಗಳೂ, ದುರ್ಗುಣಕ್ಕೆ ಕಾರಣಭೂತರೂ, ದೌರ್ಭಾಗ್ಯಕ್ಕೆ ತವರುಮನೆಯೂ ಆಗಿ ನರಳುತ್ತಿರುವರು. ಅಂತಹ ಅಶಿಕ್ಷಿತೆಯರಾದ ಹೆಣ್ಣುಮಕ್ಕಳಲ್ಲಿ ಮೊದಲಿಂದಲೂ ಸುಳ್ಳು, ಮೋಸ, ಸೋಮಾರಿತನ, ಹಟ, ದುರಾಶೆಗಳೇ ಮೊದಲಾದ ದುರ್ಗುಣಗಳು ಅಡಗಿರುವುವು. ಇವುಗಳ ಪರಿಣಾಮ (ಫಲ)ವು ಅವರನ್ನು ಕಡೆಗೆ ಬಹು ಪರಿತಾಪ ಸ್ಥಿತಿಗೆ ತಂದು ಬಿಡುವುದು. ಇದೇ ನನ್ನ ಭಾವನೆ!

ಅಮಾತ್ಯ:—ನಿಜ! ಆದುದರಿಂದಲೇ ತಂದೆಯಾದವನು ತನ್ನ ಹೆಣ್ಣುಮಕ್ಕಳ ಶಿಕ್ಷಣಾ ವಿಚಾರದಲ್ಲಿ ಹೆಚ್ಚಾಗಿ ಗಮನವಿಡಬೇಕಾಗಿದೆ. ಏಕೆಂದರೆ—ಈಗ ನೋಡಿರಿ, ತಾಯಿಯ ಪ್ರೀತಿಯು ಗಂಡು ಮಕ್ಕಳಲ್ಲಿ ಅಷ್ಟಾಗಿ ಪ್ರಕಟವಾಗದಿರುವುದಕ್ಕೂ, ಹೆಣ್ಣುಮಕ್ಕಳೆಂದರೆ—ಆ ಪ್ರೀತಿಯು ಉಕ್ಕಿ ಸುರಿಯುತ್ತಿರುವುದಕ್ಕೂ ಕಾರಣವೇನು?

ಸತ್ಯ:—ತಂದೆಗೆ ಗಂಡು ಮಕ್ಕಳಲ್ಲಿ ಹೆಚ್ಚಿನ ಪ್ರೇಮವೂ, ತಾಯಿಗೆ ಹೆಣ್ಣುಮಕ್ಕಳಲ್ಲಿ ಹೆಚ್ಚಿನ ಪ್ರೇಮವೂ ಇರುವುದು ಲೋಕಸ್ವಭಾವವಾಗಿರುವುದು. ಆಶ್ಚರ್ಯವೇನು?

ಅಮಾತ್ಯ:—ಹಾಗಾಗಲು ಹೇತುವೇನು? ಪಕ್ಷಪಾತವೇಕೆ?

ಸತ್ಯ:—ನನಗದೊಂದೂ ತಿಳಿಯದು. ನನಗೆ ಒಬ್ಬಳೇ ಮಗಳಾಗಿರುವ ಚಂದ್ರವದನೆಯಲ್ಲದೆ, ನನ್ನ ಪ್ರೀತಿಯು ಮತ್ತಾವ ಪಾತ್ರದಲ್ಲಿಯಾಗಲೀ ಪಕ್ಷಪಾತ ಮಾಡುವಂತಿಲ್ಲ.—ಅದೇನಿದ್ದರೂ ನೀವೇ ಹೇಳಬೇಕು.

ಅಮಾತ್ಯ: —ಮಹಾರಾಜಾ ! ಕೇಳಬೇಕು. ತಂದೆಗೆ ಗಂಡುಮಕ್ಕಳಲ್ಲಿ ಹೆಚ್ಚಿನ ಮಮತೆ ಯುಂಟಾಗಿರುವುದೇಕೆಂದರೆ,—ಅವರು ತಮ್ಮ ಮನಸ್ಸಿನಲ್ಲಿ, ತಮ್ಮ ವಂಶಾಭಿವೃದ್ಧಿಗೂ, ಋಣವಿಮೋಚನಕ್ಕೂ ಮತ್ತು ತಮ್ಮ ಮುಂದಿನ ಪೋಷಣೆಗೂ, ಗಂಡುಮಕ್ಕಳು ಮಾತ್ರ ಅರ್ಹರೆಂದು ನಂಬಿ, ಅವರನ್ನು ವಿದ್ಯಾಭ್ಯಾಸದಲ್ಲಿ ಹೆಚ್ಚು ಹೆಚ್ಚಾಗಿ ಹುರಿದುಂಬಿಸುತ್ತ ಬರುವರಲ್ಲದೆ, ಅವರ ಶಿಕ್ಷಣದ ವಿಚಾರವಾಗಿ ತಾವೇ ಮುಂದೆನಿಲ್ಲುವರು. ಹೆಣ್ಣುಮಕ್ಕಳ ವಿಷಯದಲ್ಲಿ ಅವರ ಭಾವನೆಯು ಹಾಗಿಲ್ಲ. 'ಹೆಣ್ಣುಮಕ್ಕಳು, ಹೇಗಿರಲಿ, ಎಂದಿಗಾದರೂ ಹೆರವರ ಒಡವೆಯಾಗಿ ಹೊರಟು ಹೋಗುವರು. ಅವರು ನಮ್ಮಲ್ಲಿ ಬಹುಕಾಲವಿರುವುದಿಲ್ಲವಾದುದರಿಂದ ಮನೆಯಲ್ಲಿ ಬೇಕಾದಂತೆ ಆಟಪಾಟಗಳಲ್ಲಿ ಬೆಳೆಯುತ್ತಿರಲಿ.' ಈತೆರದ ಉಪೇಕ್ಷೆಯಿಂದ ಅವರ ಶಿಕ್ಷಣೆಯ ಕಡೆಗೆ ತಮ್ಮ ಗಮನವನ್ನಾದರೂ ಕೊಡದಿರುವರು.

ಸತ್ಯ:—(ತಲೆದೂಗಿ) ಎಲ್ಲರೂ ಹಾಗೆಯೇ ಇರುತ್ತಾರೆಂದು ಹೇಳಲಾಗದಿದ್ದರೂ, ಅಂತಹರು ಬಹು ಜನರಿರಬಹುದು. ಇರಲಿ, ತಾಯಿಯ ವಿಚಾರ ?

ಅಮಾತ್ಯ:—ತಾಯಿಯರ ಮನೋಭಾವವು ಹಾಗಿರುವುದಿಲ್ಲ. ಅವಳ ಪ್ರೀತಿಯು ಮಕ್ಕಳೆಲ್ಲರಲ್ಲಿಯೂ ಒಂದೇ ಬಗೆಯದಾಗಿರುವುದು. ಆದರೆ, ತನ್ನ ಗಂಡುಮಕ್ಕಳು ತಂದೆಯ ಆದರ-ವಿಚಾರಣೆಗಳಿಂದ ಸುಶಿಕ್ಷಿತರಾಗಿ ಬೆಳೆಯುತ್ತಿರುವುದನ್ನು ನೋಡಿ, ಅವರಮೇಲಿನ

ವಿಚಾರಣಾ ಕಾರ್ಯಭಾರವು ಕಡಮೆಯಾದುದರಿಂದ ಸಂತುಷ್ಟಳಾಗುವುದಲ್ಲದೆ, ತನ್ನ ಹೆಣ್ಣುಮಕ್ಕಳಲ್ಲಿ ತಂದೆಯು ಉಪೇಕ್ಷೆ ಮಾಡುತ್ತಿರುವುದರಿಂದ ಕನಿಕರಪಟ್ಟು, ಹೆಣ್ಣುಮಕ್ಕಳಲ್ಲಿ ತನ್ನ ಪ್ರೀತಿಯ ಅಧಿಕಭಾಗವನ್ನು ಇರಿಸುವುದಲ್ಲದೆ, ತನಗೆ ತಕ್ಕಷ್ಟು ಮಟ್ಟಿಗೆ ಅವರನ್ನು ಮುಂದಕ್ಕೆ ತರಲೆಳಸುವಳು.

ಸತ್ಯ:—ಲೋಕಧರ್ಮವೇ ಇದಷ್ಟೆ; ಇದಕ್ಕೇಕೆ ವಿಚಾರ ಪಡಬೇಕು?

ಅಮಾತ್ಯ:—ವಿಚಾರಶೂನ್ಯರ ಸ್ವಭಾವವೆಂದು ಮಾತ್ರ ಹೇಳಬಹುದಲ್ಲದೆ, ಲೋಕಧರ್ಮವೇ ಇದೆಂದು ಹೇಳುವುದುತಪ್ಪು. ಇದರಿಂದ ಉಂಟಾಗುವ ಅನರ್ಥವೇನೆಂಬುದನ್ನು ವಿಚಾರಮಾಡಿದರೆ, ಯಾರಿಗಾದರೂ ವಿಷಾದವುಂಟಾಗದೆ ಇರಲಾರದು.

ಸತ್ಯ:—(ಕುತೂಹಲದಿಂದ) ಅನರ್ಥವೇನು ?

ಅಮಾತ್ಯ:—ಸ್ವಾಭಾವಿಕವಾಗಿ ಮಕ್ಕಳಿಗೆ ತಾಯಿಯರಲ್ಲಿ ಸಲ್ಗೆಯು ಹೆಚ್ಚಾಗಿರುವುದಷ್ಟೆ. ಹಾಗೆ ಸಲ್ಗೆಯಿರುವ ಕಡೆಯಲ್ಲಿ ಪಕ್ಷಪಾತವು ಕಂಡರೆ, ಮಕ್ಕಳ ಮನೋಭಾವವು ಹೇಗಾಗಿ ತಿರುಗಬಹುದು ? “ಹೆಣ್ಣುಹುಡುಗಿಯರಿಗೂ ತಾಯಿ; ನಮಗೂತಾಯಿ; ಆದರೆ ನಮ್ಮಲ್ಲಿ ಅನಾದರ-ಅವರಲ್ಲಿ ಹೆಚ್ಚಿನ ಆದರ! ಇದೆಲ್ಲಿಯ ನ್ಯಾಯಾಚರಣೆ? ” ಎಂಬೀವಿಧದ ವಿಕಲ್ಪಭಾವನೆಯುಂಟಾಗಿ, ಬರಬರುತ್ತ ಅದೇ ಕಾಠಿಣ್ಯ-ಮರ್ಯಾದಾತಿಕ್ರಮಣ ದೋಷಗಳಾಗಿ ತಿರುಗಿ, ಹೆಣ್ಣು ಹುಡುಗಿಯರನ್ನು ಹಿಂಸೆಪಡಿಸಲು ತೊಡಗುವುದು. ಹೆಣ್ಣುಮಕ್ಕಳ ಮನಸ್ಸುಕೂಡ, ತಾಯಿಯಲ್ಲಿರುವ ಹೆಚ್ಚಿನ ಸಲ್ಗೆಯಿಂದ-ತಮ್ಮ ಅಣ್ಣತಮ್ಮಂದಿರು ತಮ್ಮಲ್ಲಿ ತೋರುವ ಧಿಟ್ಟತನಕ್ಕಾಗಿಯೂ, ತಮ್ಮ ತಂದೆಯು, ಅವರನ್ನು ಮಾತ್ರವೇ ಸನ್ಮಾನಿಸಿ, ತಮ್ಮನ್ನು ಅಷ್ಟಾಗಿ ವಿಚಾರಿಸದಿರುವುದರಿಂದಲೂ, ಒಂದು ಬಗೆಯ ರೋಷದ್ವೇಷಗಳನ್ನು ಹೊಂದಿ, ತಾಯಿಯಲ್ಲಿ

ಚಾಡಿ ಹೇಳುವುದೇ ಮೊದಲಾದ ದುರ್ಗುಣಗಳನ್ನು ಕಲ್ತು ದಿನ ದಿನಕ್ಕೂ ಅದನ್ನೇ ಬಲಪಡಿಸಿಕೊಳ್ಳುತ್ತಿರುವರು. ಹೀಗಾಗಿರುವದ ರಿಂದಲೇ ನಮ್ಮವರ ಅನೇಕ ಮನೆಗಳಲ್ಲಿ ಹೆಂಗಸರು ದುರ್ಜನೆಯರಾಗಿಯೂ, ಗಂಡಸರು ದುರಭಿಮಾನ ಪರರಾಗಿಯೂ, ಪರಸ್ಪರ ಸೌಜನ್ಯಭಾವವೆಂಬುದಿಲ್ಲದೆ, ಒಬ್ಬರನ್ನೊಬ್ಬರು ದೂರುವದನ್ನೇ ಮುಖ್ಯವಾಗಿ ಭಾವಿಸಿಕೊಂಡು ಬಂದಿರುವರು.

ಸತ್ಯ:—ಆಗಿರಬಹುದು. ಅದರಿಂದಲೇ ದೇಶವು ಈ ಸ್ಥಿತಿಗೆ ಬಂದಿರಬೇಕೆಂದು ಭಾವಿಸುತ್ತೇನೆ. ಆದರೆ, 'ಸ್ತ್ರೀಯರಿಗೆ ವಿದ್ಯಾಭ್ಯಾಸವು ಆವಶ್ಯವಾಗಿ ಬೇಕೆ ?—ಬೇಡವೇ ?' ಎಂಬದೊಂದು ಸಮಸ್ಯೆಯಿದೆಯಷ್ಟೆ. ಅದಕ್ಕೇನು ಸಮಾಧಾನ ?

ಅಮಾತ್ಯ:—ಸ್ತ್ರೀಯರಿಗೆ ವಿದ್ಯೆಯು ಅತ್ಯಗತ್ಯವಾಗಿಯೂ ಬರಬೇಕು. ಏಕೆಂದರೆ,—ಲೋಕಯಾತ್ರೆಯಲ್ಲಿ ಸ್ತ್ರೀಯರ ಕರ್ತವ್ಯವು ಬಹು ಬಲವತ್ತರವಾಗಿರುವುದು. ಎಂದರೆ—ಅದರಲ್ಲಿ ಪುರುಷರು ಎಷ್ಟರ ಉತ್ತರವಾದಿಗಳಾಗಿ ನಿಲ್ಲಬೇಕೋ, ಅಷ್ಟೇ ಉತ್ತರವಾದಿತ್ವವೇ—ಒಂದೊಂದುವೇಳೆ, ಅದಕ್ಕೂ ಹೆಚ್ಚಿನ ಉತ್ತರವಾದಿತ್ವವೆಂದರೂ ತಪ್ಪಲ್ಲ—ಸ್ತ್ರೀಯರ ಪಾಲಿಗೆ ಬಿದ್ದಿರುವುದು.

ಸತ್ಯ:—ಏನದು ? ನಿಮ್ಮ ಅಭಿಪ್ರಾಯ ? ಸ್ತ್ರೀಪುರುಷರಿಗೆ ಭೇದವಿಲ್ಲವೆಂದೋ ?

ಅಮಾತ್ಯ:—ಭೇದವಿಲ್ಲವೆಂದಲ್ಲ, ಪುರುಷರು ವ್ಯಾವಹಾರಿಕ ಕಾರ್ಯದಲ್ಲಿ ತತ್ಪರರಾಗಿದ್ದರೆ, ಸ್ತ್ರೀಯರು ಗೃಹಕಾರ್ಯದಲ್ಲಿಯೂ, ಮತ್ತು ಪತಿಪುತ್ರ ಬಂಧುವರ್ಗದವರ ಆರೋಗ್ಯಾಭಿವೃದ್ಧಿ ವಿಚಾರದಲ್ಲಿಯೂ ನಿರತರಾಗಿರಬೇಕು. ಇಲ್ಲದಿದ್ದರೆ, ಲೋಕಯಾತ್ರೆಯು ಸುಲಲಿತವಾಗಿ ನಡೆಯಲಾರದು. ಅಂತಹ ದಕ್ಷತೆಯುಂಟಾಗಬೇಕೆಂದರೆ, ಸ್ತ್ರೀಯರಿಗೆ ಅತ್ಯುಚ್ಚ ಶಿಕ್ಷಣ, ಆತ್ಮಜ್ಞಾನ,

ವಿವೇಚನಾಶಕ್ತಿ, ಶ್ರಮಸಹಿಷ್ಣುತೆಗಳೇ ಮೊದಲಾದ ಉತ್ತಮ ಗುಣಗಳು ಬಲವಾಗಿರಬೇಕು. ಹೀಗಾಗಬೇಕಾದರೆ, ಹೆಣ್ಣು ಮಕ್ಕಳ ಶಿಕ್ಷಣವಿಚಾರದಲ್ಲಿ ತಾಯ್ತಂದೆಗಳು, ಹೆಚ್ಚಾಗಿ ತಂದೆಯು, ಪಕ್ಷಪಾತಾದಿ ದೋಷಗಳಿಗೆಡೆಕೊಡದೆ ಬಹು ಜಾಗರೂಕರಾಗಿರಬೇಕಾಗಿದೆ.

ಸತ್ಯ :—ಅಂತಹ ತರ್ಕವ್ಯಕ್ಷಮತೆಯು ನಮ್ಮ ದೇಶಬಾಂಧವರೆಲ್ಲರಿಗೂ ಉಂಟಾಗುವಂತೆ ಭಗವಂತನೇ ಅನುಗ್ರಹಿಸಬೇಕು. ಅದೆಲ್ಲವೂ ಸರಿ, ಈಗ ನಮ್ಮ ಚಂದ್ರವದನೆಯ ವಿಚಾರವೇ—ನನ್ನ........

(ಆತುರದಿಂದ ಕಂಚುಕಿಯು ಪ್ರವೇಶಿಸುವನು.)

ಕಂಚುಕಿ :—ಕೈಮುಗಿದು ಮಹಾರಾಜರಿಗೆ ಜಯವಾಗಲಿ. ಪೂಜ್ಯರಾದ ಭೃಗುಮಹರ್ಷಿಗಳು ಶಿಷ್ಯರೊಡನೆ ಬರುತ್ತಿರುವರು.

ಸತ್ಯ:—(ಮಂತ್ರಿಯೊಡನೆ ಧಿಗ್ಗನೆದ್ದು ಮುಂದೆಬಂದು)—ಎಲ್ಲಿ ? ಎಲ್ಲಿ?

(ಶಿಷ್ಯನನ್ನು ಹಿಂದೆ ನಿಲ್ಲಿಸಿ, ಭೃಗುಮುನಿಯು ಪ್ರವೇಶಿಸುವನು)

ಸತ್ಯ :—(ಅಮಾತ್ಯನೊಡನೆ ವಿನೀತನಾಗಿ ಕೈಮುಗಿದು) 'ಪೂಜ್ಯರಿಗೆ ವಂದನೆ'.

ಭೃಗು :—ಕಲ್ಯಾಣಮಸ್ತು.

ಸತ್ಯ ;—(ವಿನಯದಿಂದ) ಆಸನವನ್ನಂಗೀಕರಿಸಬೇಕು.

ಭೃಗು :—ಸಂತೋಷವಾಯಿತು.

ಸತ್ಯ :—(ಕಂಚುಕಿಯ ಕಡೆಗೆ ತಿರಿಗಿ) 'ಆರ್ಯ, ವಿನಯಂಧರ! ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಬೇಗ ಬಾ.

ವಿನಯಂ :—ಅಪ್ಪಣೆ. (ಹೋಗಿ ಮತ್ತೆ ಪೂಜಾಸಾಮಗ್ರಿಗಳೊಡಗೊಂಡ ತಟ್ಟೆಯನ್ನುತಂದು ರಾಜನ ಮುಂದೆ ನಿಲ್ಲುವನು.)

ಸತ್ಯ:—(ಅರ್ಘ್ಯಪಾದ್ಯಾದಿಗಳಿಂದ ಮುನಿಯ ಪಾದಪೂಜೆಯನ್ನು ಮಾಡಿ, ವಿನಯದಿಂದ) 'ಗುರುದೇವ! ಆಶ್ರಿತನಲ್ಲಿ ಅನುಗ್ರಹಿಸಬೇಕು.'

ಭೃಗು:—ರಾಜೋತ್ತಮ ! ಸತ್ಯಸಂಧನಾದ ನಿನ್ನಲ್ಲಿ ಪರಮಾತ್ಮನೇ ಅನುಗ್ರಹಿಸಿರುವನು. ದುಗುಡವನ್ನು ಬಿಡು.

ಸತ್ಯ:—ಸದ್ಗುರು ಕಟಾಕ್ಷದಿಂದ ಕೃತಾರ್ಥನಾಗುವೆನೆಂದು ನಂಬಿರುವೆನು.

ಭೃಗು:—ರಾಜೇಂದ್ರ ! ನಿನ್ನ ಅಮಾತ್ಯನ ಕಡೆಯಿಂದ ಬಂದ ಪ್ರಾರ್ಥನಾಪತ್ರವನ್ನು ನೋಡಿ, ಚಿಂತಾಕುಲನಾಗಿರುವ ನಿನ್ನನ್ನು ಸಮಾಧಾನ ಪಡಿಸಬೇಕೆಂದು ಬಂದಿರುವೆನು.

ಸತ್ಯ: —ಗುರುದೇವ ! ಅನುಗೃಹೀತನಾದೆನು.

ಭೃಗು:—ಸುಕುಮಾರಿಯ ಮನೋಭಾವವು ಹೇಗಿರುವುದು ?

ಸತ್ಯ: —(ನಿಟ್ಟುಸಿರಿಟ್ಟು) 'ಪೂಜ್ಯರೇ ! ಏನಾಗಿದೆಯೆಂದು ಹೇಳಲಿ ? ಇಹಲೋಕವ್ಯಾಪಾರದ ಚಿಂತೆಯನ್ನೇ ಬಿಟ್ಟು, ಪಾರಲೌಕಿಕವಾದ ವಿರಕ್ತಿಯನ್ನು ಹೊಂದಿ, ನಮ್ಮನ್ನು ಈಬಗೆಯಾಗಿ ಸಂತಾಪಕ್ಕೆ ಗುರಿಮಾಡಿರುವುದು.

ಭೃಗು:—(ಕಿರುನಗೆಯಿಂದ) 'ವಿರಕ್ತಧರ್ಮವು ಸರ್ವಶ್ರೇಷ್ಠವಲ್ಲವೇ ?'

ಸತ್ಯ:—ವಿರಕ್ತಿಯನ್ನು ಕೆಟ್ಟುದೆಂದು ನಾನು ಹೇಳಲಿಲ್ಲ. ಆದರೆ ಪೂಜ್ಯರೇ ! ಕಟಾಕ್ಷಿಸಬೇಕು ? 'ಪುತ್ರಾಷ್ಟಗುಣಾಪುತ್ರೀ,' ಎಂಬ ಶ್ರುತಿಯನ್ನೇ ನಂಬಿ, 'ಅಪುತ್ರಸ್ಯ ಗತಿರ್ನಾಸ್ತಿ 'ಯೆಂಬ ಶ್ರುತಿಯನ್ನು ಕೂಡ ಮರೆತು, ಏಕಮಾತ್ರ ಪುತ್ರಿಯಾದ ಇವಳಿಂದ- ಸದ್ಗತಿಯನ್ನು ಹೊಂದುವೆವೆಂದು ನಂಬಿದ್ದ ನಮಗೆ— ವಿವಾಹವನ್ನೇ ಒಲ್ಲೆನೆಂದು ಹಟಹೊಟ್ಟು ಕುಳಿತಿರುವ ಮಗಳನ್ನು ನೋಡಿ, ಹೆತ್ತೊಡಲನ್ನು ಹೇಗೆ ಹಿಡಿದು ಕಟ್ಟಿರಲಾದೀತು?

ಭೃಗು:—(ತಲೆದೂಗಿ ಕಿರುನಗೆಯಿಂದ) 'ಈಗ ನನ್ನಿಂದ ನಿನಗಾಗಬೇಕಾದುದೇನು ? '

ಸತ್ಯ:—ಪೂಜ್ಯಪಾದರಿಂದ ಆಗಬೇಕಾದುದು ಎಷ್ಟೆಷ್ಟೋ ಇರುವುವು. ಆದರೂ, ಸದ್ಯದಲ್ಲಿ ಸುಕುಮಾರಿ-ಚಂದ್ರವದನೆಯು, ವಿವಾಹಕ್ಕೆ

ಸಮ್ಮತಿಸುವಂತೆ ಅವಳಿಗೆ ಬುದ್ಧಿಗಲಿಸಬೇಕಾದುದೇ ಮುಖ್ಯ ವಾಗಿರುವುದು.

ಭೃಗು:—ಹಾಗಿದ್ದರೆ, ಸುಕುಮಾರಿಗೆ ನಾನು ಬಂದಿರುವುದನ್ನು ತಿಳಿಯಿಸು.

ಸತ್ಯ;—(ಕಂಚುಕಿಯನ್ನು ಕುರಿತು) ವಿನಯಂಧರ ! ನೀನೇ ಹೋಗಿ, ಸುಕುಮಾರಿಗೆ ಪೂಜ್ಯರ ಆಗಮನವನ್ನು ತಿಳಿಸಿ ಬಾ !

ಕಂಚುಕಿ:—'ಅಪ್ಪಣೆ.' (ಹೋಗಿ ಮತ್ತೆ ಬಂದು) ಮಹಾರಾಜಾ ! ಸುಕುಮಾರಿಯು, ಧ್ಯಾನಾಸಕ್ತಳಾಗಿ ಕುಳ್ಳಿರುವಳು. 'ಪೂಜ್ಯರು ಅಲ್ಲಿಗೇ ದಯೆಗೈಯಬೇಕೆಂದು' ಸಖಿಯರು ಪ್ರಾರ್ಥಿಸುತ್ತಿರುವರು.'

ಭೃಗು:—(ಪೀಠದಿಂದೆದ್ದು) ಅದೇ ಯುಕ್ತವು. ರಾಜೋತ್ತಮ ! ಇನ್ನು ನೀನು ನಿಶ್ಚಿಂತನಾಗಿ ರಾಜಕಾರ್ಯವನ್ನು ಗಮನಿಸಬಹುದು. ನಾನಿನ್ನು ಕಂಚುಕಿಯೊಡನೆ, ಸುಕುಮಾರಿಯ ಬಳಿಗೆ ಹೋಗುವೆನು.

ಸತ್ಯ;—(ಮಂತ್ರಿಯೊಡನೆ) ಆಜ್ಞಾಧೀನನಾಗಿರುವೆನು. ಅನುಗ್ರಹಿಸಬೇಕು.

ಭೃಗು:—ಎಲೈ ವಿನಯಂಧರ ! ನಡೆ, ಸುಕುಮಾರಿಯ ಅಂತಃಪುರಕ್ಕೆ.'

(ಇಬ್ಬರೂ ಹೊರಡುವರು.)

(ಚಂದ್ರವದನೆಯ ಸೇವಾಮಂದಿರ)

(ಅಂತಃಪುರದ ಸೇವಾಮಂದಿರದಲ್ಲಿ ರಾಜಪುತ್ರಿ—ಚಂದ್ರವದನೆಯು ಇಷ್ಟದೇವತೆಯ ಮುಂದೆ ಪೂಜಾಸಕ್ತಳಾಗಿ ಕುಳ್ಳಿರುವಳು. ಪೂಜಾಪರಿಕರಣಗಳನ್ನು ಸಿದ್ಧಪಡಿಸುತ್ತ ಚಂದ್ರವದನೆಯ ಸಖಿಯರು ಬಳಿಯಲ್ಲಿ ನಿಂತಿರುವರು.)

ಚಂದ್ರವದನೆ:—[ಪುಷ್ಪಾಂಜಲಿ ಬದ್ಧಳಾಗಿ ಭಕ್ತಿಭಾವದಿಂದ]* ಎಲೈ ಜಗತ್ಪಿತನಾದ ನಾರಾಯಣನೇ ! ಲೋಕಾಭಿರಾಮನಾದ ಶ್ರೀ ರಾಮಚಂದ್ರನೆ ! ಕರುಣಾರಸಪರಿಪೂರ್ಣನಾದ ಕಮಲಾಕಾಂತನೇ ! ನಿನ್ನನ್ನೇ ನೆರೆನಂಬಿದ ಈ ದಾಸಿಯನ್ನು ಕೈಹಿಡಿದು ಕಾಪಾಡು ! ಮತ್ಸ್ಯ, ಕೂರ್ಮ, ವರಾಹ, ನಾರಸಿಹ್ಮ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕ್ಯಾದಿ ದಶಾವತಾರಗಳನ್ನು

(* ನಮ್ಮ ಭಗಿನಿಯರ ಉಪಯೋಗಕ್ಕಾಗಿ ಈ ಹಾಡನ್ನು ಇಲ್ಲಿ ಕೊಟ್ಟಿದೆ.)

ರಾಗ|| ನೋಟ್|| (ಇದಕೆ ಯೋಚಿಸುವರೆ ಮಹಾ)

ಏನಗೈದರೇನು ನಿನ್ನ ಬಿಡೆನು ನಾನೆಲೈ | ಉದಧಿಶಯನ ಕೇಳೆಲೈ| ಈ ಹದನ ಚಿಂತಿಸೈ || ಪ || ಎತ್ತಹೋದರತ್ತ ಬಿಡದೆ ಬೆನ್ನ ಹತ್ತುವೆ | ನಿನ್ನ ಸುತ್ತಿಕಾಡುವೆ | ನೀನೆತ್ತ ಪೋಗುವೆ ||ಏನ||೧|| ಜಲಧಿಯಲ್ಲಿ ವಾಸಗೈದು ಬೇಸರಿಲ್ಲದೆ | ಗಿರಿಯ ಪೊತ್ತೆಮೋದದೆ | ಬೇರತಿಂದೆ ಹೊಟ್ಟೆಗಿಲ್ಲದೆ || ೨ || ಘೋರರೂಪ ಕಲಸದೆ ಕನ್ನೀರ ನೀಂಟಿದೆ | ಕರುಳಮಾಲೆ ಧರಿಸಿದೆ (ಅರರೆ) ಕಪಟ ರೂಪ ತಾಳಿದೆ || ೩ || ನಲಿದು ತಾಯ ಶಿರವ ನರಿದು ಬಲಿದನೆನಿಸಿದೆ | ಜಲಧಿಯನ್ನೆ ಕಟ್ಟಿದೆ | ಛಲದಿ ದ್ವಿಜನ ಮಡುಹಿದೆ ||ಏನ||೪|| ಜಾರ ಚೋರನೆನಿಸಿ ಜಗವ ಗಾರುಗೊಳಿಸಿದೆ | ನಾರಿಯರ ವ್ರತವ ಕೆಡಿಸಿದೆ | ಕ್ರೂರನಾಗಿಹಯವನೇರಿದೆ || ಏನ || ೫ || ಇಷ್ಟು ಪಾಡು ಪಟ್ಟೆ ನಿನ್ನ ಬಿಟ್ಟು ಪೋದೆನೆ | ಧಿಟ್ಟತನಕೆ ಭೀತಿಪಟ್ಟೆನೆ | ಕಟ್ಟಿ ನಿನ್ನ ಹಿಡಿಯದಿದ್ದೆನೆ || ಏನ || ೬ || ಮೋಸಗಾರ ಶೇಷಶೈಲ ವಾಸನಹುದೆಲೈ | ವಾಸಿಪಂಥವೇನೆಲೈ| ಮೀಸಲಾಗಿ ಭಜಿಪೆ ನೋಡೆಲೈ ||ಏನ||೭||

ಹೊಂದಿ, ಅನೇಕಾನೇಕ ರೂಪಗಳಿಂದ ಧರ್ಮಸಂಸ್ಥಾಪನೆಯನ್ನು ಮಾಡಿ, ದುಷ್ಟನಿಗ್ರಹ, ಶಿಷ್ಟಪರಿಪಾಲನಾ ವ್ರತದಿಂದ ಜಗತ್ಕರ್ತನೆನ್ನಿಸಿರುವ ನಿನ್ನಲ್ಲಿ, ಅನನ್ಯ ಶರಣ್ಯಾ ಭಾವದಿಂದ ಮರೆಹೊಕ್ಕಿರುವ ನನ್ನನ್ನು ಉಪೇಕ್ಷಿಸುವುದು ಸರಿಯಲ್ಲ. ದೇವ ! ದಯಾರ್ಣವ !! ಅನುಗ್ರಹಿಸು. ಈ ತಾಮಸಪ್ರಪಂಚದಲ್ಲಿ ನಾನಿನ್ನು ನಿಂತಿರಲಾರೆನು. ಜ್ಞಾನಾನಂದಮಯ ಪ್ರಪಂಚದಲ್ಲಿ ನನ್ನನ್ನು ನೆಲೆಗೊಳಿಸಿ – ನಿನ್ನ ಧ್ಯಾನರೂಪವಾದ ನಿತ್ಯಾನಂದವನ್ನು ದಯೆಪಾಲಿಸು.

(ಎಂದು ಪುಷ್ಪಾಂಜಲಿಯನ್ನು ಸಮರ್ಪಿಸಿ, ಮೊಣಕಾಲೂರಿ ಕುಳಿತು ಧ್ಯಾನಿಸುವಳು)

(ಆತುರದಿಂದ ಕಂಚುಕಿಯು ಓಡಿಬರುವನು.)

ಕಂಚುಕಿ; —ಎಲ್ಲಿ ? ಎಲ್ಲಿ ! ಸುಕುಮಾರಿಯು ಎಲ್ಲಿ ? ಪೂಜ್ಯರಾದ ಭೃಗು ಮಹರ್ಷಿಗಳು ಸುಕುಮಾರಿಯನ್ನು ಅನುಗ್ರಹಿಸಲು ಬಂದಿರುವರು.

ಸಖಿಯರು:—(ಚಂದ್ರವದನೆಯನ್ನು ಕುರಿತು.) ' ಸುಕುಮಾರಿ ! ಸುಕುಮಾರಿ ! ಗುರುಗಳು ಬಂದಿರುವರಂತೆ-ಏಳು-ಏಳು. '

(ರಾಜಪುತ್ರಿಯು ಕದಲದೆ ಕುಳ್ಳಿರುವಳು. ಭೃಗುಮಹರ್ಷಿಯು ಶಿಷ್ಯನೊಡನೆ ಪ್ರವೇಶಿಸುವನು. ಸಖಿಯರು ಗಾಬರಿಗೊಂಡು ನೋಡುತ್ತ ನಿಲ್ಲುವರು.)

ಕಂಚುಕಿ:—(ಪುನಃ ರಾಜಪುತ್ರಿಯನ್ನು ನೋಡಿ,) " ಸುಕುಮಾರಿ! ಗುರುಗಳು ಬಂದು ನಿಂತಿರುವರು ; ಎದ್ದು ಪೂಜಿಸಲು ತಡೆಯೇಕೆ ? "

ಭೃಗು:—(ತನ್ನಲ್ಲಿಯೇ) ' ಆಹಾ ! ಆಶ್ಚರ್ಯವಾಶ್ಚರ್ಯವು ! ಈ ವಯಸ್ಸಿಗಾಗಲೇ, ಉಪದೇಶವಿಲ್ಲದೆಯೇ ಇಷ್ಟರಯೋಗಸಿದ್ಧಿಯಿರಬೇಕಾ

ದರೆ, ಜಾಯಮಾನಪ್ರಭಾವವೇ ಇರಬೇಕಲ್ಲವೆ? ಸಂದೇಹವೇನು? ಆದುದರಿಂದಲೇ-ಈತಾರುಣ್ಯದಲ್ಲಿ ಕೂಡ, ವಿಷಯವೈರಾಗ್ಯವೂ, ವಿವಾಹಪರಾಙ್ಮುಖತೆಯೂ ಉಂಟಾಗಿದೆ. ಹೂಂ-ಇರಲಿ, ಸರ್ವ ಪ್ರಯತ್ನದಿಂದಲೂ ಇವಳನ್ನು-ಐಹಿಕಾಮುಷ್ಮಿಕಗಳೆರಡರ ಲ್ಲಿಯೂ ಸಮಭಾವನೆಯಿಂದ ವರ್ತಿಸುವಂತೆ ಮಾಡುವೆನು. (ಪ್ರಕಾಶವಾಗಿ) 'ವತ್ಸೆ! ಏಳು ಏಳು! ಹೊತ್ತುಮೀರುತ್ತಿದೆ.'

ಚಂದ್ರವದನೆ:—(ಧಿಗ್ಗನೆದ್ದುನಿಂತು ಭಯಭಕ್ತಿಯಿಂದ) 'ಕ್ಷಮಿಸ ಬೇಕು! ಗುರುದೇವ! ಶರಣಾಗತೆಯನ್ನು ಕ್ಷಮಿಸಿ, ಕಟಾಕ್ಷಿಸ ಬೇಕು.' (ನಮಸ್ಕರಿಸುವಳು.)

ಭೃಗು:—(ವಾತ್ಸಲ್ಯದಿಂದ ತಲೆಯನ್ನು ಹಿಡಿದೆತ್ತಿ) 'ಮಗಳೇ! ಭಗವ ತ್ಕೃಪಾಪಾತ್ರಳಾಗಿ ವಿಭವದಿಂದ ಬಾಳುವೆ.'

ಚಂದ್ರ:—(ವಿನಯದಿಂದ) 'ಪೂಜ್ಯರ ಅನುಗ್ರಹದಿಂದ ಕೃತಕೃತ್ಯಳಾ ದೆನು.'

ಸಖಿಯರು:—(ಮುಂದೆಬಂದು ವಿನೀತರಾಗಿ) 'ಮಹಾತ್ಮರ ಪಾದಕ್ಕೆ ರಗುವೆವು.'

ಭೃಗು:—(ಕೈನೀಡಿ) 'ಭವಂತನು ಅನುಗ್ರಹಿಸಿರುವನು.' ಸಖಿಯರು ಸರಿದು ನಿಲ್ಲುವರು.

ಚಂದ್ರ:—(ಕೈಜೋಡಿಸಿ) 'ಪೂಜ್ಯಪಾದರು, ಪವಿತ್ರಾಸನವಿದರಲ್ಲಿ ಮಂಡಿಸಬೇಕೆಂದು ಕೋರುವೆನು.'

ಭೃಗು:—(ಸಂತೋಷದಿಂದ) 'ಮಗಳೇ! ನಿನ್ನ ಕೋರಿಕೆಯನ್ನು ಮೀರ ಲಾರೆನು.' (ಕುಳಿತು ಕೊಳ್ಳುವನು)

ಚಂದ್ರ:—(ಪೂಜಾಸಾಮಗ್ರಿಗಳನ್ನು ಕೈಗೊಂಡು, ನಮ್ರಭಾವದಿಂದ ಗುರುಪಾದ ಪೂಜೆಮಾಡಿ, ಬಳಿಕ ಬೀಸಣಿಗೆಯಿಂದ, ಬೀಸುತ್ತ ನಿಲ್ಲುವಳು.)

ಭೃಗು :—(ತಲೆದೂಗಿ ಪ್ರೀತಿವ್ಯಂಜಕ ಸ್ವರದಿಂದ) 'ಸುಕುಮಾರಿ! ನಿನ್ನ ಉಪಚಾರದಿಂದ ಆತ್ಮನು ಸಂತುಷ್ಟನಾಗಿರುವನು. ಇನ್ನು ನಿನ್ನ ಅಭಿಮತವೇನೆಂದು ತಿಳಿಯಲೆಳೆಸುವೆನು.'

ಚಂದ್ರ :—(ಕೈ ಜೋಡಿಸಿ ಮೆಲ್ಲನೆ) 'ಪೂಜ್ಯರ ಮನದಲ್ಲಿ ಅನುಗ್ರಹ ಬುದ್ಧಿಯುಂಟಾಗಿದ್ದರೆ—ನನ್ನ ಜನ್ಮ ಸಾರ್ಥಕವಾದಂತೆಯೇ ಸರಿ. ನನಗೀ ಭೂಲೋಕದ ನಶ್ವರ ಸುಖಾಪೇಕ್ಷೆಯು ಎಳ್ಳಷ್ಟೂ ಇರುವುದಿಲ್ಲವಾದುದರಿಂದ ಮೋಕ್ಷಸುಖವೊಂದಲ್ಲದೆ ನನಗಿನ್ನಾವುದೂ ಅಭಿಮತವಾಗಿಲ್ಲ.

ಭೃಗು :—(ವ್ಯಂಗ್ಯವಾಗಿ ನಕ್ಕು)—ಏನು ಏನು ? ಮೋಕ್ಷವಲ್ಲದೆ ಮತ್ತಾವುದೂ ಬೇಡ ?

ಚಂದ್ರ :—(ತಲೆಬಾಗಿ) 'ಅಹುದು ; ಗುರುದೇವ ! ನನ್ನ ಅಭಿಮತವೇ ಅದು–ಅನುಗ್ರಹಿಸಬೇಕು.

ಭೃಗು :—(ಕಿರುನಗೆಯಿಂದ) 'ಮಗಳೇ ! ಮೋಕ್ಷವೆಂದರೆ ಏನೆಂದು ತಿಳಿದಿರುವೆ ! ಅದನ್ನಾದರೂ ಹೇಳಬಲ್ಲೆಯೋ ? ಮೋಕ್ಷವನ್ನು ಹೊಂದುವುದೆಂದರೆ ನೀರು ಕುಡಿದಹಾಗೆಂದು ನೆನೆದಿರುವೆಯೊ ? ಹೇಗೆ ?

ಚಂದ್ರ :—(ಲಜ್ಜೆಯಿಂದ)—ಕ್ಷಮಿಸಬೇಕು, ನನಗೆ ಅಷ್ಟೊಂದು ಸೂಕ್ಷ್ಮವು ತಿಳಿಯುವಂತಿಲ್ಲ. ನನ್ನ ಅಲ್ಪಬುದ್ಧಿಗೆ ತೋರುವುದೇನಂದರೆ,—ಇಹಸಂಬಂಧವಾದ ಬಂಧನ ಕ್ಲೇಶಗಳೆಲ್ಲವನ್ನೂ ತೊರೆದು, ಮುಂದಿನ ಭವಭೀತಿಯಿಲ್ಲದಂತೆ—ಆ ಪರಮಾತ್ಮನ ಪಾದದಲ್ಲಿ ಐಕ್ಯವಾಗುವುದೇ—ಮೋಕ್ಷವೆಂದು ತಿಳಿದಿರುವೆನು.

ಭೃಗು :—(ತಲೆದೂಗಿ), ಭಲೆ ! ರಾಜಪುತ್ರಿ ! ಭಲೆ ! ಭಲೆ !! ಮೇಲು ಮಾತಾಡಿದೆ. ಅಹುದು, ನಿಜ. ಆದರೆ ಹೇಳು ? ಇಹದ ಬಂಧನಕ್ಲೇಶಗಳೆಂದರೆ ಯಾವುವು ? ಹೇಗಿರುವುವು ? ಅವುಗಳ

ಸ್ವಭಾವ ಪರಿವರ್ತನಾ ವಿಧಾನಗಳ ಕ್ರಮವೇನು ? ಯಾವರೀತಿ ಯಿಂದ ಅದರ ಸಂಬಂಧಪಾಶವನ್ನು ಕಿತ್ತುಹಾಕಬಹುದು ? ...

ಚಂದ್ರ :—(ಆತುರದಿಂದ ತಲೆಯೆತ್ತಿ) ' ಪೂಜ್ಯರೇ ! ನಾನೇನನ್ನೂ ಹೇಳಲಾರೆನು. ಮುಖ್ಯವಾಗಿ ಸತ್ಪುರುಷರ ಸಂದರ್ಶನವು ಸದ್ಗತಿಸಾಧನವೆಂದು ಕೇಳಿರುವೆನು. ಅದರಲ್ಲಿ, ಪೂಜ್ಯರೂ, ಪರಮಪಾವನರೂ ಆಗಿರುವ ತಮ್ಮ ಈ ಪವಿತ್ರ ಪಾದಧೂಳಿ ಯೊಂದು ಅನುಗ್ರಹಿಸಲ್ಪಟ್ಟರೂ ನನಗೆ ಮನೋರಥಸಿದ್ಧಿಯಾದೀ ತೆಂದೇ ನಂಬಿಕೆ. ಇನ್ನು ಇದಕ್ಕೂ ಹೆಚ್ಚಾಗಿ ವಿಜ್ಞಾಪಿಸಲಾ ರೆನು. ಧೈನ್ಯದಿಂದ ಬೇಡುತ್ತಿರುವ ಬಾಲಕಿಯಲ್ಲಿ ಕೃಪೆಯಿ ದ್ದರೆ,—ಮೋಕ್ಷಸಾಧನೆಯ ಉಪಾಯವೇನೋ ಅದನ್ನು....

ಭೃಗು:—(ತನ್ನಲ್ಲಿಯೇ) ' ಅಬ್ಬ ! ಏನಿದು ? ಈ ಬಾಲೆಯ ಮನಸ್ಥೈ ರ್ಯವೆಷ್ಟರದು ? ಹೀಗೆ ಒಂದೇಪಟ್ಟಿನಿಂದ ಮೋಕ್ಷವನ್ನು ಕೋರುತ್ತಿರುವ ಇವಳನ್ನು ಇಹವ್ಯಾಪಾರದ ಕಡೆಗೆ ಹೇಗೆ ತಿರುಗಿಸಲಿ ? ಆಗಲಿ, ಹೀಗೆ ಹೇಳಿ ನೋಡುವೆನು. (ಪ್ರಕಾಶ) ವತ್ಸೆ! ಮೋಕ್ಷವೆಂಬುದು ಬಾಯಿಮಾತಿಂದ ಬರುವುದಿಲ್ಲ. ಅದಕ್ಕಾಗಿಯೇ ಎಷ್ಟೋ ದೀರ್ಘಕಾಲದ ಘೋರತಪಃಕ್ಲೇಶಗ ಳನ್ನು ಸಹಿಸಿಯೂ ಅದನ್ನು ಹೊಂದಲಾರದೆ ಮಹರ್ಷಿಗಳು ಕೂಡ ಮತ್ತೆಮತ್ತೆಯೂ ತಪಿಸುತ್ತಿರುವರು. ಇನ್ನು ಕೇವಲ ಕನ್ಯೆ ಯಾಗಿರುವ ನೀನು ಬಯಸಿದರೆ ಸಾಧ್ಯವೇನು ? ಆದರೆ ಇದು ನಿನ್ನ ಪೂರ್ವಾರ್ಜಿತಪುಣ್ಯಫಲದಿಂದ ಉಂಟಾದ ಜಾಯಮಾನ ಗುಣವಲ್ಲದೆ ಬೇರಿಲ್ಲ. ಅದೇನೆನ್ನುವೆಯಾ ಮಗಳೆ ? ಕೇಳು, ಪೂರ್ವದಲ್ಲಿ ನೀನು ಹೀನಕುಲದಲ್ಲಿ ಹುಟ್ಟಿದ್ದರೂ ನರನಾರಾ ಯಣಮುನಿಗಳ ತಪೋವನದಲ್ಲಿ ಅವರ ಸೇವಾಕಾರ್ಯದಲ್ಲಿಯೇ ನಿರತಳಾಗಿದ್ದು, ಪ್ರತ್ಯಹದಲ್ಲಿಯೂ ಅವರ ಪವಿತ್ರಾಶ್ರಮಗ

ಳನ್ನು ಪರಿಶೋಧಿಸುತ್ತಲೂ, ಅವರಲ್ಲಿ ಭಗವದ್ಗುಣಕಥನ ಪಾರಾಯಣ ಪುರಾಣಪರಿಶ್ರವಣವೇ ಮೊದಲಾದ ಸತ್ಕಾಲಕ್ಷೇಪ ದಲ್ಲಿದ್ದುದರಿಂದ ಈ ಜನ್ಮದಲ್ಲಿ ಉತ್ತಮಕುಲದಲ್ಲಿ ಹುಟ್ಟಿ, ಇಂತಹ ಪವಿತ್ರತಮವಾದ ವಿರಕ್ತಿಯನ್ನು ಹೊಂದಿರುವೆ; ಆದ ರೇನು ? ಉಕ್ಕಂದವಿಲ್ಲದೆ ಆವುದೂ ನಿಲ್ಲಲಾರದಿರುವಂತೆ, ನಿರಾ ಧಾರವಾದ ನಿನ್ನೀಆಶೆಯು ಹೀಗಿದ್ದರೆ ಎಂದಿಗೂ ಪೂರೈಯಿ ಸಲಾರದೆಂದು ತಿಳಿದುಕೊ.

ಚಂದ್ರ:—(ಕಾತರಸ್ವರದಿಂದ) ‘ಹಾಗೆನ್ನಲಾಗದು ; ಗುರುದೇವ ! ಅಷ್ಟು ಕಠಿಣರಾಗಿರಬಾರದು. ಎಷ್ಟು ಬಗೆಯಿಂದಹೇಳಿದರೂ ನನ್ನ ಆತ್ಮನು ನನ್ನನ್ನು ಬೇರೆದಾರಿಗೆ ಬಿಡನು. ಹೇಗಿದ್ದರೆ ನನಗಾ ಸುಖವು ಲಭಿಸುವುದೋ.

ಭೃಗು:—ಮಗಳೇ ! ಸಮಸ್ತ ಸುಖಸಂಪತ್ತಿಗೂ, ಆತ್ಮಾನಂದ, ಬ್ರಹ್ಮ ಸ್ವರೂಪಗಳನ್ನು ತೋರಿಸುವ ಪ್ರಜ್ಞೆಯೇ ಮೂಲಾಧಾರವು. ಆ ಪ್ರಜ್ಞೆಯೆಂಬುದುಕೂಡ, ಗುರುಮುಖದಿಂದಲೇ ಲಭಿಸ ಬೇಕು. ಗುರುಕೃಪೆಯೇ ಮೋಕ್ಷಕ್ಕೆದಾರಿ, ಮೋಕ್ಷವೆಂದರೆ ಸಾಯುವುದೆಂದಲ್ಲ. ಸತ್ತಮಾತ್ರಕ್ಕೆ ಮುಕ್ತಿಯಾಯಿತೆಂಬ ಭಾವನೆ ಸುಳ್ಳು. ನಮ್ಮ ಮನಸ್ಸು, ವಿಷಯಗಳಿಗೆ ಅಧೀನ ವಾಗದೆ ಪ್ರತ್ಯೇಕವಾಗಿದ್ದು ಆತ್ಮವಿಚಾರದಲ್ಲಿ ಬುದ್ಧೀಂದ್ರಿ ಯಕ್ಕೆ ಸಹಾಯವಾಗಿದ್ದು, ಆತ್ಮಸ್ವರೂಪ, ಪರಮಾತ್ಮ–ಜೀವಾ ತ್ಮರ ಸಮೀಪಸಂಬಂಧ, ಆತನ ಸಾಮೀಪ್ಯ–ಸಾರೂಪ್ಯಗಳ ಉಪಾಯಗಳನ್ನು ಚನ್ನಾಗಿ ಕಂಡು ಹಿಡಿದು, ಅದರಿಂದುಂಟಾ ಗುವ ಪ್ರಜ್ಞಾಬಲದಿಂದ ವಿಷಯಾನುಬಂಧದ ವಿಮೋಚನೆ ಹೊಂದಿ–ಎಂದರೆ–ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ನಿರ್ಲಿ ಪ್ತ, ನಿರ್ವಿಕಾರ, ನಿತ್ಯತೃಪ್ತರಂತಿರುವುದೇ ಮುಕ್ತಿಯು.

ಚಂದ್ರ:— (ತಲೆಯೆತ್ತಿ ಕುತೂಹಲದಿಂದ)'ಗುರುದೇವ, ತಮ್ಮನ್ನೇ ಪರಮಗುರುವೆಂದೂ, ತಮ್ಮ ಅನುಗ್ರಹದಿಂದಲೇ ಮುಕ್ತಿ ಸುಖವು ಲಭಿಸುವುದೆಂದೂ ನಂಬಿರುವೆನು.

ಭೃಗು:—(ಸ್ವಗತಂ) ' ಈ ರಾಜಪುತ್ರಿಯ ವಿರಕ್ತಬುದ್ಧಿಯು ಅತ್ಯದ್ಭುತವಾಗಿದೆ. ಇದನ್ನು ಉಪಾಯಾಂತರದಿಂದಲೇ ತಿರುಗಿಸಬೇಕಲ್ಲದೆ, ಸುಮ್ಮನಾಗಲಾರದು. ಇರಲಿ. (ಪ್ರಕಾಶಂ)''ಏನೆಂದೆ? ಮಗುವೇ ! ನನ್ನನ್ನೇ ಗುರುವೆಂದು ಹೇಳಿದೆಯಾ? ಹೇಗೆ ಹೇಳುವೆ ? ”

ಚಂದ್ರ:—ಅಹುದು ; ಮೋಕ್ಷ ಸುಖಕ್ಕೆ ಮಾರ್ಗದರ್ಶಕರಾಗಿರುವ ತಮ್ಮನ್ನೇ ಗುರುವೆಂದಿರುವೆನು.

ಭೃಗು:—ಹಾಗಾಗಲಾರದಮ್ಮಾ—ಕೇಳು ! ನಾನು ಮಾರ್ಗದರ್ಶಕನಾಗಬಹುದಾದರೂ, ಸುಖಾನುಭವಕ್ಕೆ ಸಹಕಾರಪಾತ್ರವಾಗಲಿಲ್ಲ. ಇಲ್ಲಿ ಗುರುವೆಂದರೆ, ಮುಖ್ಯವಾಗಿ ನಿನ್ನಂತಹ ನಾರೀಗಣಕ್ಕೆ ಬರಿಯ ಉಪದೇಶ-ಅಥವ ಬೋಧನೆಯನ್ನು ಕೊಡುವವನೇ ಗುರುವೆನ್ನಿಸಲಾರನು. ಗುಣ ಪ್ರಕಾಶಕ ಸ್ಥಾನದಲ್ಲಿ ನಿಂತು, ಸುಗುಣ-ನಿರ್ಗುಣ ಸ್ವರೂಪನಾದ ಪರಮಾತ್ಮನ ಸೇವೆಗೆ ಸಾಕಾರನಾಗಿ ತೋರುವವನಾರೋ, - ಆತನೇ ಗುರುವೆನ್ನಿಸಲು ಶಕ್ತನಾಗುವನು. ಇಂತಹ ಪರಮೋತ್ಕೃಷ್ಟವಾದ ಗುರುತ್ವ ಭಾವನೆಯು, ಸ್ತ್ರೀ ವರ್ಗಕ್ಕೆ ಅಗ್ನಿಸಾಕ್ಷಿಕವಾಗಿ ಪಾಣಿಗೃಹೀತರಾದ ಪತಿಗಳಲ್ಲಿ ಮಾತ್ರವೇ ಇರಬೇಕೆಂಬುದು, ದೇವರ ಕಟ್ಟಳೆಯಾಗಿದೆ.

ಚಂದ್ರ:—(ಕೌತುಕದಿಂದ) ಹಾಗೆಂದರೇನು ? ಹಿರಿಯರೂ ಗುರುಜನರೂ, ಎಂದೂ ಪೂಜಾರ್ಹರೆಂದಿದೆಯಷ್ಟೆ ?

ಭೃಗು:—ಇದೆ; ಆದರೆ ಅವರೆಲ್ಲರೂ ಕೇವಲ ವಂದನಾರ್ಹರು ಮಾತ್ರ

ವಲ್ಲದೆ, ಆಶ್ರಯಪಾತ್ರರೆನ್ನಿಸಲಾರರು. ಹೇಗೆಂದರೆ, ಸ್ತ್ರೀಧರ್ಮದಲ್ಲಿ ಅತ್ಯಂತ ಸೂಕ್ಷ್ಮ ವಿಚಾರವೊಂದಿರುವುದು. ಅದನ್ನರಿತಲ್ಲದೆ ಸ್ತ್ರೀವರ್ಗವು, ತಮ್ಮ ಸತೀಧರ್ಮದಲ್ಲಿ ತಾವು ಕೃತಾರ್ಥರಾಗಲಾರರು.

ಚಂದ್ರ:—ಅದಾವುದೋ ನಿರೂಪಿಸಬೇಕು?

ಭೃಗು:—ಕೇಳು, ಮಗಳೇ! ಜಗಜ್ಜಾಲಕನ ಸೃಷ್ಟಿಕ್ರಮದಲ್ಲಿ, ಪುರುಷನು ವ್ಯಕ್ತಿಸ್ವರೂಪದಿಂದಲೂ, ಸ್ತ್ರೀಯು, ಶಕ್ತಿಸ್ವರೂಪದಿಂದಲೂ ತೋರುತ್ತಿರುವರು. ವ್ಯಕ್ತಿಗೆ ಶಕ್ತಿಯು ಸಹಕಾರಪಾತ್ರವಾದರೆ, ಪುರುಷನಲ್ಲಿ ವ್ಯಕ್ತಿತ್ವದ ನಿಜವಾದ ಕಾಂತಿಯು ಉತ್ಪನ್ನವಾಗಿ, ಅದೇ ಪ್ರಕೃತಿದೇವಿಯ ಪ್ರತಿಬಿಂಬವೆನ್ನಿಸಿ ಪ್ರಕಾಶಿಸುವುದು. ಇಂತಹ ಪ್ರಕಾಶಮಯ ಪಾತ್ರಗಳಿಂದಲೇ, ಜಗತ್ತಿನ ಉತ್ಪತ್ತಿ, ಸ್ಥಿತಿ-ಗತಿಗಳು ಸರಿಯಾದ ರೀತಿಯಿಂದ ನಡೆಯುತ್ತಿರಬೇಕಾಗಿವೆ. ಸೃಷ್ಟಿಕ್ರಮವು ಹೀಗಿರುವುದರಿಂದ ಶಕ್ತಿಸ್ವರೂಪರಾದ ಸ್ತ್ರೀಯರು, ವ್ಯಕ್ತಿಸದೃಶರಾದ ಪುರುಷರ ಆಶ್ರಯದಲ್ಲಿಯೇ ಇದ್ದು, ಕಾಲೋಚಿತವಾಗಿ ಅಂತರಂಗ ಸಹಾಯ-ಪ್ರೋತ್ಸಾಹಗಳಿಂದ ಪುರುಷವರ್ಗದಲ್ಲಿ, ಧರ್ಮಶ್ರದ್ಧೆ, ದೇಶವಾತ್ಸಲ್ಯ, ಗುರುಭಕ್ತಿ, ಮಾತೃಸೇವೆಗಳೇ ಮೊದಲಾದ ಕರ್ತವ್ಯಜ್ಞಾನವನ್ನು ಸ್ಥಿರಪಡಿಸುತ್ತಿರಬೇಕು. ಹಾಗಿಲ್ಲದೆ, ಸ್ತ್ರೀಯರು ಪ್ರತ್ಯೇಕವಾಗಿದ್ದು, ಕೇವಲ ಸ್ವಾರ್ಥಪರತೆಯೊಂದರಿಂದಲೇ ತಮ್ಮ ಜೀವನವನ್ನು ಕೊನೆಗಾಣಿಸಬೇಕೆಂದರೆ, ಭಗವನ್ನಿಯಮಕ್ಕೆ ವಿರೋಧಿಗಳಾಗಿ ಪರಿಣಮಿಸುವರು. ಇಂತಹ ಕೃತಘ್ನರಿಗೆ ಮುಕ್ತಿಯಾದರೂ ಹೇಗೆ ಬರಬೇಕು? ಪತಿಸೇವಾಸುಖಕ್ಕೆ ಬಾಹಿರಳಾಗಿರಬೇಕೆಂದಿರುವ ನಿನಗೆ ಮುಕ್ತಿಸುಖದ ಆಶೆಯಾದರೂ ಏಕೆ? ಬಿಟ್ಟುಬಿಡು!.

ಚಂದ್ರ;––(ಗದ್ಗದಸ್ವರದಿಂದ) 'ಪೂಜ್ಯರೇ ! ತಾವೇ ಈಬಗೆಯಾಗಿ ನನ್ನ ಆಶಾಲತೆಯನ್ನು ಖಂಡಿಸುವುದು ಸರಿಯಲ್ಲ. ಮುಕ್ತಿಸುಖಾನು ಭವಕ್ಕೆ ಸಾಧನವಾವುದೋ, ಅವುದನ್ನು ಆಶ್ರಯಿಸಿದರೆ ಆ ಆನಂದಧಾಮವನ್ನು ಸೇರಿ ಸುಖಿಸಬಹುದೋ, ಈ ದೇಹಧಾರಣೆಗೆ ಆವುದು ಅವಶ್ಯಮನುಭೋಕ್ತ್ತವ್ಯವೋ ಅದನ್ನು ನಿರೂಪಿಸಿ, ಕೃತಾರ್ಥಳನ್ನಾಗಿಮಾಡಬೇಕು.

(ಮುನಿಯಪಾದಗಳನ್ನು ಹಿಡಿದು ನಮಸ್ಕರಿಸುವಳು)

ಭೃಗು:—(ಸ್ವಗತಂ) 'ಭಲೆ ! ರಾಜಪುತ್ರಿಯು ನಮ್ಮದಾರಿಗೆ ಬಂದಳು. ಇನ್ನು ರಾಜನ ಇಷ್ಟಾರ್ಥವು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ. ಇರಲಿ. ಇವಳನ್ನು ಆದರ್ಶಗೃಹಿಣಿಯೂ, ಆರ್ಯರಮಣಿಯರ ಆರಾಧ್ಯದೇವತೆಯೂ ಆಗುವಂತೆ ತಕ್ಕರೀತಿಯಿಂದ ಸಮಾಧಾನಪಡಿಸಿ, ವಿವಾಹಕ್ಕೆ ಒಪ್ಪಿಸುವೆನು. (ಪ್ರಕಾಶವಾಗಿ—ರಾಜಪುತ್ರಿಯ ತಲೆಯನ್ನು ಹಿಡಿದೆಬ್ಬಿಸಿ, ಸಂತೋಷದಿಂದ) 'ಸುಕುಮಾರಿ ! ದುಗುಡವನ್ನು ಬಿಟ್ಟು ಬಿಡು. ನಿನ್ನ ದೃಢಸಂಕಲ್ಪಕ್ಕೆ ಸಂತುಷ್ಟನಾಗಿ ಹೇಳುವೆನು ಕೇಳು. ನೀನು ಈ ಬಗೆಯ ಕನ್ಯಾವಸ್ಥೆಯಲ್ಲಿದ್ದೇ ಮುಕ್ತಿಸುಖವನ್ನು ಹೊಂದಬೇಕೆಂಬ ಆಶೋತ್ತರವನ್ನು ಬಿಟ್ಟು, ನಿನ್ನನ್ನು ಹೆತ್ತತಾಯ್ತಂದೆಗಳ ಇಷ್ಟಸಿದ್ಧಿಗೂ, ನಿನ್ನನ್ನು ಸೃಷ್ಟಿಸಿದ ಭಗವಂತನ ಕಟ್ಟಳೆಗೂ ವಿಧೇಯಳಾಗಿ, ಅನುರೂಪನಾದ ವರನನ್ನು ಸೇರಿ, ಆತನ ಮನೋನುಕೂಲೆಯಾದ ಕಾಂತಾಮಣಿಯೂ, ಸಹಧರ್ಮಿಣಿಯಾದ ಭಾರ್ಯೆಯೂ ಆಗಿ, ಪತಿ ಭಕ್ತಿಪರಾಯಣೆಯೆನ್ನಿಸಿ ಪ್ರಕಾಶಿಸುವ ಸಂಕಲ್ಪವನ್ನು ಹಿಡಿ! ಪಾತಿವ್ರತ್ಯವೇ ಸತಿಯರ ಸದ್ಗತಿಸೋಪಾನವೆಂದು ನಂಬು.'

ಚಂದ್ರ:—(ವಿನಯದಿಂದ ಕೈಜೋಡಿಸಿ ನಿಂತು) ಗುರುದೇವ ! ಪಾತಿವ್ರತ್ಯಕ್ಕೆ ಅಂಗಗಳಾವುವು ? ಸತಿಗೆ ಪರಮಧರ್ಮವಾವುದು ? ಅನುಗ್ರಹಿಸಬೇಕು.

ಭೃಗು:— (ತಲೆದೂಗುತ್ತ) 'ವತ್ಸೆ! ಪಾತಿವ್ರತ್ಯಕ್ಕೆ ಶೀಲವೇ ಮೂಲಾಧಾರವು. ಶೀಲವೇ ಸದ್ವರ್ತನವು. ಶೀಲಕ್ಕೆ ಸತ್ಯ, ಶೌಚ, ಬಲ, ಕಾಂತಿ, ಶಾಂತಿ, ಕ್ಷಮಾ, ಧೃತಿ, ಭಕ್ತಿ, ವಿನಯ, ಶ್ರದ್ಧೆ, ವಿವೇಚನೆ, ಇತ್ಯಾದಿಗಳೇ ಮುಖ್ಯಾಂಗಳು. ಪತಿವ್ರತೆಯಾದ ಅಂಗನೆಗೆ ಪತಿಯೇ ಪರಬ್ರಹ್ಮವು. ಸಾಕಾರ ಬ್ರಹ್ಮನಾದ ಪತಿಯ ಗಮನಾಗಮನವೇ ಪ್ರಣವವು. ಆತನಲ್ಲಿ ಅನನ್ಯಭಾವನೆಯೇ ಧ್ಯಾನವು. ಧರ್ಮಪ್ರಜಾಪತಿಯಾಗಿರುವ ಆ ಪತಿರಾಜನ ಆರೋಹಣ ಅವರೋಹಣಾದಿಗಳೇ ರೇಚಕ ಪೂರಕಾದಿ ಯೋಗಾಂಗಗಳು. ಪಂಚೇದ್ರಿಯಂಗಳನ್ನು ಬಂಧಿಸಿ, ಜ್ಞಾನೇಂದ್ರಿಯದಿಂದ ಆನಂದಲಹರಿಯನ್ನೆಬ್ಬಿಸಿ, ಜ್ಯೋತಿರ್ಮಯನಾದ ಪರಬ್ರಹ್ಮವನ್ನು ಭಾವನಾಲೋಕದಲ್ಲಿ ಕಾಣುವುದೇ ಯೋಗಸಿದ್ಧಿಯು. ಮೇಲೆ ಹೇಳಿರುವ ಪರಮೋತ್ಕೃಷ್ಟವಾದ ಆತ್ಮಜ್ಞಾನವನ್ನು ಹೊಂದಿ, ಬ್ರಹ್ಮಾನಂದದಲ್ಲಿ ನಲಿದಾಡುವವರೇ ಮುಕ್ತರು ! ಇವರೇ ಮರಣವನ್ನೂ ಜಯಸಿದ ಮಹಾತ್ಮರು!! ಹೆಚ್ಚೇಕೆ, ಈ ಮಹಾತ್ಮರು ಪರಬ್ರಹ್ಮಮಯವಾದ ಈ ಪೃಥ್ವಿಯಲ್ಲಿ ತಾವೂ ಆತನ ನಿತ್ಯಸೂರಿಯಾಗಿರತಕ್ಕವರೆಂದು ಭಾವಿಸಿ, ಈ ಭಾವನಾಸೇವೆಯ ಮುಂದೆ ಸ್ವರ್ಗಸುಖವನ್ನೂ ತುಚ್ಛೀಕರಿಸುತ್ತಿರುವರೆಂದರೆ ಸಾಕು.

ಚಂದ್ರ:— (ಆನಂದಭಾಷ್ಪವನ್ನು ಸುರಿಸುತ್ತ) 'ಪೂಜ್ಯರೇ! ಕೃತಾರ್ಥಳಾದೆನು. ಆತ್ಮಜ್ಞಾನಬೋಧೆಯಿಂದ ನನ್ನನ್ನು ನಿತ್ಯಮುಕ್ತಳನ್ನಾಗಿ ಮಾಡಿ, ಅನುಗ್ರಹಿಸಿದಂತೆಯೇ, ಮುಂದೆ ನನ್ನ ಕರ್ತವ್ಯವೇನೆಂಬುದನ್ನೂ ನಿರೂಪಿಸಬೇಕೆಂದು ಬೇಡುವೆನು.'

ಭೃಗು:— (ಕೈನೀಡಿ ಸಂಭ್ರಮದಿಂದ) 'ಮಗಳೇ! ಇನ್ನು ನಿನ್ನ ತಾಯ್ತಂದೆಗಳ ಅನುಮತಿಯಂತೆ ನೀನು ಅನುಗುಣಯುತನಾದ

ಪತಿಯನ್ನು ಹೊಂದಿ, ಪಾತಿವ್ರತ್ಯಪ್ರಭಾವದಿಂದ ಹುಟ್ಟಿದ ಮತ್ತು ಹೊಕ್ಕ ಕುಲಗಳೆರಡನ್ನೂ ಉದ್ಧರಿಸುವುದೂ, ಮತ್ತು ಈ ಬಗೆಯನಿಷ್ಕಲಂಕವಾದ-ನಿರಾತಂಕವಾದ-ಆತ್ಮಾನಂದದಲ್ಲಿ ನಾನು ಮಾತ್ರ ಸುಖಿಸಿದರೆಸಾಕೆಂಬ ಸ್ವಾರ್ಥವನ್ನೇ ಹಿಡಿಯದೆ, ನಿನ್ನ ಆನಂದಾನುಭವದಲ್ಲಿ ಅಷ್ಟಿಷ್ಟನ್ನು ನಿನ್ನ ಇತರ ಅಕ್ಕ ತಂಗಿ ಯರಿಗೂ ಹಂಚಿಕೊಟ್ಟು, ಅವರು ಪತಿಸೇವಾಘನತರ ಸೌಖ್ಯ ದಿಂದ ಭೂತಲವನ್ನೂ ಸ್ವರ್ಗವನ್ನಾಗಿ ಮಾಡುವಂತೆ ಸರ್ವಕಾಲ-ಸರ್ವಾವಸ್ಥೆಗಳಲ್ಲಿಯೂ ಲೋಕಹಿತಕಾರ್ಯದಲ್ಲಿ ಜಾಗ್ರತೆಯನ್ನು ವಹಿಸಿರಬೇಕಾದುದೂ ನಿನ್ನ ಮುಂದಿನ ಕರ್ತವ್ಯವಾಗಿದೆ. ನಾ ನಿನ್ನು ತೆರಳುವೆನು.

ಚಂದ್ರ:— (ಕೈಮುಗಿದು) 'ಪೂಜ್ಯರಲ್ಲಿ ಮತ್ತೆ! ನಮಸ್ಕರಿಸುವೆನು ಅನು ಗ್ರಹಬುದ್ಧಿಯು, ನಿರಂತರವೂ ಎಚ್ಚರಿಸುತ್ತಿರಬೇಕೆಂದು ಕೋರು ವೆನು.'

ಭೃಗು:— 'ಕಲ್ಯಾಣಮಸ್ತು! ನಿನ್ನ ವಿವಾಹಕ್ಕೆ ಬೇಕಾಗುವ ಪ್ರಯತ್ನ ವನ್ನು ಮಾಡಬಹುದೆಂದು ರಾಜನಿಗೆ ತಿಳಿಸಿ ಹೊರಡುವೆನು. (ಹೊರಡುವನು)

ಚಂದ್ರ:—(ಸಖಿಯರಕಡೆಗೆ ತಿರುಗಿ)'ಸುನೀತೆ! ವಿನೀತೆ! ಏನುಮಾಡುವಿರಿ?

ಸುನೀತೆ:—(ಕಿರುನಗೆಯಿಂದ) ಮಾಡುವುದೇನು? ಕಬ್ಬಿಣವು ಕ್ಷಣ ದಲ್ಲಿ ಕರಗಿದುದನ್ನು ಬೆರಗಾಗಿ ನೋಡುತ್ತಿರುವೆನು.

ವಿನೀತೆ:—ಪ್ರಿಯಸಖಿ! ಏನಾಶ್ಚರ್ಯವು? ನಿಮಿಷಾರ್ಧದಲ್ಲಿ ಪ್ರಕೃ ತಿಯೇ ಬದಲಾಯಿಸಿ ಹೋಗಿದೆಯಲ್ಲವೆ?

ಚಂದ್ರ:—(ತಲೆದೂಗಿ ನಕ್ಕು)ಪ್ರಿಯಸಖಿಯರೇ! ಆಶ್ಚರ್ಯವೇಕೆ? ಋತುಭೇದವಿಲ್ಲದೆ, ಜಾತಿದ್ವೇಷವಿಲ್ಲದೆ ಅಘಟನಘಟನಾ ಚಮ ತ್ಕಾರದಿಂದ ಜಗತ್ತನ್ನೇ ಕುಣಿಸುತ್ತಿರುವ ಮಹಾತ್ಮರ ತಪಃ

ಪ್ರಭಾವವೇ ಅತ್ಯದ್ಭುತವಷ್ಟೆ! ಅದಿರಲಿ, ಇನ್ನು ನೀವು ನಿಮ್ಮ ಕೆಲಸಗಳನ್ನು ಗಮನಿಸಿರಿ.

ಸಖಿಯರು:—ನೀನೇನು ಮಾಡುವೆ?

ಚಂದ್ರ:—ಗುರೂಪದೇಶವಾದ ಯೋಗವನ್ನು ಅಭ್ಯಾಸಮಾಡಿ ನೋಡಬೇಕು.

ಸಖಿಯರು:—ವೃಥಾದೇಹವನ್ನೇಕೆ ಬಳಲಿಸುವೆ?

ಚಂದ್ರ:—ಬಳಲಿಸುವುದಲ್ಲ ಅದರಲ್ಲಿ ಲಾಭವೆಷ್ಟೋ ಇದೆ! ನೀವಿನ್ನು ನನ್ನನ್ನು ವಿಘ್ನಪಡಿಸದಿರಿ

ಸಖಿಯರು:—ನಿನ್ನನ್ನು ನಿರೋಧಿಸಲು ನಮಗೆ ಶಕ್ತಿಯಿಲ್ಲ. (ಸರಿದು ನಿಲ್ಲುವರು) ಚಂದ್ರವದನೆಯು ಭದ್ರಾಸೀನೆಯಾಗಿ ಕುಳಿತು, ನಾಸಾಗ್ರದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಧ್ಯಾನಾರೂಢಳಾಗುವಳು. 'ದೇವಿ! (ತೆರೆಯ ಕಡೆಯಲ್ಲಿ) ಸದ್ಗುರುಕಟಾಕ್ಷವು ಹೇಗಿದೆ,ನೋಡಿದೆಯಾ?

ಸುನೀತೆ:—(ಗಾಬರಿಗೊಂಡು) ಸಖಿ ವಿನೀತೆ! ಮಹಾರಾಣಿಯೊಡನೆ ಮಹಾರಾಜನು ಬರುವಂತಿದೆ. ಸುಕುಮಾರಿಯಾದರೋ ಯೋಗಾಸಕ್ತಳಾಗಿ ಕುಳ್ಳಿರುವಳು; ಏನುಮಾಡುವ?

ವಿನೀತೆ:—(ಚಂದ್ರವದನೆಯ ಬಳಿಗೆ ಬಂದು) ಪ್ರಿಯಸಖಿ! ರಾಜಪುತ್ರಿ! ಏಳುಏಳು! ಜನನೀ ಜನಕರು ಬರುತ್ತಿರುವರು; ಬೇಗ ಏಳು?

ಚಂದ್ರವದನೆ:—(ಕದಲದೆ ಕುಳ್ಳಿರುವಳು)

ಸುನೀತೆ:—(ಖಿನ್ನಳಾಗಿ) 'ಸಖಿ! 'ಕುಣಿವಕಾಲಿಗೆ ಗೆಜ್ಜೆಯೂ ಸೇರಿದಂತೆ,' ಇವಳ ವಿರಕ್ತಿ ಹೃದಯಕ್ಕೆ ಗುರುಗಳ ಉಪದೇಶವೂ ಸೇರಿ ಅನರ್ಥವನ್ನೇ ಉಂಟುಮಾಡುತ್ತಿದೆ. ಇನ್ನಿವಳು ಇಹ ವ್ಯಾಪಾರವನ್ನು ಕಡೆಗಣ್ಣಿಂದಾದರೂ ನೋಡಲಾರಳು.!

(ಸುಪ್ರಭಾದೇವಿಯೊಡನೆ ಸತ್ಯವರ್ಮನಪ್ರವೇಶ)

ಸತ್ಯ:—ಸಖಿಯರೆ! ಸುಕುಮಾರಿಯು ಏನು ಮಾಡುತ್ತಿರುವಳು?

ಸಖಿ:—(ಕೈತೋರಿಸುತ್ತ) ಕಟಾಕ್ಷಿಸಬೇಕು; ಸುಕುಮಾರಿಯು ಯೋಗದಲ್ಲಿ ಕಲ್ಲಾಗಿ ಕುಳಿತಿರುವಳು.

ಸತ್ಯ:—(ಮುಂದೆ ಬಂದು ಚಂದ್ರವದನೆಯ ತಲೆಯಮೇಲೆ ಕೈಯಿರಿಸಿ) 'ಚಂದ್ರಾ, ಚಂದವದನೆ! ತಾಯೀ! ಕಣ್ದೆರೆ! ಏಳುಏಳು?

ಸುಪ್ರಭೆ:—(ಮಗಳ ಕೈಗಳನ್ನು ಹಿಡಿದೆಳೆದು ಕಾತರಸ್ವರದಿಂದ) ಮಗುವೆ! ಹಟಮಾರಿತನದಿಂದ ನಮ್ಮನ್ನು ಮುಳುಗಿಸುವುದೇ ನಿನ್ನಿಷ್ಟವೇ? ಏಳಲಾರೆಯೊ?

ಚಂದ್ರ:—(ಗಾಬರಿಗೊಂಡು ಧಿಗ್ಗನೆದ್ದು) 'ಪ್ರಿಯ ಜನನೀಜನಕರಿಗೆ ವಂದಿಸುತ್ತೇನೆ.' (ನಮಸ್ಕರಿಸುವಳು)

ಸತ್ಯ—ಸುಪ್ರಭೆ:—(ಮಗಳ ಮುಡಿ ನೇವರಿಸಿ, ವಾತ್ಸಲ್ಯದಿಂದ) 'ಮಗಳೆ! ಇನ್ನೆಷ್ಟುಕಾಲ ದೇಹವನ್ನು ಹೀಗೆ ಬಳಲಿಸಬೇಕೆನ್ನುವೆ? ನಿನಗೀ ಕಠಿಣ ತಪಶ್ಚರ್ಯೆಯು ಸರಿಯಲ್ಲ- ಬಿಟ್ಟುಬಿಡು.

ಚಂದ್ರ:—ಅಪ್ಪಾ! ತಮ್ಮ ಆಜ್ಞೆಯನ್ನು ನಾನು ಮೀರಲಾರೆನು. ಆದರೆ, ತಪಶ್ಚರ್ಯೆಯನ್ನು ಕಠಿಣವೆಂದಾರೂ ನಿರಾಕರಿಸ ಬಾರದಷ್ಟೆ?

ಸುಪ್ರಭೆ:—ಅದೆಲ್ಲವೂ ಹಾಗಿರಲಿ, ಚಂದ್ರವದನೆ! ಖಂಡಿತವಾಗಿ ಹೇಳು ನಿನಗೆ ನಮ್ಮ ಇಷ್ಟವನ್ನು ನಡೆಯಿಸಲು ಅಭಿಪ್ರಾಯವುಂಟೋ? ಇಲ್ಲವೆ-ಹೀಗೆಯೇ ಇದ್ದು, ನಮ್ಮನ್ನೂ ಕ್ಲೇಶಕ್ಕೆ ಬಲಿಕೊಡಬೇಕೆಂದಿರುವೆಯೊ?

ಚಂದ್ರ:— (ಚಕಿತಭಾವದಿಂದ)'ಅಮ್ಮ! ಇದೇಕೆ ಹೀಗೆ ಕೋಪಿಸುತ್ತಿರುವೆ?

ಸತ್ಯ:—ಕೋಪಿಸಲಿಲ್ಲ; ಮಗುವೆ! ಕ್ಲೇಶದಿಂದಾಡಿದಮಾತು. ದೇಶದೇಶಾಧೀಶರಿಗೆಲ್ಲಾ ಆಹ್ವಾನೆಗಳು ಹೋಗಿವೆ. ವಿವಾಹಮಹೋತ್ಸವಕ್ಕೆ ಸಕಲ ಸಂಬಾರಗಳೂ ಸಿದ್ಧವಾಗುತ್ತಿವೆ. ನೀನಾದರೆ ಹೀಗೆ ವಿರಕ್ತಳಾಗಿರುವೆ.

ಚಂದ್ರ:—ಅಪ್ಪ! ಕೋಪಿಸಲಾಗದು! ನಾನು ಚಂಡಾಲವಿವಾಹವನ್ನು ಒಪ್ಪುಲಾರೆನು.

ಸತ್ಯ:—ಹಾ! ಹಾಗೆಂದರೇನು? ಚಂಡಾಲವಿವಾಹವೆಂದರೆ ಅಭಿಪ್ರಾಯವೇನು?

ಚಂದ್ರ:—ಅಪ್ಪ! 'ಪಕ್ಷಿಕುಲದಲ್ಲಿ ಕಾಗೆಯು ಚಂಡಾಲವೆನ್ನಿಸುವುದು. ಮೃಗಗಳಲ್ಲಿ ಕತ್ತೆಯು ಚಂಡಾಲವೆನ್ನಿಸುವುದು. ಮಾನವಕುಲದಲ್ಲಿ ಆತ್ಮವಿಚಾರಜ್ಞಾನಶೂನ್ಯನೂ, ಮಾತಾಪಿತೃಗಳಿಗೆ ಅವಿಧೇಯನಾದ ಮದಾಂಧನೂ ಆದವನೇ ಚಂಡಾಲನೆನ್ನಿಸುವನು! ಹೀಗಿರುವುದರಿಂದ ಕ್ಷಣಿಕಸುಖಕ್ಕಾಶೆಪಟ್ಟು, ವಿಚಾರಶೂನ್ಯಪಾತ್ರದಲ್ಲಿ ಸೇರಿ, ಕ್ಲೇಶಪಡಲಾರೆನು. ಕ್ಷಮಿಸಬೇಕು,

ಸತ್ಯ:—ಮಗುವೆ! ನಿನಗೆ ಸಮ್ಮತವಿಲ್ಲದ ಕೆಲಸವನ್ನು ನಾನೆಂದೂ ಮಾಡಲಾರೆನು. ನೀನು ಯಾವ ಬಗೆಯಲ್ಲಿ ಯಾವ ಪಾತ್ರವನ್ನು ವರಿಸುವೆಯೋ ಅವನಿಗೆ ನಿನ್ನನ್ನು ಒಪ್ಪಿಸಿ ಕೃತಾರ್ಥನಾಗಬೇಕೆಂದಿರುವೆನು.

ಚಂದ್ರ:—ಅಪ್ಪ! ಸ್ವಯಂವರವೆಂದು ಪ್ರಸಿದ್ಧಿಪಡಿಸಿರುವುದು ಸರಿಯಷ್ಟೆ. ಹಾಗೆ ಸ್ವಯಂವರಕ್ಕೆಂದು ಬಂದ ರಾಜ-ರಾಜಪುತ್ರರಲ್ಲಿ ನನ್ನ ಪ್ರಶ್ನೆಗಳಿಗೆ ಯಾರಿಂದ ಸದುತ್ತರವು ದೊರೆಯುವುದೋ, ಅವನೇ ನನ್ನ ಪತಿಯಾಗುವನೆಂದು ಸಂಕಲ್ಪಿಸಿರುವೆನು. ಇದನ್ನು ನೀವಿಬ್ಬರೂ ಅನುಮೋದಿಸಿ ಆಶೀರ್ವದಿಸಬೇಕು.

ಸತ್ಯ:—ಹಾಗೆಯೇ ಮಾಡು. ಇದು ನಮ್ಮಿಬ್ಬರಿಗೂ ಸಮ್ಮತವಾಗಿರುವುದು. ದಯಾಮಯನಾದ ಭಗವಂತನು ನಿನ್ನನ್ನು ನಿತ್ಯಮಂಗಳೆಯನ್ನಾಗಿ ಅನುಗ್ರಹಿಸಿ ಕಾಪಾಡುತ್ತಿರಲಿ! ನಡೆ, ನಾವಿನ್ನು ನಿತ್ಯಕೈಂಕರ್ಯವನ್ನು ನೆರವೇರಿಸುವ.

(ಎಲ್ಲರೂ ಹೊರಡುವರು.)

ಇಂತು ಪ್ರಥಮಾಂಕವು.

ಶ್ರೀರಾಮಪ್ರಸನ್ನ.

ದ್ವಿತೀಯಾಂಕವು.

ರಾಜಬೀದಿಯ ಮಹಾದ್ವಾರ.

(ಆಯಾಸವನ್ನು ನಟಿಸುತ್ತ-ರಾಜಕಂಚುಕಿಯು ಪ್ರವೇಶಿಸುವನು)

ವಿನಯಂಧರ (ಕಂಚುಕಿ) } (ಬೇಸರದಿಂದ) 'ಸಾಕಪ್ಪಾ-ಸಾಕು ! ಸೇವಾವೃತ್ತಿಯ ಸೌಖ್ಯವು ಸಾಕುಸಾಕು!!ಹಗಲೂ, ರಾತ್ರಿಯೂ, ಈ ಬಗೆಯಾಗಿ ಹಲುಬುತ್ತಿರುವ ಈ ಸೇವಾವೃತ್ತಿಯ ಮಹತ್ತರವಾದ ಸೌಖ್ಯವು ಸಾಕು. 'ಯಾವ ಕಾಲದಲ್ಲಿ, ಏನಪ್ಪಣೆಯಾಗುವುದೋ, ಯಾವ ಕಾರ್ಯದಲ್ಲಿ ಏನು ಕೊರತೆಯುಂಟಾಗುವುದೋ-' ಎಂಬೀ ಕಾತರದಿಂದಲೇ ಕನಸಿನಲ್ಲಿಯೂ ಕನವರಿಸಿ ಬೀಳುತ್ತಿರುವೆನು! ಒಂದುಗಳಿಗೆ, ನೆಮ್ಮದಿಯಾಗಿ ನಿದ್ದೆಮಾಡುವುದಕ್ಕೂ ಅವಕಾಶ ವಿಲ್ಲ. (ಮೇಲೆನೋಡಿ ಎಚ್ಚತ್ತು ನಗುತ್ತಾ) 'ಹಾ ! ಹಾ !! ಹಾ !!! ಇದೇನು ನನಗೀ ಹುಚ್ಚು ! ನಾನು-ನಾನೂ ಸೇವಕನೇ? ದಾಸ್ಯವೃತ್ತಿಯಲ್ಲಿರುತ್ತೇನೆಯೇ? ನಾನೇನು, ಬರಿಯತೊತ್ತಿಗನೇ? ಏನು ? ನಾನು-ನಾನಾರು ? ಮಹಾರಾಜಾ ಸತ್ಯವರ್ಮ ರಾಜನ ಕಂಚುಕಿ! ಕಂಚುಕಿಯೆಂದರೆ-ಸಾಮಾನ್ಯ ಕಂಚುಕಿಯಲ್ಲ; ಸಮಾನಸ್ಕಂಧನಾದ ಮಿತ್ರನಂತೆಯೇ ಇರಬಹುದಾದ ಸ್ವಾತಂತ್ರ್ಯವು ನನಗಿದೆ. ನನ್ನ ಅಧಿಕಾರಕ್ಕೆ ಎಲ್ಲೆಲ್ಲಿಯೂ ಆತಂಕವೇ ಇರುವುದಿಲ್ಲ. (ಸಂತೋಷದಿಂದ) ಭಲೆ ! ಭಲೆ !! ಮಹಾರಾಜನು ನನ್ನ ಯೋಗ್ಯತೆಗೆ ಸರಿಯಾದ ಅಧಿಕಾರವನ್ನೇ ನನಗೆ ಅನುಗ್ರಹಿಸಿರುವನು. (ಸ್ವಲ್ಪಹೊತ್ತು ಯೋಚಿಸುತ್ತಿದ್ದು ಬಳಿಕ ವಿಚಾರಸೊಂದು)

'ಆದರೇನು ? ಈ ಅಧಿಕಾರದ ಪ್ರಭಾವವು, ನನ್ನನ್ನು ಈರೀತಿ ನಿಂತಕಡೆಯಲ್ಲಿ ನಿಲ್ಲಗೊಡದಿರುವುದು. ಬಂದು-ಬರುತ್ತಿರುವ ರಾಜರ ಮತ್ತು ರಾಜಪರಿವಾರದವರ ಕ್ಷೇಮಸಮಾಚಾರವನ್ನು ತೆಗೆದುಕೊಳ್ಳುವುದರಲ್ಲಿಯೇ ಸಾಕಾಗುವುದು. ಇದರಮೇಲೆ, ನನ್ನ ಮಹಾರಾಜರು, ಮತ್ತು ಪ್ರಧಾನರು, ಕರೆದ ವೇಳೆಯಲ್ಲಿ ಹೋಗಿ, ನಿಲ್ಲಬೇಕಾಗುವುದು. ಅದೂ ಹಾಗಿರಲೆಂದರೆ, ತಿಂಡಿ ಪೋತರಾಗಿ ತಂಡ ತಂಡವಾಗಿ ಬರುತ್ತಿರುವ ಬ್ರಾಹ್ಮಣರನ್ನು ಸನ್ಮಾನಿಸಿ ಕರೆದೊಯ್ದು, ಬೇರೆಬೇರೆ ಬಿಡದಿಗಳಲ್ಲಿ ಬಿಟ್ಟು, ಅಲ್ಲಿ ಅವರನ್ನು ಅಡಿಗಡಿಗೂ ವಿಚಾರಿಸುವ ಕೆಲಸವೆಂದರೆ, ಬಲು ಬೇಸರಿಕೆಯೇ ಆಗುತ್ತಿರುವುದು. ಮಾಡತಕ್ಕುದೇನು ? ರಾಜಾಜ್ಞೆಯೇ ಬಲವತ್ತರವು. ಹೇಗಾದರೂ ಆಗಲಿ, ರಾಜಪುತ್ರಿಯ ವಿವಾಹ ಸಂಭ್ರಮದಿಂದ ಬ್ರಾಹ್ಮಣರ ಬಡತನವೇನೋ ಇಂಗಿ ಹೋಗುವುದು ಖಂಡಿತವು.

(ತೆರೆಯ ಕಡೆ ಗಲಭೆ)

ಕಂಚುಕಿ.—(ಬಗ್ಗಿ ನೋಡಿ ನಗುತ್ತ) ಹಹಹಾ !! ಬಂದರಪ್ಪಾ-ಗಡಬಿಡಿ ಬ್ರಾಹ್ಮಣರು ಬಂದರು. ಹೊಟ್ಟೆಬಾಕರಾದ ಪಟ್ಟೇ ನಾಮಧಾರಿಗಳೂ, ಜಗಳಗಂಟರಾದ ಮುದ್ರೆದಾಸರವರೂ, ವಾಗಾಡಂಭರಪರರಾದ ವಿಭೂತಿಕಟ್ಟಿನ ಶಾಸ್ತ್ರಿಗಳೂ, ತಂಡ ತಂಡವಾಗಿ ಒಬ್ಬರ ಮೇಲೊಬ್ಬರು ಬೀಳುತ್ತ ಬರುತ್ತಿರುವರು. ಬರಲಿ, ಬರಲಿ; ಇವರನ್ನು ನೋಡಿ ಒಂದೆರಡು ಗಳಿಗೆಯಾದರೂ ಕಿಷ್ಕಿಂಧಾವಾಸಿಗಳಾದ ರಾಮಸೈನ್ಯದವರನ್ನು ನೆನೆನೆನೆದು ವಿನೋದಗೊಳ್ಳಬೇಕೆಂದಿರುವೆನು. (ಪ್ರಕಾಶವಾಗಿ ಕೈನೀಡಿ)—'ಬನ್ನಿರಿ, ಸ್ವಾಮಿ! ಬನ್ನಿರಿ. ಭಟ್ಟಾಚಾರ್ಯರು, ಪಂತರು, ಶಾಸ್ತ್ರಿಗಳು, ಸಿದ್ಧಾಂತಿಗಳು, ಸೋಮಯಾಜಿಗಳು, ಅವಧಾನಿಗಳು—ಇನ್ನೂ-ಯಾರು

ಯಾರುಂಟೋ-ಅವರೆಲ್ಲರೂ ಬನ್ನಿರಿ. ಸ್ವಯಂವರ ಮಂಟಪಕ್ಕೆ ಹೋಗುವದಾರಿ ಇಲ್ಲಿದೆ. ಅಲ್ಲೇಕೆ ನಿಂತು ನೋಡುವಿರಿ? ಇಲ್ಲಿಗೆ ಬನ್ನಿರಿ!

ಬ್ರಾಹ್ಮಣರ ಗುಂಪು:—ಬಂದೆವಯ್ಯ ; ಪುಣ್ಯಾತ್ಮ, ಬಂದೆವು. ನಿನಗೆ ಶುಭವಾಗಲಿ.

ತೆರೆಯಲ್ಲಿ:—'ಆರ್‍ಯ-ವಿನಯಂಧರನೆಲ್ಲಿ ? ಸ್ವಯಂವರ ಮಂಟಪಕ್ಕೆ ಬೇಗ ಬರಬೇಕೆಂದು ರಾಜಾಜ್ಞೆಯಾಗಿದೆ.'

ಕಂಚುಕಿ:—ಇದೊ ಬಂದೆನು-ಬಂದೆನು; (ಓಡಿಹೋಗುವನು)

(ಬ್ರಾಹ್ಮಣರ ಪ್ರವೇಶ)

೧ನೇ ಭಟ್ಟಾಚಾರ್‍ಯ:—ಸ್ವಾಮಿಯೊ! ದೇಶಿಕ ಶಿಖಾಮಣಿಗಳೇ! ಕಾಶ್ಮೀರ ದೇಶತ್ತು ರಾಜಾ ಸತ್ಯವರ್ಮರಾಯರ್ ಉದಾತ್ತಪುರುಷರ್. ಇಂದ ಕಲ್ಯಾಣ ಮಹೋತ್ಸವತ್ತಿಲ್ ನಮಕ್ಕೆಲ್ಲಾಂ ಯಥೇಷ್ಟಮಾಯಿ ದ್ರವ್ಯಲಾಭಮಾಹನೊಂಡಿರುಕ್. ನಾಮ್ ಇಪ್ಪವೇ ಪೋಹವಾಂ...

೨ನೇ ದೇಶಿಕ:—(ಸಡಗರದಿಂದ) 'ಆಂ-ಆಂ, ವಂದೇನಿದೊ ವಂದೇನ್ ಆಚಾರ್‍ಯ! ಇದೋ-ಅಡಿಯೇನ್ ಸೇವಕನ್, ರಾಮಾನುಜದಾಸನ್ ಸ್ವಾಮಿಯೊಡನೆಯೇ ಇರಕ್ಕಿರನಂ.' (ಇಬ್ಬರೂ ಮುಂದಕ್ಕೆ ಹೊರಡುವರು.)

೩ನೇ ವಿಷ್ಣುಶರ್ಮ:—'ಸ್ವಾಮಿ! ಸೋಮಯಾಜಿಗಳೇ! ಇದೇನಿಷ್ಟು ತಡೆಮಾಡುತ್ತಿರುವಿರಿ. ಮುಂದಾಗಿ ಹೋಗಿ ಸ್ಥಳವನ್ನಾಕ್ರಮಿಸಿಕೊಂಡಿದ್ದರಲ್ಲವೇ - ನಮ್ಮ ನೋಟ, ಮನದ ಮಂಡಿಗೆಯೂಟ - ಎಲ್ಲವೂ? '

೪ನೇ ಸೋಮಯಾಜಿ:—ಬಂದೆನು, ಸ್ವಾಮೀ ಬಂದೆನು. ಹಾಳು ಬಡತನ, ಮುಪ್ಪು, ಸಾಲುದುದಕ್ಕೆ ಕನ್ಯಾಪಿತೃತ್ವದ ದೊಡ್ಡ ಚಿಂತೆಯು

ಹೊರೆ. ಇವೆಲ್ಲಕ್ಕೂ ಸಮತೂಕವಾಗಿ ಕುಲಕ್ಕೆ ಅನುಕ್ರಮವಾಗಿ ಬಂದಿರುವ 'ಸೋಮಯಾಜಿ' ಹೆಸರನ್ನುಳಿಸಿಕೊಳ್ಳಲು ಯಜ್ಞಯಾಗಗಳನ್ನು ಮಾಡಬೇಕೆಂಬ ಆಶೆಯು ಬೇರೆ. ಇವೆಲ್ಲವೂ ಸೇರಿ–ನನ್ನ ಶಕ್ತಿಯನ್ನೇ ಕುಂದಿಸಿದೆ, ಅದರಲ್ಲಿ ತಲೆಯಮೇಲೆ ಶಾಸ್ತ್ರಪುಸ್ತಕಗಳ ಹೊರೆ, ಬಗಲಲ್ಲಿ ಮಡಿಚೀಲ;–ಇವುಗಳನ್ನು ಹೊತ್ತು ನಡೆಯ ಬರಬೇಕಾದರೆ, ಸ್ವಲ್ಪ ತಡೆಯಾಗುತ್ತದೆ. ಎಲ್ಲಿ ಮಾಧವರಾಯರು ?

೫ನೇ ಮಾಧವ;—(ಓಡಿ ಒಂದು) ಇದೊ – ಇಲ್ಲಿಯೇ ಇರುತ್ತೇನೆ. ಸ್ವಾಮಿಾ! ಇಂದು ರಾಜಸಭೆಯಲ್ಲಿ, ನನ್ನ ಪಾಂಡಿತ್ಯ ಪ್ರದರ್ಶನವೇ ಮೊದಲಾಗಬೇಕೆಂದು ಮಾಡಿದ್ದೇನೆ. ನಮ್ಮ ರಾಮಾಚಾರ್ಯನಂತೂ ಇದಕ್ಕೆ ತುಂಬಾ ಸಹಾಯಕನಾಗಿದ್ದಾನೆ. ಹೇಗೂ ಪ್ರಥಮಸನ್ಮಾನಕ್ಕೆ ನಾವಿಬ್ಬರೂ ಹೋಗಿ ನಿಲ್ಲಬೇಕು.

ಸೋಮಯಾಜಿ:—ಆಗಲಿ, ಸ್ವಾಮಿಾ! ಹಾಗೆಯೇ ಆಗಲಿ. ಯಾರಿಗಾದರೇನು ? ಹೇಗೂ ಬ್ರಾಹ್ಮಣರಿಗೆ ಸನ್ಮಾನವಾಗುವದೊಂದೇ ಗೊತ್ತು. ನಮ್ಮನಮ್ಮ ಲಭ್ಯವಿದ್ದ ಭಾಗವು ನಮಗೆ ಎಂದಿಗಾದರೂ ದೊರೆತೇ ದೊರೆಯುತ್ತದೆ. (ವಿಷ್ಣುಶರ್ಮನೊಡನೆ ಹೊರಡುವನು.)

೬ನೇ ರಾಮಾಚಾರ್ಯ:—(ಮುಂದೆ ಬಂದು ಮಾಧವರಾಯನ ಬೆನ್ನು ತಟ್ಟಿ)'ಭಲೆ! ರಾಯರೇ! ಒಳ್ಳೇ ಜೋರಿನಿಂದ ಸೋಮಯಾಜಿಗಳನ್ನು ಹೊಡೆದಟ್ಟಿದಿರಿ. ಪಾಪ! ಅವರಿಗಂತೂ ಮನಸ್ಸಿನಲ್ಲಿ ತುಂಬಾ ದುಃಖವಾಗಿರಬೇಕು. ಹೇಗಾದರೂ ಆಗಲಿ, ನನಗೆ ನಡೆದು ನಡೆದು ವ್ಯೈನರಗಳೆಲ್ಲಾ ಸಡಿಲವಾಗಿ ಕೀಲುಕೀಲೇ ಕಳೆದು ಬೀಳುವಂತಿದೆ. ಇಷ್ಟಾದರೂ ಆಶೆಯು ಮಾತ್ರ ನಿಲ್ಲಗೊಡುವಂತಿಲ್ಲ. ಮದುವೆ, ಮುಂಜಿ, ನಾಮಕರಣ, ಹವನ,

ಹೋಮ, ಸಂತರ್ಪಣೆಗಳೆಂದಲ್ಲಿಗೆ ನಾನು ಸಾಯುತ್ತಿದ್ದರೂ, ಹೋಗದೆ ಬಿಡತಕ್ಕವನಾಗಿಲ್ಲ.

ಮಾಧವ:—(ತಲೆದೂಗಿ ನಕ್ಕು) 'ಕೇಳಿಲ್ಲವೇ ಆಚಾರ್ಯರೇ! "ನಿಮಂತ್ರಣೋತ್ಸುಖಾವಿಪ್ರಾ" ಇದು ನಿಮಗೊಬ್ಬರಿಗೆ ಬಂದದ್ದಲ್ಲ. ಬ್ರಾಹ್ಮಣರಿಗೆಲ್ಲಾ ಅನ್ವಯಿಸುವ ಮಾತು. ಹಾಗಿಲ್ಲದಿದ್ದರೆ, ತುಂಬಿದ ಬಸುರಿ ಹೆಂಗಸು, ಸಾಯುವ ಮುದುಕಿ ತಾಯಿ; ಹಿಂದೆ ಮುಂದೆ ಕಾಡಿ, ಬೇಡುವಮಕ್ಕಳು, - ಇವೆಲ್ಲರನ್ನೂ ಬಿಟ್ಟು, ಇಲ್ಲಿಗೆ ಇಷ್ಟುದೂರ ಬರುತ್ತಿದ್ದೆನೇನು? ನೋಡಿರಿ!

ರಾಮಾಚಾರ್ಯ:—ಅಹುದಹುದು; ಅದೇನೋ ನಿಜವಾದಮಾತು! ಅಷ್ಟಲ್ಲದೆ 'ಬ್ರಾಹ್ಮಣೋ ಭೋಜನಪ್ರಿಯಃ' ಎಂಬ ಮಾತು ಸುಮ್ಮನೆ ಹುಟ್ಟಲಿಲ್ಲವಷ್ಟೆ?

(ತೆರೆಯಲ್ಲಿ ಭೇರೀತಾಡನ)

ಬ್ರಾಹ್ಮಣರು—ಗಾಬರಿಗೊಂಡು ನೋಡುವರು.

ತೆರೆಯಕಡೆ:---"ಸ್ವಯಂವರಮುಹೂರ್ತವು ಸಮೀಪಿಸುತ್ತದೆ, ರಾಜರಾಜೇಶ್ವರರೂ, ರಾಜಪುತ್ರರೂ ಬಿಜಯಂಗೈಯ್ಯಲು ಪ್ರಾರ್ಥಿಸಲ್ಪಟ್ಟಿರುವರು. ಭೋಜನ, ತಾಂಬೂಲ, ದಕ್ಷಿಣೆ, ಉಡುಗೆರೆಗಳಲ್ಲಿ ಆಶೆಯುಳ್ಳ ಬ್ರಾಹ್ಮಣರೆಲ್ಲರೂ ಬರಬಹುದಾಗಿ ಸೂಚಿಸಿದೆ."

ಬ್ರಾಹ್ಮಣರು:—(ಸಡಗರದಿಂದ ಕರತಾಡನಮಾಡಿ ಕುಣಿಕುಣಿಯುತ್ತ) 'ಭಗವಂತನು ಬ್ರಾಹ್ಮಣಪ್ರಿಯನಲ್ಲವೆ? ಆತನು ಭಕ್ತವತ್ಸಲನಲ್ಲವೆ!! ಭಲೆ! ಅಹುದು, ನಮ್ಮ ಭಕ್ತಿಗೆ ಅಧೀನನಾಗಿ ಉತ್ಸವಗಳನ್ನು ಕರುಣಿಸುತ್ತಿರುವನಲ್ಲವೆ! ನಿಜ! ನಿಜ!! ನಿಜ!!! ನಡೆಯಿರಿ. (ಒಬ್ಬರಮೇಲೊಬ್ಬರು ನುಗ್ಗುತ್ತ ಆದಬ್ಬಿನಿಂದ ಹೊರಡುವರು.)

ಸ್ವಯಂವರಮಂಟಪ.

(ಸತ್ಯವರ್ಮರಾಜನು ರಾಜ-ರಾಜಪುತ್ರ,ರಾಜಪರಿವಾರಗಳೊಡನೆ ಸ್ವಯಂವರ ಮಂಟಪದಲ್ಲಿ ಕುಳಿತಿರುವನು. ಸತ್ಯವರ್ಮರಾಜನ ಎಡ ಮಗ್ಗುಲಲ್ಲಿ ತೆರೆಯು ಇಳಿಬಿಟ್ಟಿರುವುದು.)

ಸತ್ಯ:—(ಪಾರ್ಶ್ವಕ್ಕೆ ತಿರುಗಿ)'ಆಮಂತ್ರಿತರಾದ ರಾಜ-ರಾಜಪುತ್ರ ರೆಲ್ಲರೂ ಬಂದಿರುವರಷ್ಟೆ! '

ಮಂತ್ರಿ:—ಎಲ್ಲರೂ ಬಂದಿರುವರು; ಯಥೋಚಿತವಾದ ಸನ್ಮಾನದಿಂದ ಕುಳಿತಿರುವರು. ಪರಾಮರ್ಶಿಸಬೇಕು!

ತೆರೆಯಲ್ಲಿ:—ಬುಧಜನಪ್ರಿಯನೂ, ದಾನಶೂರನೂ ಆದ ಸತ್ಯವರ್ಮ ಮಹಾರಾಯನಿಗೆ ಮಂಗಳವಾಗಲಿ.

ಸತ್ಯ:—(ಎದ್ದು ನಿಂತು ಕೈಮುಗಿದು, ವಿನಯದಿಂದ) 'ಪೂಜ್ಯರ ಆಶೀರ್ವಾದವನ್ನು ಶಿರಸಾವಹಿಸಿದೆನು, ಇದೊ ವಂದನೆ! ತಮ್ಮೆಲ್ಲರಿಗೂ ಇತ್ತಕಡೆ ಪ್ರತ್ಯೇಕ ಸ್ಥಳವೇರ್ಪಡಿಸಿರುವದು. ವಿಶ್ರಮಿಸಿಕೊಳ್ಳಬಹುದು.'(ಕಂಚುಕಿಯನ್ನು ಕುರಿತು)'ಅಯ್ಯ! ಈ ಬ್ರಾಹ್ಮಣರನ್ನು ಆದರಿಸಿ, ಉಚಿತಸ್ಥಾನದಲ್ಲಿ ಕುಳ್ಳಿರಿಸಿ, ಬೇಗ ಬರಬೇಕು.'

ಕಂಚುಕಿ:—'ಇದೊ ಸಿದ್ಧನಾಗಿರುತ್ತೇನೆ. ನಡೆಯಿರಿ'(ಹೋಗುವನು.)

(ಪುರೋಹಿತನಾದ ಕಂಕಭಟ್ಟನಪ್ರವೇಶ)

ಕಂಕಭಟ್ಟ:—ಸ್ವಸ್ತಿಯಾಗಲಿ! ಮಹಾರಾಜ! ಸ್ವಯಂವರಮುಹೂರ್ತವು ಬಂದಿದೆ. ಸುಕುಮಾರಿಯು ಇಷ್ಟದೇವತೆಯನ್ನು ಆರಾಧಿಸಿ, ಬಂದು, ಅಂತರ ಪಠದೊಳಗಡೆ ಕುಳಿತಿರುವಳು. ಇನ್ನು ವಿಳಂಬಕ್ಕೆ ಕಾರಣವೇನು?

ಸತ್ಯ:—(ವಿನಯದಿಂದ)'ಆರ್ಯರೇ! ಸುಕುಮಾರಿಯು ಸ್ವಯಂವರಕ್ಕೆ ಸಿದ್ಧವಾಗಿರುವಳೇನೆಂದು ತಿಳಿದುಬರಲು ಕೋರುವೆನು.'

ಕಂಕಭಟ್ಟ:—(ತೆರೆಯೊಳಗೆ ಹೋಗಿ ಮತ್ತೆ ಬಂದು)'ಮಹಾರಾಜಾ! ಮೊದಲೇ ಸನ್ನಿಧಿಗೆ ನಿವೇದಿತವಾಗಿರುವ ತನ್ನ ಸಂಕಲ್ಪದಂತೆ ತಾನು ಕೇಳುವ ಪ್ರಶ್ನೆಗೆ ಉತ್ತರವನ್ನು ಕೊಡುವಾತನೆ ತನಗೆ ಸ್ವಾಮಿಯೆಂದು ಮತ್ತೆ ವಿಜ್ಞಾಪಿಸಿರುವಳು.

ರಾಜಾ:—(ಸಭಿಕರನ್ನು ನೋಡಿ) ಪ್ರಿಯಬಾಂಧವರೇ! ಸುಕುಮಾರಿಯ ಪ್ರಾರ್ಥನೆಯನ್ನು ಕೇಳಿದಿರಷ್ಟೆ; ನಿಮ್ಮ ಉತ್ತರವೇನು?

ಸಭಿಕರು:—ಪ್ರಶ್ನೆಗೆ ಆರಂಭವಾಗಲಿ. ಯಥಾಮತಿಯಾಗಿ, ಉತ್ತರವನ್ನು ಕೊಡುವೆವು.

ರಾಜಾ:—ಪೂಜ್ಯರೇ! ಸುಕುಮಾರಿಗೆ ಪ್ರಶ್ನೆಯನ್ನಾರಂಭಿಸಲು ಸೂಚಿಸಿರಿ. (ಕಂಕಭಟ್ಟನು ತೆರೆಯ ಬಳಿಯಲ್ಲಿ ನಿಂತು' ಮಂಗಳಾಂಗಿ! ಪ್ರಶ್ನೆಗೆ ಆರಂಭವಾಗಲಿ' (ಸಭೆಯ ಕಡೆಗೆನೋಡಿ)! ಸಭಿಕರೆಲ್ಲರೂ ಗಮನವಿಟ್ಟು ಕೇಳಿರಿ, ಪ್ರಶ್ನೆಗೆ ಪ್ರಾರಂಭವಾಗುವುದು.

(ತೆರೆಯ ಒಳಗೆ ಕುಳಿತ ರಾಜಪುತ್ರಿಯ ಪ್ರಶ್ನೆ)

೧ನೇ ಪ್ರಶ್ನೆ:—ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಶ್ರೇಷ್ಠವಾವದು?

(ರಾಜ ರಾಜಸುತರು ಪರಸ್ಪರ ಮುಖಾವಲೋಕನದಿಂದ ಹರ್ಷ ವಿಸ್ಮಯ, ವಿಷಾದಗಳನ್ನು ಸೂಚಿಸುತ್ತ ಕುಳ್ಳಿರುವರು.)

ಮತ್ತೆ ಪ್ರಶ್ನೆ;—ಚತುರ್ವಿಧ ಪುರುಷಾರ್ಥಗಳಲ್ಲಿ ಶ್ರೇಷ್ಠವಾವುದು? ಉತ್ತರವಿಲ್ಲವೇಕೆ?

(ಕಡೆಯಲ್ಲಿ ಕುಳಿತಿದ್ದ ರಾಜಪುತ್ರನ ಉತ್ತರ)

೧ನೇ ಉತ್ತರ:—ಧರ್ಮಾದಿ ಚತುರ್ವಿಧಪುರುಷಾರ್ಥಗಳಲ್ಲಿಯೂ ಮೋಕ್ಷವೇ ಶ್ರೇಷ್ಠವಾದುದು.

೨ನೇ ಪ್ರಶ್ನೆ:—ಮಾನವರಿಗೆ ಸುಖಾನಂದವಾವುದು?

೨ನೇ ಉತ್ತರ:—ನಾದ ಬ್ರಹ್ಮವೇ ಸುಖಾನಂದವು.

೩ನೇ ಪ್ರಶ್ನೆ:—ದಶವಿಧ ನಾದಗಳಾದ ದೇವವಾದ್ಯಗಳನ್ನು ಮಾನವರು ಯಾವ ರೀತಿಯಲ್ಲಿ ಕೇಳಬಲ್ಲರು?

೩ನೇ ಉತ್ತರ:—ದಶವಿಧನಾದಗಳನ್ನೂ ರೇಚಕದಿಂದೆಬ್ಬಿಸಿ ಕೇಳಬಹುದು?

೪ನೇ ಪ್ರಶ್ನೆ:—ಆತ್ಮಾರಾಮನ ಗಮನಾಗಮನದ ಅರ್ಥವೇನು?

೪ನೇ ಉತ್ತರ:—ಆತ್ಮಾರಾಮನ ಗಮನಾಗಮನವೇ ಪ್ರಣವವೆನ್ನಿಸುವುದು.

೫ನೇ ಪ್ರಶ್ನೆ:—ಲಿಂಗ ಶರೀರದಲ್ಲಿ ಪರಬ್ರಹ್ಮವಿರುವ ಸ್ಥಾನವಾವುದು?

೫ನೇ ಉತ್ತರ:—ಲಿಂಗ ಶರೀರದಲ್ಲ ಆಪೋಜ್ಯೋತಿ ಸ್ವರೂಪನಾದ ಪರಬ್ರಹ್ಮನು, ದಿವ್ಯಚಕ್ಷುಸ್ಸಿನಲ್ಲಿ ಪ್ರಕಾಶಿಸುತ್ತಿರುವನು.

ರಾಜಪುತ್ರಿ:—(ಮರೆಯಲ್ಲಿಯೇ) 'ಆರ್ಯ–ವಿನಯಂಧರ! ಈವರೆಗೆ ಉತ್ತರವನ್ನು ಕೊಟ್ಟ ಮಹಾನುಭಾವನಾರು?'

ಕಂಚುಕಿ:—(ಮುಂದೆಬಂದು) ದೇವಿ! ಈತನೇ ಆಂಧ್ರದೇಶದ ಯುವರಾಜಾ, ವಿಂಧ್ಯಾಖ್ಯರಾಯನು, ರೂಪ, ವಯೋವಿದ್ಯಾವಿನಯ ಸಂಪನ್ನತೆಯಲ್ಲಿ ಅದ್ವಿತೀಯಪುರುಷನು.

ರಾಜಪುತ್ರಿ:—ಆತನೇ ನನಗೆ ಸ್ವಾಮಿಯಾಗಿರುವನೆಂದು, ನನ್ನ ಪೂಜ್ಯ ಜನಕನಿಗೆ ನಿವೇದಿಸು.

ರಾಜ:—(ಸಂಭ್ರಮದಿಂದೆದ್ದು ಬಂದು ವಿಂಧ್ಯಾಖ್ಯನನ್ನು ಆಲಿಂಗಿಸಿ, ಆನಂದ ಬಾಷ್ಪವನ್ನು ಸುರಿಸುತ್ತ, 'ಯುವರಾಜಾ! ವಿದ್ವತ್ಪಕ್ಷಪಾತವುಳ್ಳ ನನ್ನ ಸುಕುಮಾರಿಯ ಮೆಚ್ಚಿಕೆಗೆ ಪಾತ್ರರಾದಿರಿ! ದಯೆತೋರಿ, ಸುಕುಮಾರಿಯ ಪಾಣಿಗ್ರಹಣಮಾಡಿ, ನನ್ನೀ ಕನ್ಯಾಪಿತೃತ್ವದ ಮಹದ್ಭಾರವನ್ನು ಇಳುಹಬೇಕೆಂದು ಬೇಡುತ್ತೇನೆ. ಉಪೇಕ್ಷಿಸದೆ ಅಪ್ಪಣೆಮಾತ್ರ ಮಾಡಿರಿ?

ವಿಂಧ್ಯಾಖ್ಯ:—(ಕೈಮುಗಿದು ವಿನಯದಿಂದ) 'ಪೂಜ್ಯರೇ! ಗುರುಸದೃಶರಾದ ತಾವು ಇಷ್ಟು ಉಪಚಾರೋಕ್ತಿಯನ್ನು ಹೇಳ

ಲಾಗದು ತಮ್ಮ ಆಜ್ಞೆಯನ್ನು ಮೀರಲು ನಾನು ಅಶಕ್ತನಾಗಿದ್ದರೂ, ಪಾಂಚಾಲದೇಶಾಧಿಪತಿಯ ಪುತ್ರಿಯನ್ನು ಮದುವೆಯಾಗಿರುವ ನನ್ನನ್ನು ಹೊಂದಿ, ತಮ್ಮ ಸುಕುಮಾರಿಯು ಮುಂದೆ ಚಿಂತೆಗೊಳಗಾಗಬಾರದೆಂದೂ, ಅನುಕೂಲನಾದವನಿಗೆ ಕೊಟ್ಟು, ಸುಕುಮಾರಿಯ ಸುಖವನ್ನು ಹೆಚ್ಚಿಸಬೇಕೆಂದೂ— ಕೇಳುತ್ತಿರುವೆನು. ಹೀಗೆ ನಿರಾಕರಿಸಿದನೆಂದು ಆಗ್ರಹಿಸಬಾರದು. '

ಸತ್ಯ :—(ಖಿನ್ನನಾಗಿ ಕಂಚುಕಿಯನ್ನು ಕುರಿತು) ' ವಿನಯಂಧರ ! ಚಂದ್ರವದನೆಗೆ ಈ ಸಂಗತಿಯನ್ನು ತಿಳಿಸಿ, ಉತ್ತರವನ್ನು ತರಬೇಕು. '

ಕಂಚುಕಿ :—' ಆಗಬಹುದು ' (ತೆರೆಯೊಳಕ್ಕೆ ಹೋಗಿದ್ದು, ಮತ್ತೆ ಬಂದು) ' ಮಹಾರಾಜಾ ! ಸುಕುಮಾರಿಯು ಪಿತೃಸಮ್ಮುಖದಲ್ಲಿ ಹೀಗೆಂದು ವಿಜ್ಞಾಪಿಸುತ್ತಿರುವಳು.

ಸತ್ಯ :—ಏನೆಂದು ?

ಕಂಚುಕಿ :—' ನನ್ನ ಪರಮಪೂಜ್ಯಪಿತನೇ ! ಲೋಕದಲ್ಲಿ, ಕನ್ಯಾದಾನ, ಭೂದಾನ, ಧನದಾನಗಳನ್ನು ಒಂದು ಬಾರಿ ಮಾಡುವುದಲ್ಲದೆ, ಮಾಡಿದುದನ್ನು ಬೇರೊಂದು ಕಡೆಗೆ ತಿರುಗಿಸುವುದು, ತಿಳಿವುಳ್ಳವರಿಂದಾಗದಲ್ಲವೆ ? ಒಮ್ಮೆ ಒಂದು ಪಾತ್ರದಲ್ಲಿತ್ತ ಈ ಮನಸ್ಸನ್ನು ಹಿಂತೆಗೆಯಿಸಲಿಕ್ಕಾಗಲೀ,—ಮತ್ತೊಬ್ಬರಿಗೆ ಕೊಡುವುದೆಂದರಾಗಲೀ—ಹೇಗಾಗುವುದು ? ನನ್ನ ಮನಸಾ ನಿಶ್ಚಿತನಾಗಿರುವ ಆ ಪುಣ್ಯಪುರುಷನಿಗೆ ಪತ್ನಿಯೊಬ್ಬಳಿರಲಿ, ಹಲವರಿರಲಿ, —ನನಗದರಿಂದ ಕ್ಲೇಶವಾಗುವಂತಿಲ್ಲ. ಹಾಗೂ ಒಂದುವೇಳೆ, ಆತನು ನನ್ನನ್ನು ಪರಿಗ್ರಹಿಸದೆ ತಿರಸ್ಕರಿಸುವ ಪಕ್ಷ

ಪಲ್ಲಿಯೂ—ನನಗಾತನೇ ಆರಾಧ್ಯದೇವನಲ್ಲದೆ ಮತ್ತೊಬ್ಬನಾಗುವಂತಿಲ್ಲ. ಇದೇ ನನ್ನ ಪ್ರಮಾಣವಾಕ್ಯವು.'

ಸತ್ಯ :—(ಏಂದಾಖ್ಯನನ್ನು ನೋಡಿ) 'ಯುವರಾಜಾ! ಅಭಿಜ್ಞಚಿತ್ತಕ್ಕೆ ಸುಕುಮಾರಿಯ ದೃಢ ಸಂಕಲ್ಪವು ನಿವೇದಿತವಾಗಿದೆಯಷ್ಟೆ; ಮತ್ತೇನುಹೇಳುವಿರಿ? '

ಏಂದಾಖ್ಯ:—(ಕೆಲವು ಹೊತ್ತು ಯೋಚಿಸುತ್ತಿದ್ದಂತೆನಟಿಸಿ,) 'ಮಹಾರಾಜ! ತಮ್ಮ ಸುಕುಮಾರಿಯ ದೃಢಸಂಕಲ್ಪವು ಶ್ಲಾಘಾರ್ಹವೇ ಸರಿ. ಆದರೂ, ಸ್ತ್ರೀ ಸಾಮಾನ್ಯವನ್ನೇ ನುಂಗುತ್ತಿರುವ ಅಪವಾದದ ದೌರ್ಜನ್ಯ ದೋಷದಿಂದ, ಮುಂದೆ ಇಬ್ಬರಿಗೂ ಶ್ರೇಯಸ್ಸಾಧನೆಯಾಗುವಂತಿರಬೇಕೆಂಬ ಸಂಕಲ್ಪದಿಂದ—ತಮ್ಮ ಸುಕುಮಾರಿ ಯಲ್ಲಿ ಕೆಲವು ಉತ್ತರ ಪ್ರತ್ಯುತ್ತರಗಳನ್ನು ಬೆಳೆಯಿಸಬೇಕೆಂದಿರುವೆನು. ಅಷ್ಟಕ್ಕೆ ಅವಕಾಶವಿರುವುದಾದರೆ,—

ಸತ್ಯ :—ವಿನಯಂಧರ! ಯುವರಾಜರ ಆಶಯಕ್ಕೆ ಉತ್ತರವೇನು!

ಕಂಚುಕಿ :—ಸಂದೇಹವಾಗಿರುವ ಅಂಶನೆಲ್ಲವನ್ನೂ ಕೇಳಬಹುದೆಂದೂ, ಸಮಂಜಸವಾದ ಉತ್ತರವನ್ನು ಕೊಡಲು ಅಭ್ಯಂತರವಿಲ್ಲವೆಂದೂ ಸೂಚಿಸುತ್ತಿರುವರು.

ಸತ್ಯ :—ಆಯುಷ್ಮಂತರೇ! ಇನ್ನು ಪ್ರಾರಂಭವಾಗಲಿ.

(ಏಂದಾಖ್ಯನ ಪ್ರಶ್ನೆಗೆ ಪ್ರಾರಂಭ.)

೧ನೇಪ್ರಶ್ನೆ :—ಪರಸ್ಪರ ವೈರಿಗಳಾಗಿರುವ ಧರ್ಮ, ಅರ್ಥ, ಕಾಮಗಳು ಮೈತ್ರೀಭಾವದಿಂದ ಏಕತ್ರವಿರುವದೆಲ್ಲಿ ?

ಉತ್ತರ :—ಅನುಕೂಲವತಿಯೂ, ಸಹಧರ್ಮಚಾರಿಣಿಯೂ ಆದ ಪತ್ನಿಯಿದ್ದೆಡೆಯಲ್ಲಿಯೇ ಧರ್ಮಾರ್ಥಕಾಮಗಳು ಮಿತ್ರತ್ವದಲ್ಲಿರುವುವು.

ಪ್ರಶ್ನೆ :—ಮೋಕ್ಷವನ್ನೂ ಬಯಸದೆ, ಮರಣಭೀತಿಯನ್ನು ಬಿಟ್ಟಿರುವ ಮಹನೀಯರಾರು ?

ಉತ್ತರ ;—ಜೀವನತತ್ವವನ್ನೂ, ಪರಮಾತ್ಮಸಂಬಂಧ ಸ್ವರೂಪಗಳನ್ನೂ ತಿಳಿದು, ಆತ್ಮಾನಂದದಿಂದ ಜಗತ್ತನ್ನೇ ತನ್ನ ಪರಿವಾರದಂತೆ ಭಾವಿಸಿ, ಸಮಸ್ತ ಪ್ರಾಣಿವರ್ಗಕ್ಕೂ ಹಿತವನ್ನು ಕೋರುತ್ತಿರುವ ಪಾರಮಾರ್ಥಿಕ ಜ್ಞಾನಸಂಪನ್ನರೇ ಮರಣಭೀತಿಯನ್ನು ಬಿಟ್ಟು, ಮೋಕ್ಷವನ್ನು ಕೋರದ ನಿತ್ಯತೃಪ್ತರು.

ಪ್ರಶ್ನೆ :—ಸಚ್ಚಿದಾನಂದವನ್ನು ಹೊಂದಲು ಸಾಧನವಾವುದು ?

ಉತ್ತರ :—ಅರಿಷಡ್ವರ್ಗನಿಗ್ರಹದಿಂದ ಚಿತ್ತಶುದ್ಧಿಯನ್ನುಂಟು ಮಾಡಬಲ್ಲ ದಿವ್ಯಜ್ಞಾನ ಬೋಧಕನಾದ ಸದ್ಗುರುವಿನ ಅನುಗ್ರಹವೇ ಸಚ್ಚಿದಾನಂದಕ್ಕೆ ಸಾಧನವು.

ವಿಂದಾಖ್ಯ :—(ಸಂತೋಷದಿಂದ-ಸ್ವಗತಂ) 'ಆಹಾ ! ಎಂತಹ ವಿದ್ವತ್ತು ! ಎಷ್ಟು ಅದ್ಭುತವಾದ ಪ್ರತಿಭಾಸಂಪನ್ನತೆ !! ಇನ್ನೆಷ್ಟರ ಮನಸ್ಸ್ಥೈರ್ಯ !!! ಆಶ್ಚರ್ಯಾಶ್ಚರ್ಯವು !! ಈ ದೇವಿಯು ದೈವಿಕವ್ಯಕ್ತಿಯಾಗಿರಬೇಕಲ್ಲದೆ, ಸಾಧಾರಣ ಮಾನವಿಯಲ್ಲ. ಈವರೆಗೆ ನಡೆದ ವಿದ್ಯಮಾನಗಳಿಂದಲೂ, ಇವಳಿಂದ ಹೊರಟ ಉತ್ತರ ಪ್ರತ್ಯುತ್ತರಗಳಿಂದಲೂ, ಸಾಧ್ವೀಕುಲ ಶಿರೋಮಣಿಯಾದೀ ದೇವಿಯ ಸಂಸರ್ಗ-ಸಹವಾಸಗಳು ಅತ್ಯಂತ ಶ್ರೇಯಸ್ಕರವೆಂದೂ, ಪುರುಷಾರ್ಥ ಚತುಷ್ಟಯಕ್ಕೂ ಆಧಾರವೆಂದೂ ನಿರ್ಧರವಾಗುತ್ತಿರುವುದು. ಇದು ನನ್ನ ಸುಕೃತವೇ ಸರಿ. (ಪ್ರಕಾಶವಾಗಿ ರಾಜನನ್ನು ನೋಡಿ)—"ಪೂಜ್ಯಪಾದರೆ ! ದೇವೀಸ್ವರೂಪಿಣಿಯಾದ ತಮ್ಮ ಪುತ್ರಿಯ ಪಾಣಿಗ್ರಹಣಕ್ಕೆ ತ್ರಿಕರಣಸಾಕ್ಷಿಯಾಗಿ ಒಪ್ಪಿರುವೆನು."

(ರಾಜಪುತ್ರರೆಲ್ಲರೂ ಕರತಾಡನ ಮಾಡುವರು.)

ಸತ್ಯ :—(ಸಂಭ್ರಮದಿಂದ ವಿಂದಾಖ್ಯನನ್ನು ಆಲಿಂಗಿಸಿ) 'ಆಯುಷ್ಮಂತರೆ ! ಯುವರಾಜರೇ !! ಉಪಕೃತನಾದೆನು ; ಪುನೀತನಾದೆನು !

ಕನ್ಯಾಪಿತೃತ್ವದ ಭಾರವನ್ನಿಳಿಸಿ, ಕೃತಾರ್ಥನಾದೆನು ! ಪುತ್ರ ಕರ್ತವ್ಯವನ್ನು ನೆರವೇರಿಸಿ ಧನ್ಯನೆನ್ನುವಂತೆ ಮಾಡಿದಿರಿ—ಸುದಿನವು! ಇಂದೇ ಸುದಿನವು. ಈ ನನ್ನ ಆನಂದವು ಆ ಪರಮಾತ್ಮನಿಗೇ ಅರ್ಪಿತವು. (ಮಂತ್ರಿಯ ಕಡೆಗೆ ತಿರುಗಿ) 'ಅಮಾತ್ಯವರ್ಯರೇ ! ನಮ್ಮ ಪ್ರಿಯಬಾಂಧವರಾಗಿರುವ ಈ ರಾಜರಾಜೇಶ್ವರರುಗಳನ್ನೆಲ್ಲಾ ಬಿಡಾರಗಳಿಗೆ ಕರೆದುಕೊಂಡು ಹೋಗಿ,—ಸುಖ ಭೋಜನಾದಿಗಳಿಂದ ತೃಪ್ತರಾಗಿ ವಿಶ್ರಮಿಸಿ ಕೊಳ್ಳುತ್ತಿರುವಂತೆ, ಸೇನಾಪತಿಗಳೊಡನೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ' (ಸಭಿಕರನ್ನುದ್ದೇಶಿಸಿ) ' ಪ್ರಿಯಬಾಂಧವರೆ ! ಸನ್ಮಿತ್ರಸಮಾಜದವರೇ ; ಆಯಾಸಗೊಂಡಿರುವ ತಾವುಗಳು, ಸುಖಭೋಜನ, ಶಯನ,—ಸರಸ ಪ್ರಸಂಗಾದಿಗಳಿಂದ ಇಂದು ವಿಶ್ರಮಿಸಿಕೊಂಡು, ನಾಳೆಯೇ ನಡೆಯಬೇಕಾಗಿರುವ ಸುಕುಮಾರಿಯ ಪರಿಣಯ ಮಹೋತ್ಸವದಲ್ಲಿ ನನಗೆ ಸಹಾಯಕರಾಗಿ ಸೇರಿ, ಆನಂದಕ್ಕೆ ಭಾಗಿಗಳಾಗಬೇಕೆಂದು ಕೋರುವೆನು.

ರಾಜರಾಜೇಶ್ವರರು: —(ಎದ್ದುನಿಂತು ಏಕವಾಕ್ಯತೆಯಿಂದ) ಸಮ್ಮತವು, ಸಮ್ಮತವು.'

(ಮಂತ್ರಿಯೊಡನೆ ಎಲ್ಲರೂ ಹೊರಡುವರು.)

ರಾಜ:—(ಕಂಚುಕಿಯನ್ನು ಕುರಿತು) 'ವಿನಯಂಧರ ! ಈಗಲೇ ಹೋಗಿ ಗುರು ಸನ್ನಿಧಿಯಲ್ಲಿ ಶುಭವಾರ್ತೆಯನ್ನು ನಿವೇದಿಸಿ, ನಾಳೆಯ ಕನ್ಯಾಮಹೋತ್ಸವವನ್ನು ನೆರವೇರಿಸಲು ಕೃಪೆಮಾಡಬೇಕೆಂದು—ಬಿಜಯಂಗೈಸಿಕೊಂಡು ಬರಬೇಕು.'

ಕಂಚುಕಿ:—'ಅಪ್ಪಣೆ.' (ಹೊರಡುವನು.)

ರಾಜ:—(ಪುರೋಹಿತನನ್ನು ಕುರಿತು) 'ಆರ್ಯರೇ ! ತಾವು-ಈದಿನದಲ್ಲಿ ಸುಕುಮಾರಿಯಿಂದ ನಡೆಯಿಸಲ್ಪಡಬೇಕಾಗಿರುವ ಶುಭಕಾರ್ಯಗಳೆ

ಲ್ಲವನ್ನೂ ಕ್ರಮವಾಗಿ ನಡೆಯಿಸುತ್ತಿದ್ದರೆ, ಗುರುದೇವರ ಆಗಮನವಾದೊಡನೆಯೇ ನಾವೂ ಬರುವೆವು.

ಪುರೋಹಿತ:—ಶುಭಮಸ್ತು. (ಹೋಗುವನು.)

ಸತ್ಯ:—(ವಿಂದಾಖ್ಯನ ಕೈಹಿಡಿದು) 'ಆಯುಷ್ಮಂತರೇ! ಕುಲಗುರುಗಳ ಆಗಮನ ಪರ್ಯಂತ ನಾವು ನಿತ್ಯಾನುಷ್ಠಾನಗಳನ್ನು ನೆರವೇರಿಸಿ, ಭಗವದ್ಭಜನಮಾಡುತ್ತಿರುವ ದೊಳ್ಳೆಯದಲ್ಲವೆ?

ವಿಂಧಾಖ್ಯ:—ಆಜ್ಞಾಧೀನನಾಗಿಯೇ ಇರುತ್ತೇನೆ, ಹೊರಡಬಹುದು.

(ಇಬ್ಬರೂ ಹೊರಡುವರು.)

ಇಷ್ಟಕ್ಕೆ ದ್ವಿತೀಯಾಂಕವು.

—o—

ಶ್ರೀರಾಮಪ್ರಸನ್ನ

ತೃತೀಯಾಂಕವು.

ಚಂದ್ರವದನೆಯ ಅಂತಃಪುರ.

(ವಿಂದಾಖ್ಯನು ಚಂದ್ರವದನೆಯೊಡನೆ ಚಿಂತಿಸುತ್ತ ಕುಳಿತಿರುವನು)

ವಿಂದಾಖ್ಯ:—(ಹಣೆಯಮೇಲೆ ಕೈಯಿಟ್ಟು ನಿಟ್ಟುಸಿರಿಟ್ಟು) 'ಭಗವಂತ! ಕ್ಷಮಿಸು'

ಚಂದ್ರವದನೆ:—(ಪತಿಯ ಕೈಹಿಡಿದು ಪ್ರೇಮಾಧಿಕ್ಯದಿಂದ) 'ಪ್ರಾಣೇಶ್ವರಾ! ಇದೇನೀ ಅನರ್ಥ ಚಿಂತೆ? ಕಾರಣರಾರು? ನನ್ನಿಂದ ಅಪರಾಧವೇನಾದರೂ.—'

ವಿಂದಾಖ್ಯ:—(ನಿಟ್ಟುಸಿರಿಟ್ಟು) 'ಅಯ್ಯೋ, ದೇವಿ! ಪವಿತ್ರಮೂರ್ತಿಯಾದ ನಿನ್ನಿಂದ-ಅಪರಾಧವೇನಾಗುವುದು? ಇಲ್ಲ; ಸ್ವಯಂ

ಕೃತಾಪರಾಧದಿಂದ ಕೃತಘ್ನನಾಗಿರುವ ನನಗೆ, ಎಂತಹ ಘೋರ ನರಕವೋ ತಿಳಿಯದೆ-ಚಿಂತಿಸುತ್ತಿರುವೆನು.

ಚಂದ್ರ:—(ಗಾಬರಿಯಿಂದ) 'ಇದೇನೀ ಅಶುದ್ಧವಾಕ್ಕು? ಯಾವಮಹಾಪರಾಧವನ್ನು ಮಾಡಿದುದಕ್ಕಾಗಿ ಈ ಸಂತಾಪ?

ವಿಂದಾಖ್ಯ:—(ಪತ್ನಿಯಕೈಹಿಡಿದು ಕಂಪಿತಸ್ವರದಿಂದ) 'ದೇವೀ! ಹೇಳು, ಈ ನನ್ನ ದೇಹವೂ, ಈವರೆಗಣ ಜೀವನವೂ-ನನಗಾಗಿ ಏರ್ಪಟ್ಟಿರುವ ಜೀವನೋಪಾಯ ಮಾರ್ಗವೂ - ಯಾರಿಂದಾಯಿತು? ನನ್ನಿಂದಲೇ! ಬರಿಯ-ನನ್ನ ಬಲದಿಂದಲೇ? ಇದಕ್ಕೆ ಕರ್ತನು ನಾನೇ?

ಚಂದ್ರ:—(ಕೌತುಕದಿಂದ) 'ಪ್ರಾಣನಾಥ! ಹಾಗೆಂದು ಹೇಳುವವರಾರು? ಅವೆಲ್ಲಕ್ಕೂ ಕರ್ತರಾದವರು ಪೂಜ್ಯರಾದ ತಾಯ್ತಂದೆಗಳು, ಮತ್ತು ಭಗವಂತನು.

ವಿಂದಾಖ್ಯ:—(ಮೊದಲಿನಂತೆಯೇ) ಹಾಗಿದ್ದೂ, ಆ ತಾಯ್ತಂದೆಗಳ ವಿಷಯದಲ್ಲಿ, ಆ ಭಗವತ್ಸ್ವರೂಪ ಸಾಕ್ಷಾತ್ಕಾರಕ್ಕೆ ಸಾಕಾರ ಪಾತ್ರರಲ್ಲಿ ನಾನು ನಡೆಯಿಸಿರುವ ಆಚರಣೆಯು ಕೃತಘ್ನತೆಯಲ್ಲವೆ? ಹೇಳು!

ಚಂದ್ರ:—ಅಂತಹ ಅಪರಾಧವೇನಾಗಿದೆ? ತಿಳಿಯಲಿಲ್ಲವಲ್ಲಾ!

ವಿಂದಾಖ್ಯ:—ಇದಕ್ಕೂ ಹೆಚ್ಚಾದ ಅಪರಾಧವು ಬೇಕೇ—ದೇವಿ! ತಾಯ್ತಂದೆಗಳು ಮಕ್ಕಳಾಗಬೇಕೆಂದು ಹಂಬಲಿಸಿ, ಕಂಡ ಕಂಡ ಕಲ್ಲು ಮರಗಳಿಗೂ ಕೈಮುಗಿದು ಬೇಡುವದೇಕೆ? ಹುಟ್ಟಿದ ಮಕ್ಕಳು, ತಮ್ಮ ಮುಂದಿನ ವಿತ್ತಕ್ಕೆ ಪಾಲುದಾರರಾಗಬೇಕೆಂದು ಮಾತ್ರವೇ? ಗರ್ಭಧಾರಣಕ್ಲೇಶನನ್ನು ಸಹಿಸಿ, ಆ ಬಳಿಕ ಹುಟ್ಟಿದ ಮಕ್ಕಳ ರೋಗ, ಸಂಕಟ, ಕೋಟಲೆಗಳನ್ನೂ ಸಹನೆಯಿಂದ ತಡೆದು ಕಾಪಾಡಿದ ಆ ತಾಯಿಯರನ್ನೂ, ಹಿಂದು

ಮುಂದು ನೋಡದೆ ಕಂಡದಾರಿಯಲ್ಲಿ ಕೆಟ್ಟುಹೋಗುತ್ತಿದ್ದವರನ್ನು ವಿವೇಕಮಾರ್ಗದಲ್ಲಿ ಕರೆತಂದು ನಿಲ್ಲಿಸಿ, ಸ್ಥಿರಪ್ರಜ್ಞೆಯೆಂಬ ಚೈತನ್ಯವನ್ನು ತುಂಬಿದ ವಾತ್ಸಲ್ಯಪರಿಪೂರ್ಣರಾದ ಆ ತಂದೆಗಳನ್ನೂ, ಪರಮಪೂಜ್ಯರಾದ ಆ ಗುರುಜನರನ್ನೂ ಮರೆತು, ಕೇವಲ ದೇಹಾಭಿಮಾನದಿಂದ ಇಂದ್ರಿಯಪರವಶನಾಗಿ, ವಿಷಯಲಾಲಸೆಯಲ್ಲಿ ಬಿದ್ದು ಒದ್ದಾಡುತ್ತಿರುವ ನನ್ನ ಕೃತಘ್ನತೆಗೆ, ಪ್ರಾಯಶ್ಚಿತ್ತವೇನು? ನಾನು ನನ್ನ ತಾಯ್ತಂದೆಗಳಿಂದ ಅಪ್ಪಣೆ ಹೊಂದಿ, ವೇದಾಂತರಹಸ್ಯಾದಿಗಳನ್ನು ತಿಳಿಯಲು ಸ್ವದೇಶತ್ಯಾಗ ಮಾಡಿ ಹೊರಟು, ಮೂರು ವರ್ಷಗಳಾದುವು. ಈ ವೇಳೆಗೆ ನನ್ನ ವಿಯೋಗದಿಂದ ಆ ನನ್ನ ಪರದೈವಸ್ವರೂಪರ ಸ್ಥಿತಿಯೇನಾಗಿದೆಯೆಂಬುದೇ ತಿಳಿಯಲಾರದೆ ಅಜ್ಞಾನದಲ್ಲಿ ಬಿದ್ದಿದ್ದೆನು. ಈಗೇನುಮಾಡಲಿ? ಪ್ರಿಯೆ, ಹೇಳು—ಇದರಿಂದ ನಾನು ನಿನ್ನನ್ನು ಧಿಕ್ಕರಿಸದೆನೆಂದು ಮಾತ್ರ ತಿಳಿಯಬೇಡ. ಪಶ್ಚಾತ್ತಾಪದಿಂದ ಕೇಳಿದೆನೆಂದು ತಿಳಿದು ಸಮಾಧಾನವನ್ನು ಹೇಳು.

ಚಂದ್ರ:—(ಪತಿಯ ಭುಜದ ಮೇಲೆ ಕೈಯಿರಿಸಿ ಪ್ರೀತಿವ್ಯಂಜಕ ಸ್ವರದಿಂದ) "ಜೀವಿತೇಶ, ನಡೆದಕಾರ್ಯಕ್ಕೆ ಮಿಡುಕಿ ಫಲವಿಲ್ಲ. ಇನ್ನು ಮುಂದೆಯೂ ಹಾಗಿರದಂತೆ ಎಚ್ಚರಿಕೆ ಹೊಂದಿ, ಮಾತಾಪಿತೃ ಕೈಂಕರ್ಯದಲ್ಲಿ ನಿರತರಾಗಬೇಕಾದುದು ಸತ್ಪುತ್ರರಿಗೆ ಅವಶ್ಯ ಕರ್ತವ್ಯವು. ಗುರುಸೇವಾತತ್ಪರನಾಗಿರುವ ಪತಿಯ ಸಮಸ್ತ ಕ್ರಿಯಾಕಲಾಪಗಳಿಗೂ ಅನುಕೂಲೆಯಾಗಿರುವುದೇ ಸಹಧರ್ಮಿಣಿಯಾದ ಪತ್ನಿಯ ಕರ್ತವ್ಯವು. ನಾನಿದೋ—ಚರಣಸೇವೆಗೂ, ಸ್ವಾಮಿಯ ಧರ್ಮಕಾರ್ಯಕಲಾಪಗಳ ನೆಲಕರಣೆಗೂ, ಸಿದ್ಧವಾಗಿ ನಿಂತಿರುವೆನು. ಇನ್ನು ತಮ್ಮ ಕರ್ತವ್ಯಕ್ಕೆ ಆತಂಕವೇನೂ ಇಲ್ಲವೆಂದು ತಿಳಿದು, ನಿಶ್ಚಿಂತರಾಗಬೇಕೆಂದು ಕೋರುವೆನು.

ವಿಂದಾಖ್ಯ:—(ಪತ್ನಿಯ ಕೈಹಿಡಿದು) ದೇವಿ! ನೀನು ಸಮ್ಮತಿಸುವುದಾದರೆ, ನಾಳೆಯೇ ಪಿತೃಸನ್ಮುಖಕ್ಕೆ ತೆರಳಬೇಕೆಂದು ಮಾಡಿರುವೆನು.

ಚಂದ್ರ:—ಸ್ವಾಮಿನ್! ದಾಸಿಯು ಪ್ರಯಾಣಕ್ಕೆ ಸಿದ್ಧಳಾಗಿಯೇ ಇರುವಳು. ಈಗಲೇ ಹೊರಡಬೇಕೆಂದರೂ ಅಡ್ಡಿಯಿಲ್ಲ.

ವಿಂದಾಖ್ಯ:—ನೀನು ಸಿದ್ಧಳಾಗಿಯೇ ಇರುತ್ತೀಯಾದರೂ, ನಿನ್ನ ಮಾತಾಪಿತೃಗಳ ಅನುಗ್ರಹವನ್ನು ಹೊಂದಿಯೇ ಹೊರಡಬೇಕಲ್ಲದೆ, ಅವರ ಮನಸ್ಸನ್ನು ಖತಿಗೊಳಿಸಿ ಹೊರಡಬಾರದು. ನನಗೆ ನನ್ನ ತಾಯ್ತಂದೆಗಳು ಎಷ್ಟು ಪೂಜ್ಯರೂ, ಹಿತೈಷಿಗಳೂ, ಪ್ರೇಮಾಧಾರಪಾತ್ರರೂ ಆಗಿರುವರೋ,-ನಿನ್ನ ತಾಯ್ತಂದೆಗಳೂ ಅಷ್ಟೇ ಪೂಜ್ಯರೂ, ಪ್ರೇಮಮಯರೂ ಆಗಿರುವರು. ಅವರು ಅನುಗ್ರಹಿಸಿದುದರಿಂದಲೇ, ಲೋಕೋತ್ತರ ಗುಣವತಿಯಾದ ನಿನ್ನ ಸಹವಾಸಲಾಭವು, ನನಗೆ ಲಭಿಸಿತು ! ಲೋಕದಲ್ಲಿ, ಅತ್ತೆಮಾವಂದಿರನ್ನು ಪೀಯಾಳಿಸುವ, ಅಲಕ್ಷದಿಂದ ಕಾಣುವ, ಪರೋಕ್ಷದಲ್ಲಿ ದೂಷಿಸುವ ಅಳಿಯಂದಿರು ಬಹುಮಂದಿ ಇರಬಹುದು. ಆದರೆ, ಆ ವಿಚಾರಶೂನ್ಯರಂತೆಯೇ ನಾನು ಕೃತಘ್ನನಾಗಲಾರೆನು.

ಚಂದ್ರ:—(ಆನಂದದಿಂದ) 'ಪ್ರಭೋ ? ತಮ್ಮ ಅಮೃತತುಲ್ಯವಾದ ಈವಾಣಿಯಿಂದ ನನಗಾದ ಆನಂದವು ಅಪಾರವಾಗಿರುವುದು. ನಾನು ಈಗಲೇ ಹೋಗಿ ನನ್ನ ತಾಯ್ತಂದೆಗಳಿಗೆ ಈ ವಿಚಾರವನ್ನು ತಿಳಿಸಿ, ಅವರ ಅಪ್ಪಣೆಯನ್ನು ಹೊಂದಿಬರುವೆನು.

ವಿಂದಾಖ್ಯ:—(ಸಡಗರದಿಂದ ಪತ್ನಿಯ ಬೆನ್ನುತಟ್ಟಿ)—ಪರಾಭಿಪ್ರಾಯತತ್ವಜ್ಞೆಯಾದ ನಿನಗೆ ನಾನು ಹೇಳುವ ಅಗತ್ಯವೇನು ? ಹಾಗೆ ಮಾಡು! ನಾನೂ ನಾಳೆಯ ಪಯಣಕ್ಕೆ ಅನುಕೂಲ ಪಡಿಸಿಕೊಳ್ಳುವೆನು. (ಇಬ್ಬರೂ ಹೊರಡುವರು)

2

ಸತ್ಯವರ್ಮರಾಯನ ಶಯನಾಗಾರ.

(ಸತ್ಯವರ್ಮನು ಮಲಗಿರುವನು. ಸುಪ್ರಭೆಯು ಪತಿಯ ಪಾದ ಸೇವೆಯಲ್ಲಿ ಕುಳಿತು, ಪ್ರಸಂಗಿಸುತ್ತಿರುವಳು.)

ಸತ್ಯ:—ದೇವಿ !

|| ಕಂದ || "ಮನವೊಲ್ದು ಜೀವಿತೇಶನ |
ನನವರತಂ ಪ್ರೇಮಭರದಿನುಪಚರಿಸುವಮಾ |
ನಿನಿಯಂ ಮಂಗಳ ಗುಣೆಯಂ |
ವಿನಯಾವನತರ್ಕಳಾಗಿ ಮನ್ನಿಪರಮರರ್ ||29"

ಎಂದಾಡುವ ಪಂಡಿತೋಕ್ತಿಯು ನಿನ್ನಿಂದಲೇ ಸಾರ್ಥಕ್ಯವಾಗಿರ ಬೇಕು. ದೇವತೆಗಳಿಂದಲೂ ಸ್ತುತಿಸಲ್ಪಡುವ ಸಾಧ್ವಿಯರ ಪಾತಿವ್ರತ್ಯಪ್ರಭಾವವನ್ನು ಎಷ್ಟೆಂದು ಹೊಗಳುವ ? ಲೋಕವೇ ಅಭಿನಂದಿಸುತ್ತಿರುವ, ಅಂತಹ ಲೋಕಾದರಣೀಯ ಮೂರ್ತಿ ಯನ್ನು ಪಡೆದಿರುವ ಪತಿಯ ಭಾಗ್ಯಕ್ಕೆ ಕೊನೆವೊದಲೆಲ್ಲಿ ಯದು ? ಇದೆಲ್ಲವೂ-ನನ್ನ ಪೂರ್ವಸುಕೃತಫಲವಲ್ಲವೇ ?

ಸುಪ್ರಭೆ:—ಪ್ರಾಣಾಧಿಕ! ಕೇವಲ ಸಾಮಾನ್ಯ ಸ್ತ್ರೀಯಾಗಿರುವ ನನ್ನನ್ನು ಇಷ್ಟು ಗೌರವಿಸುತ್ತಿರುವುದಕ್ಕೆ ತಮ್ಮ ಪ್ರೇಮವೇ ಕಾರಣವ ಲ್ಲದೆ, ನನ್ನಲ್ಲಿ ಅಷ್ಟರ ಪ್ರಭಾವವಿಲ್ಲ. ತಮ್ಮ ಸುಕುಮಾರಿಗೆ ಈ ಸ್ತುತಿಯು ಒಪ್ಪಿದೆಯೆಂದರೂ ಅತಿಶಯೋಕ್ತಿಯಾಗದು.

ಸತ್ಯ:—ಆರ್ಯೆ ! ತಾಯಿಯಗುಣವೇ ಮಕ್ಕಳಲ್ಲಿ ಮೂಡಿರುವುದೆಂದು ಹೇಳುವುದು ಸುಳ್ಳಾದೀತೇ ? ನಿನ್ನಲ್ಲಿ ಅಂತಹ ಪಾತಿವ್ರತ್ಯಪ್ರಭಾ ವವೂ, ಶಿಕ್ಷಣಾಕೌಶಲ್ಯವೂ ಇಲ್ಲದಿದ್ದರೆ, ನಿನಗೆ ಚಂದ್ರವದ ನೆಯು ಪುತ್ರಿಯಾಗುತ್ತಿದ್ದಳೇ ? ಚಂದ್ರವದನೆಯಲ್ಲಿ ಲೋಕಾ ದರ್ಶಪ್ರಾಯವಾದ ಸಮಸ್ತಸದ್ಗುಣ ಸಮೂಹವೂ ಮೂಡಿರು ವುದು ನಿಜ. ಆದರೆ ಅದಕ್ಕೆ ಕಾರಣಳು ಅವಳು ಮಾತ್ರವೇ

ಅಲ್ಲ. ನೀನೇ ಅದಕ್ಕೆ ಮೂಲಕರ್ತ್ರೀ, ಹೇಗೂ ಇದೆಲ್ಲವೂ ನನ್ನ ಭಾಗ್ಯವಿಶೇಷವೆಂದರೆ ಸಾಕು. ಹೇಗೆಂದರೆ,—

"||ಕಂದ|| ಪಿರಿಯರ್, ಗೃಹಿಣಿಯ ಸುಗುಣಸು |
ಚರಿತಂಗಳ್ ಪತಿಗೆ ಭಾಗ್ಯಮೆಂಬರ್ ಸತ್ಪ ||
ತ್ರರನಾಕೆ ಪಡೆವುದಾಗುಣ |
ಚರಿತಂಗಳ್ಗನುಪಮೇಯ ಭೂಷಣಮೆಂಬರ್ || "

ಸುಪ್ರಭಾ:—ಪ್ರಾಣೇಶ್ವರ ! ತಮ್ಮ ಚಿತ್ತಕ್ಕೆ ತೋರಿದಂತೆ ಹೇಳಬಹುದು. ಹೇಗೂ, ಸದ್ಗುರುಕಟಾಕ್ಷದಿಂದ ಸುಕುಮಾರಿಯು ಲೋಕಾದರ್ಶನಾರಿಯಾಗುವಂತೆ ಗೃಹಿಣೀಧರ್ಮವನ್ನವಲಂಬಿಸಿದುದು ನಮ್ಮೀರ್ವರ ಸುಕೃತ ವಿಶೇಷವೇ ಸರಿ.

ಸತ್ಯ:—ಅಷ್ಟೇಅಲ್ಲ; ಅದ್ವಿತೀಯಗುಣವತಿಯಾದ ಚಂದ್ರವದನೆಗೆ ಅನುಗುಣಿಯಾದ ಪತಿಯು ದೊರತುದು ಮತ್ತೂ ವಿಶೇಷವು.

ತೆರೆಯಕಡೆ:—"ಪ್ರಿಯಸಖಿ! ಇನ್ನೂ ನಿದ್ರಿಸಿಲ್ಲ. ದೇವರೊಡನೆ ಮಾತನಾಡುತ್ತಿರುವರು.''

ಸುಪ್ರಭೆ:—(ತಿರುಗಿನೋಡಿ ಕೌತುಕದಿಂದ) 'ಆರ್ಯಪುತ್ರ ! ಇದೇನು? ಸುಕುಮಾರಿಯು ಸಖಿಯರೊಡನೆ ಇಷ್ಟುಹೊತ್ತಿನಲ್ಲಿ ಇಲ್ಲಿಗೆ ಬರುತ್ತಿರುವಳು ? '

ಸತ್ಯ:—(ಎದ್ದು ಕುಳಿತು ತಿರುಗಿನೋಡಿ, ಮೆಲ್ಲನೆ) 'ದೇವೀ! ಸುಕುಮಾರಿಯ ಮುಖದಲ್ಲಿ ತೋರುತ್ತಿರುವ ಈ ಕಾಂತಿಲಹರಿಯಿಂದ- ಅದಾವುದೋ ಅತ್ಯಗತ್ಯದ ಕೆಲಸದಲ್ಲ ಉದ್ಯುಕ್ತಳಾಗಿ, ನಮ್ಮ ಅನುಮತಿಯನ್ನು ಹೊಂದಲು ಬರುವಂತೆ ಕಾಣುತ್ತಿದೆ. ಇರಲಿ, ನೋಡುವ.' (ಪ್ರಕಾಶವಾಗಿ)'ವತ್ಸೇ! ಅಲ್ಲಿಯೇ ನಿಂತೆಯೇಕೆ? ಬಾ- ವಿಶೇಷವನ್ನು ತಿಳಿಯಲೆಳಸುವೆನು. ' (ಸಖಿಯರೊಡನೆ ಚಂದ್ರವದನೆಯುಪ್ರವೇಶ)

ಚಂದ್ರ:—(ಮುಂದೆ ಬಂದು ತಲೆಬಾಗಿ ಕೈಜೋಡಿಸಿ, ಆನಂದಬಾಷ್ಪವನ್ನು ಸುರಿಸುತ್ತಾ)—
'ಅಪ್ಪಾ! ಪರಮಪ್ರೇಮಮಯಸ್ವರೂಪರಾದ ತಮ್ಮನ್ನು ವಂದಿಸಿ, ಅನುಮತಿ ಹೊಂದಲು ಬಂದೆನು.' .

ಸತ್ಯ:—ಆಗಲೇ ತಿಳಿದೆನು. ಮಗುವೆ! ಆದರೆ ಯಾವಕಾರ್ಯಕ್ಕೆ ನಮ್ಮ ಅನುಮತಿಯು ಬೇಕು ?

ಚಂದ್ರ:—(ವಿನಯದಿಂದ)'ನನ್ನ ಸ್ವಾಮಿಯು ಮಾತಾಪಿತರನ್ನು ನೆನೆನೆನೆದು ಸಂತಾಪದಿಂದ ಸ್ವದೇಶಗಮನೋದ್ಯುಕ್ತರಾಗಿ, ತಮ್ಮ ಅನುಮತಿಯನ್ನು ಪಡೆಯಲು ನಿರೀಕ್ಷಿಸುತ್ತಿರುವರು.

ಸತ್ಯ:—ಸಹಜಧರ್ಮವೇಸರಿ. ಸಂತೋಷದಿಂದ ಸಮ್ಮತಿಸಿದೆವೆಂದು ತಿಳಿಸು; ಮತ್ತೇನು ?

ಚಂದ್ರ:—(ಲಜ್ಜೆಯಿಂದ ಸಖಿಯರನ್ನು ನೋಡುವಳು)

ಸಖಿ:—(ವಿನಯದಿಂದ)'ದೇವರಲ್ಲಿ ಸುಕುಮಾರಿಯ ಕೋರಿಕೆಯೊಂದುಂಟು.'

ಸತ್ಯ:—ಸಂಕೋಚವೇಕೆ ? ತಾಯ್ತಂದೆಗಳಲ್ಲಿಯೂ ಈ ಲಜ್ಜೆಯೇ ? ಇಷ್ಟು ಸಂಕೋಚವೇ ? ತಾಯಿ ? ಏನು ನಿನ್ನ ಕೋರಿಕೆ? ಪತಿಯೊಡನೆ ನೀನೂ ಹೊರಡಬೇಕೆಂದಿರುವೆಯಷ್ಟೆ ?

ಚಂದ್ರ:—(ತಲೆಬಾಗಿ ನೆಲವನ್ನು ನೋಡುತ್ತ ನಿಲ್ಲುವಳು.)

ಸತ್ಯ:—(ಮಗಳ ತಲೆಯಮೇಲೆ ಕೈಯಿಟ್ಟು, ವಾತ್ಸಲ್ಯದಿಂದ)'ಮಗುವೆ! ಹೆಣ್ಣುಮಕ್ಕಳನ್ನು ಸರಿಯಾದ ಪಾತ್ರದಲ್ಲಿ ಅರ್ಪಿಸುವುದೇಕೆ ? ಅವರು ಪತಿಗೃಹದಲ್ಲಿ, ತಮ್ಮ ಪಾಲಿಗೆ ಬಂದಿರುವ ಲೋಕಯಾತ್ರೆಯನ್ನು ವಿಹಿತಮಾರ್ಗದಿಂದ ನಡೆಯಿಸಿ, ಉಭಯ ಕುಲಕ್ಕೂ ಕೀರ್ತಿಯನ್ನುಂಟುಮಾಡಬೇಕೆಂದಲ್ಲವೇ ? ಹಾಗಲ್ಲದೆ ಮಗಳನ್ನೂ, ಅಳಿಯನನ್ನೂ ತಮ್ಮ ಬಳಿಯಲ್ಲಿಯೇ ಉಳಿಸಿ

ಕೊಂಡು,ಅವರ ಕರ್ತವ್ಯವನ್ನೆ ಹಾಳುಮಾಡುವವರು ಮೂರ್ಖರೇ ಸರಿ. ಇದನ್ನು ನೀನು ಕೇಳಬೇಕಾದುದೇ ಇಲ್ಲ. ನಾವಾಗಿಯೇ ಕಳುಹಲು ಸಿದ್ಧವಾಗಿರುವೆವು.

ಚಂದ್ರ:—ಬುದ್ಧಿವಾದವನ್ನು ಕೇಳಲು ಉತ್ಸುಕಳಾಗಿರುವೆನು.

ಸತ್ಯ:—(ಕಿರುನಗೆಯಿಂದ)'ಮಗುವೆ'! ನೀನು ಯೋಗಿಗಳಿಗೆ ಕೂಡ ಯೋಗರಹಸ್ಯವನ್ನು ತಿಳುಹಬಲ್ಲವಳಾಗಿರುತ್ತೀಯೆ. ನಿನಗೆ ತಿಳಿಯದುದು ಆವದಾದರೂ ಇದ್ದರಲ್ಲವೇ, ನಮ್ಮಿಂದ ಕೇಳಿ ತಿಳಿಯಬೇಕು ? ಆದರೂ ಲೋಕಾಚಾರವನ್ನೂ, ಆರ್ಯಸಂಪ್ರದಾಯವನ್ನೂ ನಾವು ಮೀರಬಾರದು. ಕರ್ತವ್ಯಕ್ಕಾಗಿ ನಾವೆಲ್ಲರೂ ವಿಧೇಯರಾಗಿರಲೇಬೇಕು. ಒಂದೆರಡು ಮಾತುಗಳಿಂದ ಹೇಳುವೆನು ಕೇಳು.

ಹೆಣ್ಣುಮಕ್ಕಳಿಗೆ ತಂದೆಯ ಭಾಗ್ಯವು ಭಾಗ್ಯವಲ್ಲ. ಪತಿಯ ಭಾಗ್ಯವೇ ಭಾಗ್ಯವು. ಪತಿಯು ಬಡವನಾಗಿದ್ದ ಮಾತ್ರಕ್ಕೆ ಆತನನ್ನು ಜೀಯಾಳಿಸಿ, ತಂದೆಯ ಮನೆಯ ಸಂಪತ್ತಿಗೆ ಬೆರೆದು, ಬೀಗಿ, ಮೈಮರೆದು ನಡೆಯುವುದು, ಸತಿಯರ ಸ್ವರೂಪಕ್ಕೆ ಹಾನಿಕರವಾದುದು. ಸತಿಯು ತನ್ನ ಪತಿಯು ಎಷ್ಟೇ ಬಡವನಾಗಿರಲಿ, ದುರ್ಬಲನಾಗಿರಲಿ, ಧೂರ್ತನಾಗಿರಲಿ–ಆತನ ನಿಂದೆಯನ್ನು ಕೂಡ ಕೇಳಬಾರದೆಂದಲ್ಲಿ, ತಾನು ಆತನ ವಿಷಯದಲ್ಲಿ ಹೇಗೆ ನಡೆಯಬೇಕೆಂದು ತಿಳಿದಿರಬೇಕು ? ಮಗುವೆ ? ಇದೇ ಪವಿತ್ರವಾದ ಅರ್ಥವನ್ನು ಕಾಪಾಡುವುದಕ್ಕಾಗಿ ನಮ್ಮ ಪರಮಪೂಜ್ಯರಾದ ಸಾವಿತ್ರಿ, ಲೋಪಾಮುದ್ರಾ, ಸುಕನ್ಯಾ ಇವರೆಲ್ಲರೂ ತಮ್ಮ ತಮ್ಮ ತಂದೆಯ ಅತುಲೈಶ್ವರ್ಯವನ್ನೂ ಕಡ್ಡಿಗೆ ಕಡೆಮಾಡಿ, ತಮ್ಮತಮ್ಮ ಪತಿಗಳ ತಪೋವೃತ್ತಿಗೆ ಅನುವಾಗಿ ತಾವೂ ನಾರುಬಟ್ಟೆಯುಟ್ಟು, ಅಲಂಕಾರದ ಹುಚ್ಚನ್ನುಬಿಟ್ಟು, ಆಡಂಬರ

ಅಹಂಕಾರಗಳನ್ನು ಕಟ್ಟಿಟ್ಟು, ಕಾಡಿನಲ್ಲಿರಲು ದೃಢನಿಶ್ಚಯರಾಗಿ ನಿಂತರು. ಅಂತಹ ಮನಸ್ಸ್ಥೈರ್ಯ, ಪ್ರಜ್ಞೆ, ಸೌಶೀಲ್ಯಾದಿಗಳೇ ನಿನಗೂ ಆದರ್ಶ ಜೀವನವಾಗಿರಬೇಕು. ಮತ್ತೊಂದುಮಾತು; ನಿನ್ನ ಸವತಿಯರನ್ನು ನಿನ್ನ ಹಿರಿಯ ಅಕ್ಕಂದಿರೆಂದೂ, ನಿನ್ನ ಅತ್ತೆ ಮಾವಂದಿರನ್ನೇ ತಾಯಿ ತಂದೆಗಳೆಂದೂ, ಇತರ ಆಶ್ರಿತಾನಾಥ ಬಂಧುವರ್ಗವನ್ನು ನಿನ್ನ ಒಡಹುಟ್ಟಿದ ಮತ್ತು ಹೊಟ್ಟೆಯಲ್ಲಿ ಹುಟ್ಟಿದವರೆಂದೂ ತಿಳಿದು ನಡೆಯುತ್ತಿರಬೇಕೆಂಬುದೇ, ನಾನು ನಿನಗೆ ಒಲಿದಿತ್ತ ಬಳುವಲಿ !

ಚಂದ್ರ:—(ಸಂತೋಷದಿಂದ) 'ಅಪ್ಪ! ಇದಕ್ಕೂ ಉತ್ತಮವಾದ ವರವು ನನಗಿನ್ನಾವುದಿದೆ ? ಹುಟ್ಟಿದು ಮತ್ತು ಹೊಕ್ಕ ಮನೆತನಕ್ಕೆ ಆಭರಣವೆನ್ನಿಸಿಕೊಳ್ಳುವುದಕ್ಕೂ ಮಿಗಿಲಿದ ಭಾಗ್ಯವು, ಸ್ತ್ರೀಯರಿಗೆ ಮತ್ತೊಂದಿಲ್ಲ. ಇದೊಂದು ಸೌಭಾಗ್ಯವು ನನಗೆ ಲಭಿಸುವಂತೆ ಅನುಗ್ರಹಿಸಿದರೆ ಸಾಕು.

ಸುಪ್ರಭೆ:—(ಮಗಳ ಕೈಹಿಡಿದು ಆನಂದಬಾಷ್ಪವನ್ನು ಸುರಿಸುತ್ತ ಕರುಣಾಸ್ವರದಿಂದ)'ನನ್ನ ಮುದ್ದಿನ ಮಗುವೆ! ಅತ್ತೆಯ ಮನೆಗೆ ಹೊರಟಿರುವ ನಿನಗೆ ನಾನೇನನ್ನು ಕೊಡಲಿ? ವಿಚಾರಮಾಡಿದರೆ ಇದೆಲ್ಲವೂ ಕ್ಷಣಿಕವಾಗಿದೆ. ಈ ಕ್ಷಣಿಕವಾದ ಸಂಪತ್ತನ್ನು ಕೊಟ್ಟರೂ, ಅದೆಷ್ಟುಕಾಲ ನಿನಗೆ ಸಹಕಾರಿಯಾಗಿರುವುದು? ಆದರೆ–ಮಗುವೆ! ನಮಗೆ ಕುಲಕ್ರಮಾಗತವಾಗಿ ಬಂದಿರುವ ಆಚಾರವನ್ನು ಬಿಡಬಾರದು. ಇದೋ ನಮ್ಮ ತಾಯಿ, ನನಗೆ ಕಟ್ಟಿಕೊಟ್ಟಬುತ್ತಿಯಿಲ್ಲಿರುವುದು. ಅದನ್ನು ಎಂದಿಗೂ ಕೆಡದ—ಕಡಮೆಯಾಗದ ಅಮೃತಾನ್ನವೆಂದು ತಿಳಿದು, ಸ್ವೀಕರಿಸು. ಅದೇನೆನ್ನುವೆಯಾ ? ಮತ್ತಾವುದೂ ಅಲ್ಲ–ಹಿತೋಪದೇಶ !

ಚಂದ್ರ:—(ತಲೆಯೆತ್ತಿ ಕುತೂಹಲದಿಂದ) 'ಅಮ್ಮ ! ನನಗೆ ಬೇಕಾದುದೂ

ಅದೇ—ಹರಸಿ, ಪ್ರೀತಿ ಭರವಸೆಗಳಿಂದ ತಾರಮ್ಮಾ ! ಅದನ್ನು ನಾನು ಎಚ್ಚರಿಕೆಯಿಂದ ಸೇವಿಸುತ್ತ ಬರುತ್ತೇನೆಂದು ನಂಬಿ, ನನಗದನ್ನು ಕೃಪೆಮಾಡು.

ಸಪ್ರಭಾ:—ಮಗುವೆ ! ಕೆಲವರು, 'ಪತಿಮಂದಿರದಲ್ಲಿ ಹೀಗೆಯೇ ಇರಬೇಕೆಂದಾಗಲೀ, ಪತಿಯನ್ನು ಪ್ರೀತಿಸಬೇಕೆಂದಾಗಲಿ, ಗೃಹಕಾರ್ಯದಲ್ಲಿ ಹೆಚ್ಚು ಶ್ರದ್ಧೆಯನ್ನುವಹಿಸಬೇಕೆಂಬದಾಗಲೀ, ಬೋಧಿಸುವುದು ಅನವಶ್ಯಕವು, ತಾನಾಗಿಯೇ ಬರಬಹುದಾದ ಇವನ್ನು ಹೇಳಿಕೊಡುವುದರಲ್ಲಿ ಹೆಚ್ಚುಗಾರಿಕೆಯೇನು?'' ಎಂದೀಬಗೆಯಾಗಿ ಹಲವುಬಗೆಯಿಂದ ಪೂರ್ವಾಚಾರವನ್ನು ಅಲ್ಲಗಳೆದು, ಮಕ್ಕಳನ್ನು ಮುದ್ದಿಸಿ ಮತ್ತಿಗೇರಿಸಿರುವರು. ಅಂತಹರಿಗೆ ನನ್ನ ಈ ಹಿತೋಪದೇಶವು ಅಪಹಾಸ್ಯವಾಗಿ ಕಂಡರೂ ಚಿಂತೆಇಲ್ಲ. ಕಲಿಸದೆ, ತಿಳಿಸದೆ, ಬೆಳಸಿದ ಮಕ್ಕಳು ಮಂದಿಗಳಾಗುವುದಿಲ್ಲ. ಕಾಡುಹಂದಿಗಳೇಸರಿ ! ಅದಿರಲಿ, ಕೇಳು; ಚಂದ್ರವದನೆ ! ನೀನು ಅತ್ತೆಯ ಮನೆಯನ್ನು ಸೇರಿ, ಅಲ್ಲಿ ನಿನ್ನ ಸ್ಥಾನವನ್ನು ಪೂರ್ಣಮಾಡಿದ ಮಾತ್ರಕ್ಕೆ ನಿನ್ನ ಕೆಲಸವು ಮುಗಿದಂತಾಗಲಿಲ್ಲ. ನೀನು ಮಾಡಬೇಕಾದ ಮನೆಗೆಲಸಗಳಲ್ಲಿ ಇಷ್ಟಾದರೂ ಪಾಲುಮಾರಿ ಬಿಡದೆ, ನಿನ್ನ ದೇಹವನ್ನು ಹೇಗೆ ಎಚ್ಚರಿಕೆಯಿಂದ ಚೊಕ್ಕಟವಾಗಿಯೂ, ಆರೋಗ್ಯನಿಯಮಾನುಸಾರವಾಗಿಯೂ ಕಾಪಾಡಿಕೊಂಡು ಬರುವೆಯೋ, ಹಾಗೆಯೇ, ಮನೆಗೆಲಸಗಳನ್ನೂಕೂಡ, ಕ್ರಮದಂತೆಯೂ, ಪಾಲುಮಾರದೆಯೂ ಸಕಾಲದಲ್ಲಿ ಶ್ರದ್ಧೆಯಿಂದ ಸರಿಯಾಗಿ ಮಾಡುತ್ತಲೂ, ಆಯಕ್ಕೆ ತಕ್ಕಂತೆ, ನ್ಯಾಯಕ್ಕೆ ಒಪ್ಪುವಂತೆ, ಗೌರವವು ಹೆಚ್ಚುವಂತೆ, ಪ್ರತಿಯೊಂದುಕಾರ್ಯಕಲಾಪಗಳನ್ನೂ ವಿವೇಚಿಸಿ, ಹಿರಿಯರ ಮಾತನ್ನು ಕೇಳಿ ಅದರಂತೆ ನಡೆಯುವುದೂ ನಿನ್ನ ಮುಖ್ಯಕಾರ್ಯಗಳು.

ಚಂದ್ರ:—ಅಮ್ಮ! ಕರ್ತವ್ಯವನ್ನು ಕನಸುಮನಸಿಂದಾದರೂ ಕಡೆಗಣಿಸಲಾರೆನೆಂದು ಭರವಸೆಯನ್ನು ಕೊಡುವೆನು. ಮುಂದೇನುಮಾಡಬೇಕೋ ?

ಸುಪ್ರಭೆ:—ತಾಯಿ ! ನಿನಗೆ ಇರತಕ್ಕ ಧರ್ಮಶ್ರದ್ಧೆಯು ಇನ್ನೂ ಹೆಚ್ಚಲಿ. ಕೇಳು-ಗೃಹಿಣಿಯಾದವಳಲ್ಲಿ ದಕ್ಷತೆಯು ಹೆಚ್ಚಾಗಿರಬೇಕು. ಇಲ್ಲವಾದರೆ ಧರ್ಮಹಾನಿಯೂ, ಗೃಹಚ್ಛಿದ್ರವೂ, ರೋಗ ಕಲಹಗಳೇ ಮೊದಲಾದ ಸಂಕಟಗಳೂ ಹೆಚ್ಚಿ, ಗೃಹರಾಜ್ಯವನ್ನೇ ಹಾಳುಮಾಡಿಬಿಡುವವು. ಆದುದರಿಂದ ಗೃಹಿಣಿಯು, ತನ್ನಲ್ಲಿರುವ ಧರ್ಮ ಸೂಕ್ಷ್ಮಜ್ಞಾನಸಂಬಂಧವಾದ ಆಶ್ರಿತವಾತ್ಸಲ್ಯ,ಬಂಧುಪ್ರೀತಿ,ಗುರುದೈವಭಕ್ತಿ,ಪತಿಸೇವಾತತ್ಪರತೆ,ಕರ್ತವ್ಯನಿಷ್ಠೆ, ಇವೇಮೊದಲಾದ ಸುಗುಣಗಳ ದಕ್ಷತೆಯಿಂದ, ಗೃಹದಲ್ಲಿ ಅಂತಃಕಲಹಗಳಿಗಾದರೂ ಅವಕಾಶಕೊಡದೆ, ಪರಸ್ಪರಸೌಜನ್ಯ, ಪ್ರೇಮ-ಗೌರವಗಳು ಹೆಚ್ಚಿ, ಗೃಹವು ಸ್ವರ್ಗೀಯವಾದುದೇ ಸರಿಯೆನ್ನಿಸುವಂತೆ ಮಾಡಲು, ತ್ರಿಕರಣಶುದ್ಧತೆಯಿಂದ,ಸರ್ವಕಾಲ, ಸರ್ವಾವಸ್ಥೆಗಳಲ್ಲಿಯೂ ಜಾಗರೂಕಳಾಗಿರಬೇಕು. ಇಷ್ಟುಸಾಕು! ಇನ್ನು ಇದರ ಹಿಂದಿನ ಮುಂದಿನ ವಿಚಾರಗಳನ್ನು ನೀನು ನಿನ್ನ ಸ್ವಯಂ ವಿವೇಚನೆಯಿಂದಲೂ, ನಿನ್ನ ಪತಿಯ ಹಿತಸೂಚನೆಯಿಂದಲೂ, ಮತ್ತು, ನಿನ್ನ ಅತ್ತೆ ಮಾವಂದಿರೇ ಮೊದಲಾದ ಗುರುಜನರ ಉಪದೇಶದಿಂದಲೂ ತಿಳಿದುಕೊಳ್ಳಬೇಕಾಗಿದೆ.

ಸತ್ಯ:—ಮಗುವೇ ! ಪ್ರೇಮಮಯಿಯಾದ ನಿನ್ನ ತಾಯಿಯ ಬುದ್ಧಿವಾದವನ್ನು ಚನ್ನಾಗಿ ಸಂಗ್ರಹಿಸಿದೆಯಷ್ಟೆ! ಭದ್ರ! ಭದ್ರರೀತಿಯಿಂದ ಅದನ್ನು ಕಾಪಾಡಿಕೊಂಡು ಬರಬೇಕು. ಭದ್ರ ! ಭಗವತಿಯು ನಿನ್ನನ್ನು ಅನುಗ್ರಹಿಸಿರುವಳು. ಚಂದ್ರವದನಾ! ನಿನ್ನನ್ನು ನಿನ್ನ ಪತಿಯೊಡನೆ ನಾಳೆಯೇ ಬೀಳ್ಕೊಡುವೆನು. ಇನ್ನು ತೆರಳು!

ನಿನ್ನ ಪತಿಯು ನಿನ್ನನ್ನು ಇದಿರುನೋಡುತ್ತಿರಬಹುದು. ಈರಾತ್ರಿ, ಸುಖನಿದ್ರೆಯಿಂದ ವಿಶ್ರಾಂತಿ ಹೊಂದಿರಿ: ನಾನು ಈಗಲೇ ಹೋಗಿ, ನಾಳೆಯ ಪಯಣಕ್ಕೆ ಸನ್ನಾಹಮಾಡಿ, ನಿನಗೆ ತಿಳಿಸುವೆನು.

(ಹೊರಡುವರು)

ಚಂದ್ರವದನೆಯ ಶಯನಾಗಾರ

(ಶಯ್ಯೆಯಲ್ಲಿ ಅರೆಬಾಗಿ ಮಲಗಿ ವಿಂದಾಖ್ಯನು ಚಿಂತಿಸುತ್ತಿರುವನು)

ವಿಂದಾಖ್ಯ:—ಆಹಾ! ಅನುತಪ್ತಹೃದಯನ ಅವಸ್ಥೆಯೇ ಇದಾಗಿರಬೇಕಲ್ಲವೆ ? ಕ್ಷಣಕ್ಷಣಕ್ಕೂ ಸುರಿಯುತ್ತಿರುವ ಈ ಬಿಸಿಬಿಸಿಯಾದ ಕಣ್ಣೀರನ್ನು ಹೇಗೆ ತಡೆದುಕಟ್ಟಲಿ ? ಪ್ರಳಯಾಗ್ನಿಜ್ವಾಲೆಯಂತೆ ಹತ್ತಿ ಉರಿಯುತ್ತಿರುವ ಈ ಒಡಲ ಬೇಗೆಯನ್ನು ಹೇಗೆ ಶಾಂತಿಪಡಿಸಲಿ? ನನಗೆ ಮನೋವೇಗಗಮನಶಕ್ತಿಯನ್ನು ಭಗವಂತನು ಕರುಣಿಸಿದ್ದರೆ, ಇಷ್ಟು ಹೊತ್ತಿಗಾಗಲೇ ನಾನು ತಾಯಿ ತಂದೆಗಳ ಕಾಲಕೆಳಗೆ ಬಿದ್ದು, ಕ್ಷಮೆಯನ್ನು ಕೇಳಿಕೊಳುತ್ತಿದ್ದೆನು! ಇಲ್ಲವಾಯಿತಲ್ಲಾ—ಈಗ ನಾನೇನುಮಾಡಲಿ? ಎಷ್ಟು ಹೊತ್ತಿಗೆ ಅವರನ್ನು ನೊಡುವೆನು ? (ಮೇಲೆನೋಡಿ) 'ಇದೇನು ! ಇಷ್ಟು ಹೊತ್ತಾದರೂ ದೇವಿಯು ಬರಲಿಲ್ಲ ? ಗುರುಜನರೇನಾದರೂ ನನ್ನ ಪಯಣಕ್ಕೆ ಸಮ್ಮತಿಸದಿರಬಹುದೇ? ಇರಲಾರದು ! ನೀತಿಸಂಪನ್ನರಾದ ಇವರು ಸಮ್ಮತಿಸದೆ ಉಂಟೆ? (ಆಲಿಸಿಕೇಳಿ ಸಂತೋಷದಿಂದ)'ಇದೋ, ಕಾಲುಂಗುರದ ಧ್ವನಿಯು ಕೇಳಿಬರುತ್ತಿರುವುದು. ನಾನು ಹಾಗೆಯೇ ನಿದ್ರಿಸುವಂತೆ ಮಲಗಿ, ದೇವಿಯ ಆಶಯವೇನೆಂಬುದನ್ನು ನೋಡಿ - ಕೇಳಿ ತಿಳಿಯುವೆನು. (ಮಲಗುವನು)

(ಸಖಿಯರೊಡನೆ ಚಂದ್ರವದನೆಯು ಪ್ರವೇಶಿಸುವಳು.)

ಚಂದ್ರ:—ನನ್ನನ್ನು ಇಂತಹ ಲೊಕೋತ್ತರಗುಣಸಂಪನ್ನರಾದ ತಾಯಿ

ತಂದೆಗಳಲ್ಲಿ ಹುಟ್ಟಿಸಿದುದಕ್ಕಾಗಿ ಆ ದಯಾಮಯನಾದ ಪರಮಾತ್ಮನನ್ನು ನಾನೆಷ್ಟು ಬಗೆಗಳಿಂದ ಸ್ತುತಿಸಿ ತೃಪ್ತಿಹೊಂದಲಿ? ಅಷ್ಟೇ ಅಲ್ಲ; ಸತ್ಪುತ್ರನೂ, ಸತ್ಯವ್ರತನೂ, ದೃಢಚಿತ್ತನೂ, ದಯಾಪೂರ್ಣನೂ ಆದ ಸ್ವಾಮಿಯು ಕೈಹಿಡಿದ ನನ್ನ ಭಾಗ್ಯವೇ ಮಹತ್ತರವಾದುದೆಂದು ಭಾವಿಸುವೆನು.

ಸುನೀತೆ:—ಪ್ರಿಯಸಖಿ! ನಿನ್ನ ಮಾತೆಲ್ಲವೂ ಸಹಜವೇ! ಆದರೆ ನಾವು ಮಾತ್ರ ಇನ್ನು ಮಂದಭಾಗ್ಯರಾದೆವು.

ಚಂದ್ರ:—(ಭೀತಳಾಗಿನೋಡುತ್ತ) 'ಅದೇಕೆ ಹಾಗೆ ಹೇಳುವಿರಿ, ಸಖಿಯರೇ? ಅಶುಭವಾಕ್ಯವನ್ನೇಕೆ ಹೇಳುವಿರಿ?'

ವಿನೀತೆ:—(ದುಗುಡದಿಂದ) 'ಪ್ರಿಯಸಖಿ! ಪ್ರಾಣಾಧಿಕ ಪ್ರಿಯಳಾಗಿದ್ದ ನಿನ್ನ ಸಹಚರ್ಯವು ಮುಂದೆ ನಮಗೆಲ್ಲಿರುವುದು? ನಿನ್ನ ಮತ್ತು ನಿನ್ನನ್ನು ಹೊಂದಿದ ನಿನ್ನ ಸ್ವಾಮಿಯ ಭಾಗ್ಯವೇನೋ ಮಹತ್ತರನೆಂದಾಯಿತು. ನಿನ್ನನ್ನು ಬಿಟ್ಟಿರುವ ನಾವೋ?

ಚಂದ್ರ:—(ಸಖಿಯರ ಕೈಹಿಡಿದು) 'ಪ್ರಿಯಸಖಿಯರೇ! ಇಲ್ಲದ ಚಿಂತೆಗಳನ್ನು ಹತ್ತಿಸಿಕೊಳ್ಳುವದೇಕೆ! ನಾಳೆ ನಿಮ್ಮನ್ನೂ ನನ್ನೊಡನೆಯೇ ಕರೆದೊಯ್ಯುವದನ್ನು ನೀವೇ ನೋಡುವಿರಿ!

ಸುನೀತೆ:—ಅಹುದು, ನೀನು ಕರೆದೊಯ್ಯಬೇಕೆನ್ನುವೆ; ಆದರೆ ನಿನ್ನ ಸ್ವಾಮಿಯೋ?

ವಿಂದಾಖ್ಯ:—(ಎದ್ದು ಕುಳಿತು) 'ಏನು, ಏನೆಂದಿರಿ! ಸಖಿಯರೆ! ದೇವಿಯ ಅಭಿಮತವೇ ನನ್ನ ಅಭಿಮತವೆಂದೇಕೆ ನಂಬಲಾರಿರಿ? ನಿಮ್ಮ ಸಖಿಯಲ್ಲಿರುವಳೋ ಅಲ್ಲಿ ನೀವಿರುವಿರಿ; ತಿಳಿದಿರಿ! (ಕೈನೀಡಿ ಚಂದ್ರವದನೆಯು ಕೈಹಿಡಿದು ಸಂಭ್ರಮದಿಂದ) 'ಪೂಜ್ಯಳಾದ ದೇವಿ! ಕೃತಕಾರ್ಯಳಾಗಿ ಬಂದಿರುವೆಯೆಂದು ನಿನ್ನ ಮುಖವಿಕಾಸತೆಯೇ ತಿಳಿಸುತ್ತಿರುವುದು, ಬಾ, ಕುಳಿತುಕೊ; ಗುರುಜನರೇನೆಂದರು?' (ಬಳಿಯಲ್ಲಿ ಕುಳ್ಳಿರಿಸಿಕೊಳ್ಳುವನು.)

ಚಂದ್ರ:—(ಲಜ್ಜೆಯಿಂದ)'ಹೇಳುವುದೇನು ? ನೀತಿವಂತರಾದ ಗುರು ಜನರು ಹೇಳಬೇಕಾದುದನ್ನೇ ಹೇಳಿರುವರು. '

ಸಖಿಯರು:—ಯುವರಾಜರೇ! ನಮ್ಮ ಸಖಿಯು ನಾಚುವಳಾದುದರಿಂದ, ನಾವೇ ಹೇಳುವೆವು. ನಮ್ಮ ಮಹಾರಾಜರೂ, ಮಹಾರಾಜ್ಞಿ ಯೂ, ಮಗಳ ಪಯಣಕ್ಕೆ ಈಗಲೇ ಬಳುವಲಿಯನ್ನೂ, ಬುತ್ತಿ ಯನ್ನೂ ಕಟ್ಟಿಕೊಟ್ಟಿರುವರು. ಉಳಿದ ಸನ್ಮಾಹಗಳನ್ನುನಡೆಯಿಸಿ, ನಾಳೆಯೇ ಬೀಳ್ಕೊಡುವುದಾಗಿ ಹೇಳಿ ಕಳುಹಿರುವರು. ಇನ್ನು ನಾವು ಸ್ಥಾನಾಂತರಕ್ಕೆ ತೆರಳುವೆವು. ದೇವರುಮಲಗಬಹುದು.

(ಇಬ್ಬರೂ ಹೊರಡುವರು.)

ವಿಂದಾಕ್ಷ:—(ಸ್ವಗತಂ)'ಆಹಾ ! ಎಂತಹ ಆನಂದಧಾಮುವಿದು ? ಸೇವ ಕಜನರಿಂದ ಮೊದಲು, ಮಹಾರಾಜನವರೆಗೂ ಶಾಂತತೆಯೂ, ಸತ್ಯತೆಯೂ, ತುಂಬಿ ತುಳುಕುತ್ತಿರುವುದು ! ಇದೀಗ ಜನ್ಮ ಸಾರ್ಥಕತೆ ! ಇನ್ನು ದೇವಿಯ ವಿಷಯದಲ್ಲಿ ಹೇಳುವುದೇನು ?

ಚಂದ್ರ:—ಪ್ರಾಣೇಶ್ವರ ! ಯೋಚಿಸುತ್ತಿರುವುದೇನು ?

ವಿಂದಾಕ್ಷ:—ಮತ್ತೇನೂ ಇಲ್ಲ, ನಿನ್ನ ಅಕ್ಕ, ಚಿತ್ರಕಲೆಯನ್ನು ಕುರಿತು—

ಚಂದ್ರ:—(ಸಂತೋಷದಿಂದ) ಅದು ಸಹಜಧರ್ಮವು. ನನಗೆ ಈಸೇವೆ ಯಲ್ಲಿ ಇರುವ ಬಾಧ್ಯತೆಗೆ ಹೆಚ್ಚಿದ ಬಾಧ್ಯತೆಯೇ ಆಕೆಗಿರುವುದು. ಮೊದಲು ಆ ತಮ್ಮ ಧರ್ಮಪತ್ನಿಯನ್ನು ಸನ್ಮಾನಿಸಿ ಕರೆತಂದಲ್ಲದೆ ಮತ್ತಾವಕಾರ್ಯಕ್ಕೂ ಕೈಹಾಕಬಾರದೆಂಬುದೇ ನನ್ನಪ್ರಾರ್ಥನೆ?

ವಿಂದಾಕ್ಷ:—ಸ್ವದೇಶಕ್ಕೆ ಹೋಗುವಾಗ ಮೊದಲು ಅಲ್ಲಿಗೆ ಹೋಗಿ, ಅವಳನ್ನೂ ಜತೆಗೂಂಡೇ ತೆರಳುವೆನು. ಇನ್ನು ಮಲಗುವ. ಭಗ ವಂತನು ನಿನ್ನ ತಪಃಪ್ರಭಾವಕ್ಕೆ ಸುಪ್ರೀತನಾಗಿ ರಕ್ಷಿಸುತ್ತಿರಲಿ!

(ಮಲಗುವರು.)

ಇಷ್ಟಕ್ಕೆ ತೃತೀಯಾಂಕಕ್ಕೆ ಮಂಗಳಂ.

ಶ್ರೀಯೈನಮಃ

ಚತುರ್ಥಾಂಕವು.

ಪಾಂಚಾಲದೇಶದ ಸಮೀಪದ ಕಾನನ.

(ಕ್ರೀಡಾರ್ಥಿಗಳಾದ ರಂಭಾ, ಊರ್ವಶಿ, ಮೇನಕೆ, ತಿಲೋತ್ತಮೆಯರ ಪ್ರವೇಶ.)

ರಂಭಾ:—(ಊರ್ವಶಿ-ತಿಲೋತ್ತಮೆ-ಮೇನಕೆಯರೊಡನೆ ಪುಷ್ಪಲತೆಗಳ ಬಳಿಯಲ್ಲಿ ನಿಂತು)

ರಾಗಾ || ಇಂಗ್ಲೀಷ್‌ನೋಟ್) (ವನಜಾತಮುಖಿಯರೆಲ್ಲ)

ಸಖಿ ಬಾರೆ ಬಾರೆ ನೀರಜಾಕ್ಷಿ ಸರಸವಾಡುವ ||ಪ||

ಸುಖವನೀವ ವಿಧುವಸಂತರೊಲಿದು ಪಾಡುವಾ ||ಅ||

(ಮೇಲಿನಮಟ್ಟು)

ಊರ್ವಶಿ:—ಮಂದಯಾನೆ ಮುಂದೆನೋಡು ಗಂಧವಹನುತಾಂ |

ಮಂದಗಮನ ದಿಂದ ಮನಕಾನಂದ ತೋರುವಂ||೧||

ಮೇನಕೆ:—(ಅರಳುತ್ತಿರುವ ಮೊಗ್ಗುಗಳನ್ನು ನೋಡಿ) ಅಕ್ಕ ! ಇತ್ತ ನೋಡಿರಿ; ಮುಗುಳುನಗೆಯಿಂದ ಮುದ್ದಾಗಿ ತೋರುತ್ತಿರುವ ಮುಗ್ಧೆಯರ ಮುಖಮುದ್ರೆಯಂತೆ, ಮಲ್ಲಿಕಾದಿ ಕುಸುಮಗಳು ಅರಳುತ್ತಿರುವ ಸೊಗಸನ್ನು ನೋಡಿರಿ !

ತಿಲೋತ್ತಮೆ:—(ಮುಂದೆ ಬಂದು) ಪ್ರಿಯಸಖಿಯರೆ ! ವಿಹಾರಕ್ಕೆ ಈ ನಂದನವೂ-ಈ ರಾತ್ರಿಯೂ ಎಷ್ಟು ಸುಖಾವಹವಾಗಿವೆ?

ರಂಭೆ:—(ಊರ್ವಶಿಯಕೈಹಿಡಿದು)—ತಂಗಿ, ಊರ್ವಶಿ ! ಇಂತಹ ಚಂದ್ರೋದಯದಲ್ಲಿ, ಈ ನಮ್ಮ ಮಂದಾರವನದಲ್ಲಿ, ವಿಹಾರ ಮಾಡುವುದೆಂದರೆ ಸಾಮಾನ್ಯವೇ ? ಬರುವದಿಲ್ಲವೆಂದು ಇಷ್ಟರ ಸಂತೋಷವನ್ನು ಹಾಳುಮಾಡಿಕೊಳ್ಳುತ್ತಿದ್ದೆಯಲ್ಲವೆ ?

ತಿಲೋತ್ತಮೆ:—(ಮುಂದೆ ಬಂದು) 'ಅಕ್ಕಾ ಸರಿಯಾಗಿಹೇಳಿದೆ, ಊರ್ವಶಿಯು ಬಾರದೆ ನಿಂತಿದ್ದರೆ-ನಮಗೆ ಇಷ್ಟು ಸಮಾಧಾನವಾಗುತ್ತಿರಲಿಲ್ಲ.

ಮೇನಕೆ:—ಅಕ್ಕ ! ನಡೆಯಿರಿ; ಒಂದು ಗಳಿಗೆ ನಮ್ಮ ಮಕರಂದ ಮಂಟಪದಲ್ಲಿ ಕುಳಿತು, ವಿನೋದವಾಡುತ್ತಿದ್ದು, ಆಬಳಿಕ ಅಮೃತಸರಸ್ಸಿಗೆ ಹೋಗುವ ?

ರಂಭಾ:—ಹಾಗೆಯೇ ಆಗಲಿ, ನಡೆಯಿರಿ ಮಂಟಪಕ್ಕೆ' (ಮುಂದಕ್ಕಡಿಯಿಟ್ಟು ನೋಡಿ—ಆಶ್ಚರ್ಯದಿಂದ ತಿರುಗಿ ಊರ್ವಶಿಯನ್ನು ಕುರಿತು) 'ತಂಗೀ ! ಇದೇನಾಶ್ಚರ್ಯವು ? ನಮ್ಮ ವಿಹಾರ ವನಕ್ಕೆ ಇಂದು, ಇಷ್ಟು ಜನಸಂದಣಿಯುಂಟಾಗಿರಲು ಕಾರಣವೇನು ? ಇವರಾರಿರಬಹುದು ?

ಊರ್ವಶಿ:—ಅಕ್ಕಾ ! ಮರೆತಿದ್ದೆನು. ನಮ್ಮ ಭೃತ್ಯನೊಬ್ಬನು ನನಗೀ ವಿಚಾರವನ್ನು ಮೊದಲೇ ಹೇಳಿದ್ದನು. ನನ್ನ ಮನಸ್ಸು ಬೇರೆ ವಿಚಾರದಲ್ಲಿದ್ದುದರಿಂದ ಇದನ್ನು ಮರೆತಿತ್ತು.

ರಂಭಾ:—ಬೇರೆ ವಿಚಾರನಾವುದು ? ಮತ್ತಾವ ರಾಜರ್ಷಿಯಾದರೂ ನಿನ್ನನ್ನು ಸ್ಮರಿಸುತ್ತಿರುವನೇನು ? ಇದೊಂದು ರಾತ್ರಿ ತಡೆದಿರಲಿ! ಇರಲಿ, ವಿಚಾರವೇನು ? ಬಂದಿರುವವರಾರು ?

ಊರ್ವಶಿ:—ಪ್ರಿಯಸಖಿ ! ನಾನು ಕೇಳಿದುದರಲ್ಲಿ, ಕಾಶ್ಮೀರದೇಶಾಧೀಶನ ಮಗಳು, ತಂದೆಯು ಕೊಟ್ಟ ಬಳುವಲಿಗಳೊಡನೆ, ಪತಿಯ ಜತೆಯಲ್ಲಿ ಸ್ವಗೃಹಕ್ಕೆಹೋಗಲು ಇಲ್ಲಿ ಬಂದಿರುವಂತೆಯೂ, ಅವಳ ಪತಿಯು ಆಂಧ್ರದೇಶದ ಯುವರಾಜನೆಂದೂ, ಮತ್ತು ಅವನು ತನ್ನ ಜ್ಯೇಷ್ಠಪತ್ನಿಯಾದ ಪಾಂಚಾಲರಾಜಪುತ್ರಿಯನ್ನೂ ಜತೆಗೊಂಡು ಬಂದಿರುವನೆಂದೂ, ತಿಳಿದೆನು. ವಿಶ್ರಾಂತಿಗಾಗಿ ಈ ವನದಲ್ಲಿ ಉಳಿದಿರುವರಂತೆ ! ಅಷ್ಟೇಅಲ್ಲ; ಆ ರಾಜಪುತ್ರಿಯರಿಬ್ಬರೂ ಅಪ್ರತಿಮ ರೂಪವತಿಯರಂತೆ!

ತಿಲೋತ್ತಮೆ:—ತೆಗೆತೆಗೆ ! ಅದೇನು ಮಹತ್ವವಾದ ವಿಷಯ ? ಮಾನವಿಯರಲ್ಲಿ ಅಷ್ಟು ರೂಪವತಿಯರಿದ್ದಾರೆಂದರೆ, ನಂಬುವವರಾರು?

ಮೇನಕೆ;—ಹಾಗಲ್ಲ, ಹಾಗೆ ಹೇಳಬಾರದು. ಲೋಕರೂಢಿಯಲ್ಲಿ ನಾವೇ ರೂಪವತಿಯರೆಂದು ಪ್ರಸಿದ್ಧಿಹೊಂದಿದ್ದರೂ, ಹಿಂದೆ,ದಮಯಂತಿ, ಸುಕನ್ಯಾ, ಮೊದಲಾದ ರಾಜಕನ್ಯೆಯರು ನಮ್ಮನ್ನು ಹಿಂದು ಮಾಡಿದ್ದರಲ್ಲವೆ !

ರಂಭೆ: —ಇಲ್ಲಿ ವಾದವಿವಾದಗಳಿಂದಫಲವಿಲ್ಲ. ಮೊದಲು, ನಮ್ಮ ಅಪ್ಪಣೆಯಿಲ್ಲದೆ ನಮ್ಮಾ ಕ್ರೀಡಾವನವನ್ನು ಭಂಗಿಸಿ, ನಮ್ಮ ವಿಹಾರಕ್ಕೆ ಆತಂಕರಾಗಿರುವ ಆ ಮಾನವಿಯರ ಧಿಟ್ಟತನವನ್ನು ಪ್ರಮಾಣಿಸಿ ನೋಡಲೇಬೇಕು. ಬನ್ನಿರಿ, ಮಕರಂದಮಂಟಪದಲ್ಲಿ ನೋಡುವ.'

(ಹೊರಡುವರು.)

II

ಮಕರಂದಮಂಟಪ

(ಉಭಯ ಪಾರ್ಶ್ವವರ್ತಿನಿಯರಾದ ಚಂದ್ರವದನಾ, ಚಿತ್ರಲೇಖೆಯರೊಡನೆ ವಿಂದಾಖ್ಯನು ನಿದ್ರಾವಶನಾಗಿ ಮಲಗಿರುವನು. ಮೇನಕಿ, ತಿಲೋತ್ತಮೆ, ಊರ್ವಶಿಯರೊಡನೆ ರಂಭೆಯು ಪ್ರವೇಶಿಸುವಳು.)

ರಂಭೆ:—ಸಖಿಯರೆ ! ಜನರೆಲ್ಲರೂ ನಿದ್ರಾವಶರಾಗಿ ಮೈಮರೆತು ಮಲಗಿರುವರು. ಹೊತ್ತು ನಡುರಾತ್ರಿಯಾಗಿರುವುದು. ಇವ್ವಾದರೂ ಈ ಮಂಟಪವು ಎಷ್ಟು ಮನೋಹರವೂ, ಗಂಭೀರವೂ ಆಗಿ ಕಾಣಿಸುತ್ತಿದೆ ನೋಡಿರಿ ?

ಮೇನಕೆ:—(ಮುಂದೆ ಬಂದು ಚಿತ್ರಕಲೆಯನ್ನು ನೋಡಿ ಪರಿಹಾಸದಿಂದ ನಗುತ್ತ; 'ನೋಡಿರಿ, ನೋಡಿರಿ ಪ್ರಿಯಸಖಿಯರೇ ! ಈ ಸುಂದರಿಯು ದೇಹಸ್ಮೃತಿಯಿಲ್ಲದೆ ಹೇಗೆ ವಿಕಾರವಾಗಿ ಮಲಗಿರುವಳು!

ಊರ್ವಶಿ;- --(ವಿಂದಾಖ್ಯನನ್ನು ನೋಡಿ ಮೋಹಜನಕ ಸ್ವರದಿಂದ)

||ರಾಗ|| ಹಿಂದುಸ್ತಾನಿ (ಬಟುವಾಯ್ಕುಂದನ)

ಸಖಿನೋಡಿವನಂ, ಸರೋಜಮುಖಿನೀಂ, ಸಖಿನೋಡಿ

ವನಾವಂ||ಪ||

ಪ್ರಿಯಸಖಿ ನೋಡೀತನದಾವಂ ಸಖಿಪೇಳಿವನಾವಂ||ಅ||

ನರರೂಪವತಾಂ ಧರಿಸೀಪರಿಯೋಳ್ ಸುರಪತಿಬಂದಿಹನೋ |

ನರನೋ, ಸ್ಮರನೋ, ಶಿರಿವರನಿವನೋ, ನೀರಜಮುಖಿ

ಪೇಳಾವಂ ||೧||

ಸಾರಸನಯನಂ, ಚಾರುಸುವದನಂ, ಸಾರಸಸಖನಿಭತೇಜಂ |

....

ರಂಭೆ:—(ಆಪ್ಟಕ್ಕೇ ತಡೆದು, ಚಂದ್ರವದನೆಯಕಡೆಗೆ ಕೈನೀಡಿ ವಿಸ್ಮಯದಿಂದ)ಸಾಕು ಸಾಕು ! ಪ್ರಿಯಸಖಿಯರೇ! ನಿಮ್ಮ ನೋಟವೂ, ವರ್ಣನವೂ ಸಾಕು. ಇಲ್ಲಿ ನೋಡಿರಿ; ಕಾಣುವುದಿಲ್ಲವೇ ಕಣ್ಣು? ತಿಲೋತ್ತಮಾ ! ಇತ್ತನೋಡು; ತ್ರಿಲೋಕವಿಖ್ಯಾತವಾದ ನಿನ್ನ ಸೌಂದರ್ಯಕ್ಕೆ ಇಂದು ಮುಗಿಲುಮುಸುಕಿತು. ಊರ್ವಶಿ ! ಇತ್ತಬಾ, ಇನ್ನು ನಮಗೆ ದೇವಲೋಕದಲ್ಲಿ ಕೂಡ, ಸನ್ಮಾನವುಳಿಯಲಾರದು. ಮೇನಕೆ ! ನೀನೇನೆನ್ನುವೆ ? ಬಂದು ನೋಡಬಾರದೇ ?

ಮೇನಕೆ:—(ಮುಂದೆ ಬಂದು ನೋಡಿ)'ಅಕ್ಕಾ ! ಇವಳು ರೂಪದಲ್ಲಿ ಮಾತ್ರವೇ ಸನ್ಮಾನನೀಯಳಲ್ಲ; ಗುಣ, ಶೀಲ, ದಯಾ, ಧರ್ಮಗಳೆಲ್ಲದರಲ್ಲಿಯೂ ಲೋಕೋತ್ತರವಸ್ತುವೆನ್ನಿಸಲು ಅರ್ಹಳಾಗಿರುವಳು. ಅಂದಿನ ದಮಯಂತಿ,ಸಾವಿತ್ರಿ,ಚಂದ್ರಮತಿಯರಿಗೆ ಇಂದಿನ ಈ ನಾರೀಮಣಿಯೂ ಸಮಾನೆಯಾಗಿರುವಳೆಂದು ನಂಬುವೆನು.

ತಿಲೋತ್ತಮೆ;—(ಮುಂದೆ ಬಂದು ನೋಡಿ ಅಸೂಯೆಯಿಂದ)'ಊರ್ವಶಿ!

ನಿನ್ನ ಸೌಂದರ್ಯಕ್ಕೆ ಬೆಲೆ ಯಿನ್ನೆಲ್ಲಿ? ನಾಳೆಯಿಂದ ನಾವೆಲ್ಲರೂ ಇವಳ ಮನೆಯ ಊಳಿಗಕ್ಕೇ ಸೇರಬೇಕಲ್ಲವೆ? ಸಾಕು; ಒಬ್ಬ ಮಾನವಿಯು ದೇವಕನ್ಯೆಯರನ್ನೂ ಮೂಲೆಗೊತ್ತರಿಸಿ ಬರುವುದೆಂದರೇನು! ನಗೆಗೇಡಲ್ಲವೇ ?

ಊರ್ವಶಿ:—(ಮುಂಚೆ ಬಂದು ನೋಡಿ) 'ಅಕ್ಕ! ಇವಳೇ ಕಾಶ್ಮೀರ ರಾಜಪುತ್ರಿ; ಮತ್ತು ನಮ್ಮ ಇಂದಿನ ವಿಹಾರಕ್ಕೆ ಆತಂಕವನ್ನುಂಟು ಮಾಡಿದ ಶತ್ರು!

ತಿಲೋತ್ತಮೆ:—(ಆತುರದಿಂದ) 'ಅಹುದಹುದು, ಇಂದು ಶತ್ರುವಾಗಿದ್ದಾಳೆ; ಮುಂದೆ ನಮ್ಮ ಕೀರ್ತಿ, ಸನ್ಮಾನ, ಸುಖಕ್ಕೆಲ್ಲಾ ಮೃತ್ಯುವಾಗಿಯೂ ತಿರುಗಬಲ್ಲಳು.

ರಂಭಾ:—ನಿಜ; ಪ್ರಿಯಸಖಿಯರೇ! ನೀವು ಹೇಳುವದೆಲ್ಲವೂ ನಿಜವೇ. ಈಗೇನುಮಾಡಿದರೆ ಇವಳಿಂದ ನಮಗೆ ಭಯವಿಲ್ಲದಂತಾಗುವುದು?

ತಿಲೋತ್ತಮೆ:—ಇವಳನ್ನು ಹೇಗಾದರೂ ಭಂಗಿಸಿದಲ್ಲದೆ, ನಮ್ಮ ಆತಂಕವು ತಪ್ಪುವುದಿಲ್ಲ.

ಮೇನಕೆ:—(ಬೆದರಿನೋಡುತ್ತ) 'ತಿಲೋತ್ತಮಾ! ಏನೆಂದೆ! ಇವಳನ್ನು ಭಂಗಿಸಬೇಕೇ? ಸಾಧ್ಯವೇ? ಇವಳು ಪಾತಿವ್ರತ್ಯಪ್ರಭಾವದಿಂದ ಅಜೇಯಳೆಂದರಿಯೆಯಾ?

ಊರ್ವಶಿ:—ನಿಜ, ಇವಳು ಅಜೇಯಳೇ ಸರಿ; ಆದರೂ ಇವಳನ್ನು ಬಿಡಬಾರದು. ಉಪಾಯಾಂತರದಿಂದಲೇ ಇವಳನ್ನು ವಂಚಿಸಿ, ಇಷ್ಟಾರ್ಥಸಿದ್ಧಿ ಹೊಂದಬೇಕು.

ರಂಭೆ;—ಅಹುದು, ಹಾಗೆ ಮಾಡುವುದೇಸರಿ; ಆದರೆ ದೇವಮಾಯೆಯಿಂದ ಇವಳನ್ನು ನಮ್ಮ ನೆಲೆಗೆ ಕೊಂಡೊಯ್ದು ಬಿಡುವದೇನು?

ಊರ್ವಶಿ:—ಇವಳನ್ನು ನಾವು ಕೈಯಿಂದಲೂ ಮುಟ್ಟಬಾರದು. ಲೋಕದಲ್ಲಿ ಪತಿವ್ರತಾ ಸ್ತ್ರೀಯರಿಗೆ ಪತಿಯೇ ಜೀವನಸರ್ವಸ್ವ

ನಾದುದರಿಂದ ಇವಳ ಗಂಡನಾದ ಈ ರಾಜಪುತ್ರನನ್ನು ನಾವು ಕದ್ದೊಯ್ದರೆ, ಪತಿವಿಯೋಗ ದುಃಖದಿಂದ ತಾನಾಗಿ ಸಾಯು ವಳು. ಹಾಗಾದರೆ ನಮಗೆ ನಿಶ್ಚಿಂತೆಯೂ, ಮನೋಹರನಾದ ಈ ರಾಜಪುತ್ರನ ಸಂಭೋಗ ಸುಖಲಾಭವೂ ಲಭಿಸುವುದು.

ತಿಲೋತ್ತಮೆ:—ಅಹುದಹುದು, ಅದೇ ಸರಿಯಾದ ಉಪಾಯವು.

ರಂಭೆ:—ಹಾಗಿದ್ದರೆ ನಾನು ನನ್ನ ಜಾಲವಿದ್ಯಾಪ್ರಭಾವದಿಂದ ಇವರಿಗೆ ಗಾಢನಿದ್ರೆ ಹತ್ತುವಂತೆ ಮಾಡುವೆನು. ಆ ಬಳಿಕ ನಾವು ನಾಲ್ವರೂ ಸೇರಿ ಇವನನ್ನು ಅಪಹರಿಸುವ! (ಕ್ಷಣಮಾತ್ರ ಧ್ಯಾನಿ ಸುತ್ತಿದ್ದು, ಬಳಿಕ ನಾಲ್ವರೂ ಸೇರಿ ವಿಂದಾಖ್ಯನನ್ನು ಎತ್ತಿ ಕೊಂಡು ಹೊರಟು ಹೋಗುವರು.)

(ಬಳಿಕ ನಿದ್ರಾಭಂಗದಿಂದ ಚಿತ್ರಕಲೆಯು ಗಾಬರಿಗೊಂಡು ನೋಡಿ, ಪತಿಯನ್ನು ಕಾಣದೆ ಥಿಗ್ಗನೆದ್ದು ಚಂದ್ರವದನೆಯ ನೆಬ್ಬಿಸಿ 'ಅಯ್ಯೋ ತಂಗಿ! ತಂಗೀ!! ಏಳು, ಏಳು, ಬೇಗವೇಳು! ಸರ್ವನಾಶವಾಗಿದೆ-ಏಳು.)

ಚಂದ್ರ:—(ಧಿಗ್ಗನೆದ್ದು ಕುಳಿತು ಕೌತುಕದಿಂದ) 'ಏನಾಯಿತು? ಅಕ್ಕ! ಏಕೆ ಭೀತಳಾಗಿರುವೆ!'

ಚಿತ್ರಕಲೆ:—ಅಯ್ಯೋ, ತಂಗೀ! ಇತ್ತನೋಡಲಿಲ್ಲವೇ? ಸರ್ವನಾಶ! ನಮ್ಮ ಸ್ವಾಮಿಯಿಲ್ಲ. ಒಯ್ದವರಾರೋ-ತಿಳಿಯೆನು! ಪತಿಯು ಕೈಬಿಟ್ಟನು!! ಅಯ್ಯೋ! ಮುಂದೇನುಗತಿ?

ಚಂದ್ರ:—(ವಿಸ್ಮಯದಿಂದ) 'ಅಕ್ಕ! ಆಶ್ಚರ್ಯವಾಗಿದೆ! ಸ್ವಾಮಿ ಯನ್ನು ಒಯ್ಯುವದೆಂದರೆ ಸುಲಭವೇ? ಸಾಧ್ಯವೇ? ನಮ್ಮಿಾ ರ್ವರ ಮಧ್ಯದಲ್ಲಿ ಸುಖನಿದ್ರೆಯಲ್ಲಿದ್ದವರನ್ನು ಕರೆದೊಯ್ಯುವುದು, ಸಾಮಾನ್ಯವಾದ ಕೆಲಸವಲ್ಲ! ದೇಹಬಾಧಾ ನಿವಾರಣೆಗಾಗಿ ಅತ್ತಿತ್ತ ಹೋಗಿರಬಹುದು, ಇಷ್ಟೇಕೆ ಭೀತಳಾಗಿ ಕೂಗುವೆ?

ಚಿತ್ರಕಲಾ:—ತಂಗಿ! ಹಾಗೆ ಹೇಳಬಹುದಾದರೂ, ನನಗಾದ ಕನಸಿನಿಂದ ಮನಸ್ಸು ಕೆಟ್ಟುಹೋಗಿದೆ. ಅದಕ್ಕೆ ಅನುಸಾರವಾಗಿ, ಇಲ್ಲಿಯ ದೃಶ್ಯವೂ ಕಾಣುತ್ತಿದೆ, ಏನುಮಾಡಲಿ-ತಾಯಿ ?

ಚಂದ್ರ:—ಅದಾವ ಕನಸು ?

ಚಿತ್ರಕಲಾ:—ನಾವಿಬ್ಬರೂ ಮೈಮರೆದು ಮಲಗಿದ್ದ ವೇಳೆಯಲ್ಲಿ ಅವರಾರೋ ನಾಟಕದ ಮಾಟಗಾತಿಯರು ಬಂದು, ನಮ್ಮ ಸ್ವಾಮಿಯನ್ನು ಕದ್ದೊಯ್ದಂತೆ ತಿಳಿದು ಭಯಪಟ್ಟು ಎದ್ದು ನೋಡಿದೆನು. ಸ್ವಾಮಿಯೂ ಅದೃಶ್ಯ !! ಅಯ್ಯೋ—

ಚಂದ್ರ:—(ವಿಸ್ಮಯ ಕೌತುಕಗಳಿಂದ)—'ಸ್ವಗತಂ' ಏನಿದು! ಸ್ವಪ್ನವು ನಿಜವಾಗಿಯೂ ಫಲಿಸಿತೆಂದೇ? ಹಾಗಾದರೆ-ಎಲ್ಲಿಗೆ ಹೇಗೆ ಒಯ್ಯಲ್ಪಟ್ಟಿರಬೇಕು ? ನಂಬಲಾರೆನು. ಒಂದುವೇಳೆ ಇಲ್ಲಿಯೇ ಎಲ್ಲಾದರೂ ಮರೆಯಾಗಿರಬಾರದೇಕೆ? (ಯೋಚಿಸಿ) ಇರಬೇಕು. ನಮ್ಮಿಬ್ಬರನ್ನೂ ಪರೀಕ್ಷಿಸುವ ಉದ್ದೇಶದಿಂದ ಹೀಗೆ ಮಾಡಿರಬಹುದು, ಇರಲಿ. (ಪ್ರಕಾಶವಾಗಿ) 'ಅಕ್ಕಾ ! ಒಂದೇ ಬಾರಿಗೆ ಹೀಗೆ ಹತಾಶರಾಗಬಾರದು' ಬಾ, ನಾವಿಬ್ಬರೂ ಇಲ್ಲಿ ಸುತ್ತಮುತ್ತಲೂ ಒಂದುಬಾರಿ ಹುಡುಕಿ ನೋಡಿ ಬರುವ.

(ಚಿತ್ರಕಲೆಯು ಆತಳಾಗಿ ಎದ್ದು ಹೊರಡುವಳು. ಚಂದ್ರವದನೆಯೂ ಚಿತ್ರಕಲೆಯೊಡನೆ ಸೇರಿ ಮಂಟಪದ ನಾಲ್ಕುಕಡೆಯನ್ನೂ ಹುಡುಕಿ) ''ನಾಥಾ ! ಎಲ್ಲಿರುವಿರಿ ? ಏನುಮಾಡುವಿರಿ ? ಸಾಕು; ಪರೀಕ್ಷಿಸುವುದಿನ್ನು ಸಾಕು. ಇನ್ನುಬಳಲಿಸದೆ, ದಯೆದೋರಿ ಕಾಪಾಡಿರಿ. '

ಚಿತ್ರ:—(ನಾಲ್ಕು ಕಡೆಯನ್ನೂ ನೋಡಿ ಆತಳಾಗಿ-ಕೆಳಗೆ ಕುಕ್ಕರಿಸಿ) ಅಯ್ಯೋ ! ದೈವವೇ ! ಪಾಪಿದೈವವೇ !! ಇಷ್ಟೇಕೆ ನಿರ್ದಯೆ ?

ನಾವೇನುಮಾಡಿದೆವು? ನಮ್ಮಿಂದಾದ ಅಪರಾಧವಾದರೂ ಏನು? ಅಯ್ಯೋ—ಸ್ವಾಮೀ ! ಜೀವನ ಸರ್ವಸ್ವ.................
(ವಿಸ್ಮೃತಿ ಹೊಂದಿ ಕೆಳಗೆ ಬೀಳುವಳು.)

ಚಂದ್ರ:—(ದುಗುಡದಿಂದ) (ಸ್ವಗತಂ) ಭಗವಂತ! ಇದೇನೀವಿಪತ್ತು? ಇದೂ ನಿನ್ನಲೀಲೆಯೇ!! ಈಗ ನಾನುಮಾಡುವುದೇನು? ಸ್ವಾಮಿಯ ವಿಚಾರವೇನಾಗಿದೆಯೆಂದು ತಿಳಿಯಲಿ? ಆಗತಕ್ಕದನ್ನು ಅನುಭವಿಸಿಯೇ ತೀರಬೇಕು! ಈಗ ನಾನು ಪತಿಯವಿಚಾರದಲ್ಲಿ ಕುಳಿತಿದ್ದರೆ, ಪತಿಗೆ ಪ್ರಾಣಾಧಿಕಳಾಗಿದ್ದ ಈ ನಾರೀ ರತ್ನವನ್ನು ಸಮಾಧಾನಪಡಿಸುವವರಾರು? ನನ್ನ ಸ್ಥಿತಿ, ಹೇಗಾದರೂ ಇರಲಿ, ನನ್ನೀ ಅಕ್ಕನನ್ನು ನಾನು ಸಂತಯಿಸದಿದ್ದರೆ, ಅದರಿಂದೇನಾದರೂ ಅಪಾಯವುಂಟಾದರೆ—ಅದರಿಂದ ನನ್ನ ಸ್ವಾಮಿಯು—ಸ್ವತಂತ್ರನಾಗಿರಲಿ—ಅಪಹೃತನಾಗಿರಲಿ—ಹೇಗಾದರೂ, ಆತನ ಅಸುಖಕ್ಕೆ ನಾನೇ ಕಾರಣಳಾದೇನಲ್ಲವೇ?—ನಿಜ; ಈಗ ನನಗೆ ಈ ದೇವಿಯನ್ನು ಸಮಾಧಾನಪಡಿಸುವುದೇ ಪ್ರಥಮಕರ್ತವ್ಯವು. ಆಗಲಿ, "ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ" ಭಗವಂತನೇ ನೋಡಿಕೊಳ್ಳಲಿ! (ಚಿತ್ರಕಲೆಯ ಬಳಿಗೆ ಬಂದು ಕುಳಿತು ಸೀರೆಯ ಸೆರಗಿನಿಂದ ಬೀಸುತ್ತ - ತೆರೆಯಕಡೆಯನ್ನು ನೋಡಿ-) (ಪ್ರಕಾಶ) 'ಪ್ರಿಯಸಖಿ; ಸುನೀತೆ! ವಿನೀತೆ—'

(ಸಖಿಯರು ನಿದ್ದೆಗಣ್ಣನ್ನು ತಿಕ್ಕುತ್ತ ಗಾಬರಿಯಿಂದ ಓಡಿಬರುವರು.)

ಚಂದ್ರ:—ಪ್ರಾಣಾಪ್ತಸಖಿಯರೇ! ಉಳಿದವಿಚಾರವನ್ನು ನಿಧಾನವಾಗಿ ಹೇಳುವೆನು. ಮೊದಲು ನನ್ನ ಈ ಅಕ್ಕನನ್ನು ಮಂಟಪಕ್ಕೆ ಎತ್ತಿಕೊಂಡುಬಂದು ಹಾಸಿಗೆಯಮೇಲೆ ಮಲಗಿಸಿ ಉಪಚರಿಸಿರಿ!
(ಸಖಿಯರು ಮರುಮಾತಿಲ್ಲದೆ ಚಿತ್ರಕಲೆಯನ್ನು ಎತ್ತಿಕೊಂಡು ಮಂಟಪದ ಹಾಸಿಗೆಯಮೇಲೆ ಮಲಗಿಸಿ ಉಪಚರಿಸುವರು.)

ಚಂದ್ರ:—(ತೆರೆಯಕಡೆ ನೋಡಿ)'ಯಾರಲ್ಲಿ-ಸೇವಕರಾರೂ ಇಲ್ಲವೇ ?'

ಸೇವಕ:—(ನಿದ್ರಾಭಂಗದಿಂದ ತತ್ತರಗೊಳ್ಳುತ್ತ ಬಂದು ಕೈಮುಗಿದು) 'ಒಡತಿ ! ಸೇವಕನು ಇದೇ ಸಿದ್ಧನಾಗಿದ್ದಾನೆ.'

ಚಂದ್ರ:—ಅಯ್ಯ! ನೀನು ಈ ಕ್ಷಣವೇ ಹೋಗಿ, ಈ ವನಪ್ರಾಂತ್ಯದಲ್ಲಿ ಒಂದಿಷ್ಟು ಕಡೆಯಾದರೂ ಬಿಡದೆ ಎಲ್ಲಾ ಕಡೆಯನ್ನೂ ಹುಡುಕಿಬರಬೇಕು. ಸ್ವಾಮಿಯು ಈಗ ಗಳಿಗೆಗೆ ಮೊದಲು ಎಲ್ಲಿಯೋ ಅದೃಶ್ಯರಾಗಿರುವರು. ಇಲ್ಲಿ ಎಲ್ಲಿಯಾದರೂ ಯಾರ ಬಿಡಾರದಲ್ಲಿಯಾದರೂ, ಕಾರ್ಯಗೌರವದಲ್ಲಿರಬಹುದೇನೆಂದು ತಿಳಿದು ನೋಡಿ ಬಾ.'

ಸೇವಕ:—ಅಪ್ಪಣೆ (ಹೊರಟು ಹೋಗುವನು.)

ಚಂದ್ರವದನೆ:—(ಮಂಟಪವನ್ನು ಪ್ರವೇಶಿಸಿ, ಶಯ್ಯೆಯ ಬಳಿಯಲ್ಲಿ ಕುಳಿತು ದುಗುಡದಿಂದ) 'ಪ್ರಾಣೇಶ್ವರಾ ! ಏನುಮಾಡಿದಿರಿ ? ನಿಜವಾಗಿಯೂ ನಮ್ಮನ್ನು ಬಿಟ್ಟು ಹೋದಿರೋ?—ವಿನೋದವಾಡಲು ಹೀಗೆ ಮರೆಯಾಗಿರುವಿರೋ ?—ಇಲ್ಲವೆ ಮತ್ತಾವ ಕಂಟಕಕ್ಕಾದರೂ ಗುರಿಯಾದರೋ?--'ಹರಿಹರಿ! ಅನುಗ್ರಹಿಸು; ಕ್ಷಮಿಸು ?! ಅಭದ್ರವಾಕ್ಯಕ್ಕೆಡೆಗೊಡದೆ, ಕ್ಷೇಮವನ್ನುಂಟುಮಾಡು. ದಯಾಮಯ!'

ಚಿತ್ರಕಲೆ:—(ಕಣ್ಣೀರುಸುರಿಸುತ್ತ) ಪ್ರಾಣೇಶ್ವರಾ ! ಎಲ್ಲಿರುವಿರಿ? ನೆಳಲಿನಂತೆ ನಿಮ್ಮನ್ನೇ ಅನುವರ್ತಿಸಿಕೊಂಡಿರುವ ಅಬಲೆಯರಾದ ನಮ್ಮನ್ನು ಈ ನಡುಕಾಡಿನಲ್ಲಿ, ಈ ನಟ್ಟಿರುಳಲ್ಲಿ, ಬಿಟ್ಟು ಹೋಗಲು ಮನಸ್ಸು ಒಪ್ಪಿತೇ ? ನಾವು ನಡುನೀರಿನಲ್ಲಿ ಬಿಡಲ್ಪಟ್ಟವರಂತೆ, ಕಂಗೆಟ್ಟು ಅಳುತ್ತಿದ್ದರೂ ಮರುಕವಿಲ್ಲವೇ ! ಅಯ್ಯೋ—ಸ್ವಾಮಿನ್ ! ಇಷ್ಟೇಕೆ ನಿರ್ದಯೆ ? ನಾವೇನು ಮಾಡಿದೆವು? ನೀವಲ್ಲದೆ ನಮಗಿನ್ನಾರು ದಿಕ್ಕು ? ಮತ್ತಾರನ್ನೂ

ಕಾಣದೆ ನಿಮ್ಮನ್ನೇ ನಂಬಿ ಬಂದಿರುವವರನ್ನು ಕಾಡುವುದು ಧರ್ಮವೇ! ಬೇಡಿರಿ, ಕಡೆಗಣಿಸಬೇಡಿರಿ; ಬೇಡಿಕೊಳ್ಳುವೆವು. ಕೈಹಿಡಿದು ಕಾಪಾಡಿರಿ! ಬನ್ನಿರಿ, ಪ್ರಭು! ಬನ್ನಿರಿ; ಮೈದೋರಿರಿ; ದಾಸಿಯರಲ್ಲಿ ದಯೆತೋರಿರಿ.'

ಚಂದ್ರ:—(ನಮ್ರಭಾವನೆಯಿಂದ) 'ಅಕ್ಕಾ! ಹೀಗೇಕೆ ಅಜ್ಞರಂತೆ ಅಳುತ್ತಿರುವೆ? ಕಳವಳದಿಂದ ಸ್ವಾಮಿಯಲ್ಲಿ ವೃಥಾಪವಾದವನ್ನೇಕೆ ಹೊರೆಯಿಸುತ್ತಿರುವೆ? ಅನುಭವವನ್ನು ತಪ್ಪಿಸಲು ನಮ್ಮಿಂದ ಸಾಧ್ಯವೇ? ವಿಪತ್ಕಾಲದಲ್ಲಿ ಹೀಗೆ ಹದಗೆಟ್ಟು ಅಳುವುದೇ ನಮ್ಮ ನೀತಿಯೇ? ದುಗುಡವನ್ನು ಬಿಡು, ಅಕ್ಕಾ! ಕೇಳು:— "ವಿಪದಿ ಧೈರ್ಯಮಥಾಭ್ಯುದಯೇಕ್ಷಮಾ!" ಎಂಬ ನೀತಿಯನ್ನು ಸ್ಮರಿಸಿ, ಕರ್ತವ್ಯದಲ್ಲಿ ಗಮನವಿರಿಸು—ತಾಳ್ಮೆಯನ್ನು ತಾಳು'

(ಆಯಾಸಪಡುತ್ತ ಸೇವಕರು ಪ್ರವೇಶಿಸುವರು.)

ಸೇವಕರು:—ತಾಯಿಾ! ಅಪ್ಪಣೆಯಂತೆ, ಎಲ್ಲಾ ಕಡೆಗಳಲ್ಲಿಯೂ ಹುಡುಕಿದೆವು. ಎಲ್ಲಿಯೂ ಸ್ವಾಮಿಯ ಕುರುಹಾದರೂ ತೋರಿಬರಲಿಲ್ಲ.

ಚಂದ್ರ:—ಕೆಲವು ಹೊತ್ತು ನೆಲವನ್ನೇ ನೋಡುತ್ತ ಚಿಂತಿಸುತ್ತಿದ್ದು, ಬಳಿಕ ಮೇಲೆನೋಡಿ ನಿಟ್ಟುಸಿರಿಟ್ಟು, ಸೇವಕರನ್ನು ಕುರಿತು, 'ಭಗವಂತನಿರುವನು! ಜಾಗರೂಕರಾಗಿರಿ, ನಡೆಯಿರಿ.'

(ಸೇವಕರು ಹೊರಟು ಹೋಗುವರು.)

ಚಿತ್ರಕಲೆ:—ದುಃಖವನ್ನು ತಡೆಯಲಾರದೆ ಉನ್ಮತ್ತಳಂತೆ ಗಟ್ಟಿಯಾಗಿ

ರಾಗಾ|| (ಎಂತುಕಳುಹುವೆ-ಸುತೆಯಾ)

ಎಂತು ಸಹಿಸುವೆ-ಅಕಟಾ-ಎಂತು ಸಹಿಸುವೆ ||ಪ||
ಕಾಂತನಿರವಕಾಣದೆ (ಹಾಹಾ) ಶಾಂತಿಯೆಲ್ಲಿದೆ ||ಅನು||
ಕೂಡಿ ಬಂದನು-ನಮ್ಮಂ-ಕಾಡಿಗಿತ್ತನು ||
ಮಾಡಿದೆವಾವತಪ್ಪನು(ವಿಧಿಯೇ)ಕೇಡಿಗನಾದನು ||೧||

ಪತಿಯ ನುಳಿದಮೇಲ್-ಅಕಟಾ-ಗತಿಯದಾರಿಹರ್ ||
ಮತಿಗೆ ತೋರವಾದುದೇ(ಹಾಹಾ) ಹತವಿಧಿಯುಗ್ರೈದುದೆ||೨||
(ಮೈಮರೆತು ಮಲಗುವಳು.)

ಚಂದ್ರ:—(ಖತಿಗೊಂಡು) ಹರಿಹರಿ ! ಹೀಗೂ ಅಪವಾದವೇ ? ನಿನ್ನ ವಿಭೂತಿಗೂ ಹೀಗೆ ಆರೋಪವೇ? ಸಹಿಸಲಾರೆನು!! ಭಗವನ್—ಗುರುದೇವ ! ಈ ವೇಳೆಯಲ್ಲಿ ನೀನೇ ಮಾರ್ಗದರ್ಶಕನು. ಸ್ವಾಮಿಯ ಅವಸ್ಥೆಯೇನಾಗಿದೆಯೆಂದು ತಿಳಿಯಲಿದೋ ಈಗಲೆ ಪ್ರಯತ್ನಿಸಿರುವೆನು. ಆಶೀರ್ವದಿಸು. (ಭಕ್ತಿಯಿಂದ ಧ್ಯಾನಪರವಶಳಾಗಿ ಕುಳಿತುಕೊಳ್ಳುವಳು.)

ಸುನೀತೆ:—(ಚಿತ್ರಕಲೆಯನ್ನು ಕುರಿತು) 'ತಾಯಿ ! ಈ ಕಾಡಿನಲ್ಲಿ, ಅನಾಯಕರಾಗಿ ಕುಳಿತು, ಅಬಲೆಯರಾದ ನೀವು ಏನುಮಾಡುವಿರಿ? ಇಲ್ಲಿದ್ದರೆ ಮುಂದಿನಕಾರ್ಯಸಾಧನೆಗೆ ಯಾವ ಪ್ರಯತ್ನ ಮಾಡಿದಂತಾಯಿತು ? ನಿಮ್ಮ ತಂದೆಯಬಳಿಗಾದರೂ ಸೇರಿ, ಅಲ್ಲಿಂದ ನಿಮ್ಮ ಸ್ವಾಮಿಯನ್ನು ಹುಡುಕಲು ಸರಿಯಾದವರನ್ನು ಕಳುಹುವುದು, ಯುಕ್ತವಾಗಿತೋರುವುದಲ್ಲವೆ?'

ಚಿತ್ರ:—(ನಿಟ್ಟುಸಿರಿಟ್ಟು) 'ಪ್ರಿಯಸಖಿ ! ನಾನೇನುಹೇಳಲಿ? ನನ್ನೊಬ್ಬಳಿಂದೇನಾಗುವುದು ? ತಂಗಿಯು ಸಮ್ಮತಿಸಿ ಹೊರಟರಲ್ಲವೆ, ಇಲ್ಲಿಂದ ಹೊರಡಲಾಗುವುದು ? ಇವಳನ್ನು ಕೇಳಬೇಕೆಂದರೆ ಕೂಡ ಅವಕಾಶವಿಲ್ಲ—ಆಗಲೇ ಯೋಗಾರೂಢಳಾಗಿ ಕುಳಿತು ಮೈಮರೆತಿರುವಳಲ್ಲಾ !!!'—

ಸಖಿಯರು:—(ಮುಂದೆಬಂದು ಚಂದ್ರವದನೆಯ ಮುಂದೆ ನಿಂತು ಗಟ್ಟಿಯಾಗಿ) 'ಸುಕುಮಾರಿ ! ಚಂದ್ರವದನಾ ! ಪ್ರಿಯಸಖಿ ! ರಾಜಪುತ್ರಿ'—

(ಚಂದ್ರವದನೆಯು ಅಚಲೆಯಾಗಿ ಕುಳ್ಳಿರುವಳು)

ಸಖಿಯರು;—ಸಾಕು, ಸಾಕು ! ಸಖಿ ! ಪೂರ್ವಸ್ಥಿತಿಯು ಮತ್ತೆ ಬಂದಿತೇ? ಸಾಕು, ಏಳು! (ತಲೆಯನ್ನು ಅಲ್ಲಾಡಿಸುವರು)

ಚಂದ್ರ:—(ಎಚ್ಚರಗೊಂಡು ಕಣ್ದೆರೆದು ಮೇಲೆನೋಡಿ)'ಧರ್ಮಸಾಕ್ಷಿ! ಕ್ಷಮಿಸು;ಪ್ರಸನ್ನನಾಗು!ಧೂರ್ತತೆಗೆ ಕ್ಷಮಾಪ್ರಾಯಶ್ಚಿತ್ತವಿತ್ತು ಮನ್ನಿಸು.'

ಸಖಿ:—(ಭ್ರಾಂತರಾಗಿ) 'ಇದೇಕೆ, ಪ್ರಿಯಸಖಿ ! ಹೀಗೇಕೆ ಪ್ರಾರ್ಥಿಸುವೆ ? ಯಾರನ್ನುದ್ದೇಶಿಸಿ ? ಕ್ಷಮಿಸುವರಾರು?—ಕ್ಷಮಿಸುವುದಾರನ್ನು ?

ಚಂದ್ರ;—(ಕೈಮೇಲಕ್ಕೆತ್ತಿ ತೋರಿಸಿ ನಗುತ್ತ) 'ಗುರುಪ್ರಸಾದ!'

ಚಿತ್ರ:—ಹೀಗೇಕೆ ಹುಚ್ಚರಂತೆ ನಗುತ್ತಿರುವೆ-ತಂಗಿ ?

ಚಂದ್ರ:—ಹೇಳುವೆನಿರಲಿ, ನೀವೇಕೆ ತ್ವರೆಪಡಿಸಿದಿರಿ!

ಚಿತ್ರ;—ಸ್ವಾಮಿಯನ್ನಳಿದು ನಾವಿಬ್ಬರೂ ಇಲ್ಲಿ ಕುಳಿತುಮಾಡುವುದೇನು ?

ಚಂದ್ರ:—(ದರ್ಪದಿಂದ ನಕ್ಕು) 'ಏನುಮಾಡುವುದೇ ! ಅಕ್ಕ ! ತಿಳಿಯಲಿಲ್ಲವೆ ? ಪತಿವಿಯೋಗದುಃಖನಿಯರು ಮಾಡುವುದೇನೆಂದು, ಸತೀವರ್ಗವು, ಪತಿಲಾಭಕ್ಕೆ ಮಾಡಬೇಕಾದುದೇನೆಂದು, ತಿಳಿದಿದ್ದರೆ ಮತ್ತೇಕೆ ಕೊರತೆ ?

ಚಿತ್ರ:—ಕೊರತೆಯಿಲ್ಲ; ಈಗಲೇ ಸಾಯುವುದಕ್ಕೂ ಸಿದ್ಧವಾಗಿದ್ದೇನೆ. ಆದರೆ ಒಂದು ವೇಳೆ ಬದುಕಿದ್ದರೇನಾದರೂ ಪತಿಯನ್ನು ಕಾಣುಲಾದೀತೆಂಬ ಆಶೆಯು, ಸ್ವಲ್ಪ ಬಾಧಿಸುತ್ತಿದೆ. ಅಷ್ಟೇ ತಂಗಿ ! ನೀನೊಪ್ಪಿದರೆ, ಸಮೀಪದಲ್ಲಿಯೇ ನಮ್ಮ ಪಿತೃಗೃಹ......

ಚಂದ್ರ:—(ತಲೆದೂಗಿ)ನೀನು ತೆರಳುವುದಾದರೆ ನಿನಗೆ ನನ್ನ ಅಡ್ಡಿಯಿಲ್ಲ. ನಾನು ಮಾತ್ರ ಈ ಸ್ಥಳವನ್ನು ಬಿಟ್ಟು, ಅತ್ತಿತ್ತಲಾದರೂ ಕದಲಲಾರೆನು.

ಚಿತ್ರ:—ಅದೇಕೆ, ಹಾಗೆ ಹೇಳುವೆ ?

ಚಂದ್ರ:—ಹೇಗೆ ಹೇಳುವೆನೋ? ಅಕ್ಕ ! ಸತಿಯ ಸುಖದ ಸಾಮ್ರಾಜ್ಯವೇ ಪತಿಸನ್ನಿಧಾನವು. ಆತನ ಪ್ರಸನ್ನತೆಯೇ ಮುಕ್ತಿಲಕ್ಷ್ಮಿಯು. ಆತನನ್ನು ಬಿಟ್ಟು ತಂದೆಯ ಮನೆಯ ಮಹದೈಶ್ವರ್ಯವಾದರೂ ಸತಿಯರಿಗೆ ಸುಖಾವಹವಾಗದು. ಮತ್ತೊಂದು ಮಾತು:—ತಂದೆಯ ಮನೆಯಿಂದ ಹೊರಡುವಾಗ ನಾವು ಎಷ್ಟು ಸಂಭ್ರಮದಲ್ಲಿದ್ದೆವು ?–ಆಗಿನ ನಮ್ಮ ಉತ್ಸಾಹ, ವೈಭವಗಳಿಗೆ ಕಾರಣರಾರು ? ಆರಿಂದ ನಮಗೆ ಅಷ್ಟು ಸನ್ಮಾನವಾಯಿತು ? ತಿಳಿದಿದೆಯಷ್ಟೆ, ಹಾಗೆಂದ ಬಳಿಕ, ಸೌಭಾಗ್ಯದಾಯಕನಾದ ಆ ನಾಥನನ್ನು ಕಳೆದುಕೊಂಡು, ದುಃಖದಿಂದ ಬಾಡಿದ ಮುಖವನ್ನು ಯಾರಿಗೆ ತೋರಬಹುದು ? ಒಂದು ವೇಳೆ ಹಾಗೂ ಭಂಡತನದಿಂದ ಹೋದೆವೆಂದರೂ, ಅಲ್ಲಿ ನಮಗೆ ಮೊದಲಿನ ಸನ್ಮಾನವೈಭವಗಳು ದೊರೆಯುವವೇ? ನೀವು ಹೇಳಿರಿ– ಸಖಿಯರೇ! ಪತಿವಿರಹಿತೆಯರಾದವರನ್ನು ಹತಭಾಗ್ಯರೆಂದು ಕಂಡ ಕಂಡವರು ಉಪೇಕ್ಷಿಸಲಾರರೆ ? ಇಂತಹ ನಿಂದ್ಯವಾದ ಕೆಲಸವು ನನ್ನಿಂದಾಗದು.

ಚಿತ್ರ:— (ತಲೆಬಾಗಿ ಕಣ್ಣೀರು ತುಂಬಿ ಗದ್ಗದಸ್ವರದಿಂದ) 'ತಂಗಿ! ಕೋಪಿಸಬೇಡ ! ಪತಿಯ ಅಸನ್ನಿಧಾನದಲ್ಲಿ, ಅಬಲೆಯರಾದ ನಮಗೆ ತಾಯ್ತಂದೆಗಳಲ್ಲದೆ ಮತ್ತಾರೂ ರಕ್ಷಕರಿಲ್ಲವೆಂದು ಹಾಗೆ ಹೇಳಿದೆನು.

ಚಂದ್ರ:—(ತಲೆದೂಗಿ) 'ನಿಜ ! ತಾಯಿ ತಂದೆಗಳೇ ಈಗರಕ್ಷಕರೆನ್ನಬೇಕು. ಆದರೆ ನೋಡು ಅವರಿಗೂ ಹಿರಿಯನಾದಧರ್ಮದೇವನೊಬ್ಬನಿದ್ದಾನಲ್ಲವೇ? ಆತನೆ? ನಮಗೆ ರಕ್ಷಕನು. ಏಕೆಂದರೆ, ವಿವಾಹಕಾಲದಲ್ಲಿ, ಅಗ್ನಿಸಾಕ್ಷಿಯಾಗಿ ನಾವು ನಮ್ಮ

ತಾಯ್ತಂದೆಗಳಿಂದ ಮತ್ತೊಬ್ಬರ ವಶಕ್ಕೊಪ್ಪಿಸಲ್ಪಟ್ಟವಷ್ಟೆ; ಅದು ಮೊದಲು, ತಾಯ್ತಂದೆಗಳಿಗೆ ನಾವು ದೂರದವರೂ, ನಮ್ಮ ಕೈಹಿಡಿದವರಿಗೆ ಮತ್ತು ಆತನ ಕಡೆಯವರಿಗೆ ಸೇರಿದವರೂ ಆಗಿರುವೆವು. ನಮ್ಮಲ್ಲಿ, ಆ ತಾಯ್ತಂದೆಗಳ ಆ ಅವ್ಯಾಜ ವಾತ್ಸಲ್ಯವು ವಿಶೇಷವಾಗಿ ವರ್ಷಿಸುತ್ತಿದ್ದರೂ, ನಾವು ಅವರ ಬಳಿಯಲ್ಲಿದ್ದು ಅದನ್ನು ಸಾಕ್ಷಾತ್ತಾಗಿ ಅನುಭವಿಸಬೇಕೆಂದರೆ– ನಮಗೆ, ಪತಿಗೃಹದಲ್ಲಿರಬೇಕಾದ ನಮಗೆ,ಸುಖಕರವಲ್ಲ. ಮತ್ತು ಉತ್ಸಾಹದಿಂದ ತಾಯ್ತಂದೆಗಳ ಅಪ್ಪಣೆಯನ್ನು ಹೊಂದಿ ಹೊರಟುಬಂದ ನಾವು, ಈಗ ಸಂತಾಪಾತಿಶಯದಿಂದ ಬಾಡಿ, ಬಸವಳಿದು ಹೋದೆವಾದರೆ, ನಮ್ಮನ್ನು ನೋಡಿ ಆ ತಾಯಿ ತಂದೆಗಳ ಮನಸ್ಸಾದರೂ ಹೇಗಾಗಬಹುದೋ? ಯೋಚಿಸಿರಿ, ನಾವು ಅನುಭವಿಸುತ್ತಿರುವದು ಸಾಲದೆ, ಅವರನ್ನೂ ದುಃಖಾಗ್ನಿಗೆ ಆಹುತಿಕೊಡಬೇಕಾಗುವದಲ್ಲವೆ ಅಕ್ಕಾ! ಕ್ಷಮೆಯಿರಲಿ! ನನ್ನನ್ನು ಈ ಕಾರ್ಯದಲ್ಲಿ ಬಲಾತ್ಕರಿಸಬೇಡ; ನಿನಗಿಷ್ಟವಾದರೆ ತೆರಳಬಹುದು.'

ಚಿತ್ರ:—(ನಿಟ್ಟುಸಿರಿಟ್ಟು)'ತಂಗಿ! ನಿನ್ನನ್ನು ಬಿಟ್ಟು ನಾನೆಲ್ಲಿಗೂ ಹೋಗಲೊಲ್ಲೆನು. ನಿನಗಾದ ಗತಿಯೇ ನನಗೂ ಆಗಲಿ!

ಚಂದ್ರ:—ಅಕ್ಕಾ! ಸಂಕಲ್ಪವನ್ನು ಸ್ಥಿರಪಡಿಸಿಕೊಳ್ಳು; ದುಃಖವನ್ನು ದೂರಮಾಡು. ನಮ್ಮ ಸ್ವಾಮಿಯು ಜೀವಿಸಿರುವರೆಂದು ದೃಢವಾಗಿ ನಂಬಿ, ತಾಳ್ಮೆಯನ್ನು ತಾಳು!

ಚಿತ್ರ:—(ಆತುರದಿಂದ)'ಅದೆಲ್ಲಿರುವರು? ತಂಗೀ!

ಚಂದ್ರ:—ಅಮರಾವತಿಯಲ್ಲಿ, ಅಪ್ಸರಿಯರ ಬಂಧನದಲ್ಲಿ!!!

ಚಿತ್ರ:—ತಿಳಿದುದೆಂತು?

ಚಂದ್ರ:—ಸದ್ಗುರೂಪದಿಷ್ಟವಾದ ಜ್ಞಾನಬಲಯೋಗದಿಂದ ತಿಳಿದೆನು.

ಚಿತ್ರ:—(ಸಂಶಯದಿಂದ) ಹಾಗಿದ್ದರೆ, ನಮಗಿನ್ನು ಪತಿಲಾಭದ ಆಶೆಗೆ ಉಪಾಯವ್ಯೋ ?

ಚಂದ್ರ:—ಮತ್ತಾವುದೂ ಅಲ್ಲ. ಇದೇ ಈ ಯೋಗವೇ, ಈ ತಪಸ್ಸೇ ಪತಿಲಾಭಕ್ಕೆ ಮುಖ್ಯೋಪಾಯವು.

ಚಿತ್ರ:—(ಕಳವಳದಿಂದ)'ಅಯ್ಯೋ, ತಂಗಿ! ಇಂದ್ರಲೋಕವೆಲ್ಲಿ, ಅಪ್ಸರಿಯರ ಕ್ರೀಡಾಗಾರವೆಲ್ಲಿ ?—ಅವರ ಪ್ರಣಾಯಾನುಬಂಧಿಯಾಗಿರುವ ಸ್ವಾಮಿಯೆಲ್ಲಿ? ಕೇವಲ ಶಕ್ತಿಹೀನರಾದ-ಮಾನವರಾದ-ನಾವೆಲ್ಲಿ ? ಇದೆಲ್ಲವೂ ಅಸಾಧ್ಯವಲ್ಲವೆ ?

ಚಂದ್ರ:—(ದರ್ಪದಿಂದ)'ಅದೇಕೆ, ಅಕ್ಕಾ! ಸ್ವರೂಪವಿಜ್ಞಾನದಲ್ಲಿ ನಿನಗಿಷ್ಟೇಕೆ ಭ್ರಾಂತಿಯಾಗಿದೆ ? ನಾವಾರು ? ನಮ್ಮ ಪೂರ್ವಜರ ಪ್ರಭಾವಗಳೆಷ್ಟರಮಟ್ಟಿಗಿದ್ದುವು? ತಿಳಿಯಲಾರೆಯೇಕೆ ? ನಮ್ಮ ತಾಯಿ; ತ್ರಿಲೋಕ ವಂದನೀಯೆಯಾದ ಭಾರತಮಾತೆ ! ಆ ಮಾತೆಯ ಅನಂತ, ಅದ್ಭುತ, ಅನುಪಮ, ಅಸಾಧಾರಣ, ಗುಣಗಳಲ್ಲಿ, ಒಂದು ಸಾಸಿವೆಕಾಳಷ್ಟಾದರೂ ಅವಳ ಸಂತಾನದಲ್ಲಿರಲಾರದೆ ಹೋಗುವದೇನು ? ಭಯವೇಕೆ ? ಅವಳ ಅನುಗ್ರಹಲಬ್ಧವಾದ ತಪಃಪ್ರಭಾವದಿಂದ, ಅಸಾಧ್ಯವಾದ ಕಾರ್ಯವೇನಿದೆ ? ನಮ್ಮ ಪರಮಾದರ್ಶನಾರೀಮಣೀ ಸಾವಿತ್ರಿಯು ಮಾನವಿಯಾಗಿದ್ದರೂ ಅವಳ ತಪಃಪ್ರಭಾವಕ್ಕೆ ಯಮಧರ್ಮನೇ ಜಿತನಾದೆನೆಂದು ಒಪ್ಪಿ, ಮೃತನಾಗಿದ್ದ ಅವಳ ಪತಿಯನ್ನು ಮತ್ತೆ ಬದುಕಿಸಿಕೊಡಲಿಲ್ಲವೆ ? ಸಾಕು, ಸಂಶಯವಿಷ್ಟಕ್ಕೆ ಸಾಕು. ಒಂದೇ ಮಾತಿನಲ್ಲಿ ಹೇಳುವೆನು. ಗುರ್ವನುಗ್ರಹ, ಭಗವತ್ಕಟಾಕ್ಷ, ಸ್ವಾಮಿಯ ಅನಂತವಾದ ಪ್ರೇಮ, ಈ ಮೂರು ಬಲಗಳಿಂದಲೂ ನಾನಿಂದು ಯೋಗದಲ್ಲಿ ಕುಳಿತು, ಪಂಚೇಂದ್ರಿಯ

ಗಳನ್ನು ಬಂಧಿಸಿ, ಜ್ಞಾನೇಂದ್ರಿಯದ ದೆಸೆಯಿಂದ ಪ್ರಾಣ ವಾಯುವನ್ನು ಪಾತಿವ್ರತ್ಯಾಗ್ನಿಯಲ್ಲಿ ಹುತಗೊಳಿಸಿ, ಊರ್ಧ್ವ ಲೋಕಕ್ಕೇರಿಸಿ, ಆದರಿಂದ ನಮ್ಮ ಸ್ವಾಮಿಯನ್ನು ನಾನಿರುವಲ್ಲಿಗೇ ಕರೆಯಿಸಿಕೊಳ್ಳುವೆನು. ಆ ವರೆಗೆ ನಿದ್ರಾಹಾರಗಳೊಂದನ್ನೂ ಮುಟ್ಟಲಾರೆನು. ಇದನ್ನು ತ್ರಿಕರಣಸಾಕ್ಷಿಯಾಗಿ ಪ್ರಮಾಣ ಮಾಡಿ ಹೇಳಿರುವೆನು. ಇದಕ್ಕೆ ತ್ರಿಕಾಲವಂದ್ಯನೂ, ಕರ್ಮ ಸಾಕ್ಷಿಯೂ ಆದ ಭಗವಾನ್ ಸೂರ್ಯನೇ ಸಾಕ್ಷಿಮಂತನು. ಇನ್ನು ನೀವು ನನ್ನನ್ನು ನುಡಿಯಿಸಲಾಗದು.

(ಯೋಗಾರೂಢಳಾಗಿ ಕುಳಿತುಕೊಳ್ಳುವಳು)

ಚಿತ್ರ:—ಪ್ರಿಯಸಖಿಯರೇ! ನನಗೇನೊಂದೂ ತೋರದು. ಈ ವಿಚಾರವನ್ನು ವಿವರವಾಗಿ ಬರೆದು ನಮ್ಮ ಅತ್ತೆ ಮಾವಂದಿರಿಗೂ, ನಮ್ಮೀರ್ವರ ತಾಯ್ತಂದೆಗಳಿಗೂ ಓಲೆಗಳನ್ನು ಕೊಟ್ಟು ಚಾರರನ್ನು ಕಳುಹಿರಿ. ಅವರೂ ಬಂದು ನಮ್ಮಿಬ್ಬರ ದುಸ್ಥಿತಿಯನ್ನು ನೋಡಿ ಏನು ಹೇಳುವರೋ ಹೇಳಲಿ? ಈ ರಾತ್ರಿಯೇ ವರ್ತಮಾನವನ್ನು ಕಳುಹಬೇಕು. (ದುಃಖಾತಿಶಯದಿಂದ ನಿಟ್ಟುಸಿರಿಟ್ಟು)ಭಗವಂತ! ನೋಡಿ ತೃಪ್ತಿಪಡು ? (ಮೈಮರೆದು ಮಲಗುವಳು, ಸಖಿಯರು ಹೊರಡುವರು.)

ಸೇನಾಪತಿಯ ಬಿಡಾರ.

(ವ್ಯಸ್ತಚಿತ್ತರಾದ ಸಖಿಯರೂ, ಪತ್ರಗಳನ್ನು ಹಿಡಿದು ಸೇನಾಪತಿಯೂ ಕುಳಿತಿರುವರು.)

ಸೇನಾಪತಿ:—ತಾಯಿ! ಏನುಮಾಡುವ ? ಎಲ್ಲವೂ ಭಗವದಿಚ್ಛೆ ! ಆಕಸ್ಮಿಕವಾಗಿ ಬಂದೊದಗಿರುವ ಈ ವಿಪತ್ತನ್ನು ಭಗವಂತನೇ ಪರಿಹಾರ ಮಾಡಬೇಕು. ನಾನು ಇದೇ–ಇಲ್ಲಿನಡೆದಿರುವ ವಿದ್ಯಮಾನವನ್ನೆಲ್ಲಾ ಸಾದ್ಯಂತವಾಗಿ ಬರೆದಿರುವೆನು. ಒಂದೇ ಬಗೆ

ಯಾಗಿ ಬರೆದಿರುವ ಈ ಮೂರು ಪತ್ರಿಕೆಗಳನ್ನೂ-ನಮ್ಮ ಮಹಾ ರಾಜಾ ಕಾಶ್ಮೀರಪತಿ ಸತ್ಯವರ್ಮ ಮಹಾರಾಜರಿಗೂ, ಮತ್ತೆ ಆಂಧ್ರ, ಪಾಂಚಾಲ ದೇಶಾಧಿ ರಾಜರಿಗೂ ಈಗಲೇ ಕೊಟ್ಟು ಕಳುಹುವೆನು. ಮತ್ತೇನುಮಾಡಲಿ ?

ಸಖಿಯರು:—(ಕಣ್ಣೀರುತುಂಬಿ ಗದ್ಗದಸ್ವರದಿಂದ) 'ಅಪ್ಪ ! ಯಾರೇನುಮಾಡುವರು ? ನಮ್ಮ ದುರ್ಯೋಗ ಫಲವಿದು ; ನಾವೂ ಜತೆಯಲ್ಲಿ ಬರುತ್ತೇವೆಂದು ಬಂದು...ಂದಲೇ ನಮ್ಮ ರಾಜಪುತ್ರಿಗೆ ಇಂತಹ ವಿಷಮ ಸ್ಥಿತಿಯುಂಟಾಯಿತು: ಕ...ಣ ತಪಃಕ್ಲೇಶದಿಂದ ದೇಹವನ್ನು ಹೀಗೆ ಕೃಶಮಾಡುತ್ತಿರುವ ರಾಜಪುತ್ರಿಯ ಹಟವನ್ನೂ, ಆಕೆಯ ಹಟಕ್ಕೂ, ಪತಿವಿಯೋಗದುಃಖಕ್ಕೂ ಸಮವಾಗಿ ದುಃಖಿಸಿ ದುಃಖಿಸಿ ಹಲುಬುತ್ತಿರುವ ಪಾಂಚಾಲರಾಜಪುತ್ರಿಯ ಸಂತಾಪವನ್ನೂ ನೋಡಿ, ನಮ್ಮಿಂದ ಸಹಿಸಲಾಗದಂತಿದೆ. ಏನುಮಾಡಲಿ ?

ಸೇನಾ:—ಅಧೈರ್ಯ ಪಡಬಾರದು. ಧೈರ್ಯವನ್ನವಲಂಬಿಸಿ ಹಿರಿಯರು ಬರುವವರೆಗೂ ನೀವು ಅವರನ್ನು ಸರ್ವಪ್ರಕಾರದಿಂದಲೂ ಸಮಾಧಾನಪಡಿಸುತ್ತಿರಬೇಕು. ನೀವಿನ್ನು ದೇವಿಯರಲ್ಲಿಗೆ ತೆರಳಿರಿ. ಮುಂದಿನ ಕಾರ್ಯವನ್ನು ಗಮನಿಸಲು ಹೊರಡುವೆನು.

(ಇಬ್ಬರೂ ತೆರಳುವರು.)

(ಮಕರಂದಮಂಟಪದ ಮುಂಭಾಗ.)

(ಪತಿವಿಯೋಗ ಸಂತಾಪದಿಂದ ಚಿತ್ರವತಿಯು ನೆಲದಮೇಲೆಬಿದ್ದು ಅಳುತ್ತಿರುವಳು.)

ಚಿತ್ರ:—ಭಗವಂತ ! ಇನ್ನೂ ಕೃಪೆಮಾಡಲೊಲ್ಲೆಯಾ ? ದೇವ ! ಇಷ್ಟು ನೋಡಿದುದು ಸಾಲದೇ ? ಅಯ್ಯೋ ಪಾಪಿದೈವವೇ ?—

ರಾಗ || (ಪತಿಯಾಗ ಬಂದೆನ್ನ ಸಲಹೊ)

ಗತಿಯೇನು ಮುಂದೆ ಹಾ ವಿಧಿಯೇ-ದುರ್ವಿಧಿಯೆ ||ಪ||
ಪತಿಯುಳಿದು ಜೀವಿಪ ಬಗೆಯಾಯ್ತೆ-ಹರಿಯೇ ||ಅನು||
ಕಾಂತನಿಲ್ಲದಮೇಲಿಳೆಯೊಳ್-ಚಿಂತಾಕುಲದೊಳ್ ||
ಶಾಂತಿಯಿಲ್ಲದೆ ತಪಿಸು-ವಂತಾಯ್ತೆ ಫಲವು ||ಗತಿ|| ||೧||
ಪತಿಯುಳಿದಿಹಲೋಕವಾಸ-ರಸಾಭಾಸ ||
ಹತವಿಧಿ ಮಾಡಿದಾಕೃತಿಯಿದುಮೋಸ ||೨||
ಹರಣವನಿಡಲಾರೆನಿನ್ನು-ಪಾಪಿನಾನು ||
ವರಶೇಷಗಿರಿದೊರೆ-ಭರಿಸೆನ್ನನೀನು ||೩||

(ಬಿಕ್ಕಿ ಬಿಕ್ಕಿ ಅಳುವಳು.)

(ಸಖಿಯರು ಪ್ರವೇಶಿಸಿ ನೋಡಿ, ಖತಿಗೊಂಡು ಮುಂದೆ ಬಂದು ಬೀಸುತ್ತಾ) 'ಪ್ರಿಯಸಖಿ! ಧೈರ್ಯವನ್ನು ಹೊಂದು! ನಿಮ್ಮ ಹಿರಿಯರೆಲ್ಲರೂ ಬಂದಿರುವರು. ಇನ್ನೇನು - ಇಷ್ಟರಲ್ಲಿ ಇಲ್ಲಿಗೂ ಬರುವರು. ಸಂತಾಪವನ್ನು ಸ್ವಲ್ಪಮಟ್ಟಿಗಾದರೂ ತಡೆದು ಸ್ಥಿರಭಾವದಿಂದ ಕುಳ್ಳಿರು. ಇದೇನೀ ಯಸ್ಥಿರತೆ?

ಚಿತ್ರ;—(ತಲೆಯೆತ್ತಿ-) 'ಸಖಿಯರೇ! ನಿಜವಾಗಿಯೂ ಬಂದಿರುವರೆ?

ಸಖಿ:—ಪ್ರಿಯಸಖಿ! ಎಲ್ಲರೂ ಆಗಲೇ ಹೊರಟು ಬಂದವರು, ನಿಮ್ಮ ತಂದೆಯನ್ನು ನಿರೀಕ್ಷಿಸುತ್ತ ನಿಂತಿದ್ದರು. ನಿಮ್ಮ ತಂದೆಯೂ ಬಂದುದನ್ನು ನೋಡಿಬಂದೆವು. ಇನ್ನೇನು ಇಲ್ಲಿಗೂ ಬರುವರು.

(ತೆರೆಯಲ್ಲಿ)—ಬಂಧುವೇ! ಈ ಮುಪ್ಪಿನಲ್ಲಿ, ಈ ಹೆತ್ತೊಡಲನ್ನು ಹಿಡಿದು ಕೆಟ್ಟುವೆನೆಂತು?—ಅಯ್ಯೋ! ದುರದೃಷ್ಟವೇ!

ಸಖಿಯರು:—ತಾಯಿ! ಕೇಳುಕೇಳು;—ನಿನ್ನ ಮಾವನು ದುಃಖವನ್ನು ಸಹಿಸಲಾರದೆ ಕಾತರಿಸುತ್ತ ಬರುತ್ತಿರುವನು. ನಿಮ್ಮ ತಂದೆಗಳಿಬ್ಬರೂ ಆತನನ್ನು ಹಿಡಿದು ಸಂತೈಸಿ ಕರೆತರುತ್ತಿರುವರು

(ಕಾಶ್ಮೀರ-ಪಾಂಚಾಲ-ಆಂಧ್ರರಾಜರು ಪ್ರವೇಶಿಸುವರು)

ಚಿತ್ರ:- (ಎದ್ದು ಬಂದು ಆರ್ತನಾದದಿಂದ) 'ಅಭಾಗಿನಿಯಾದೆನು! ಅಪ್ಪಾ, ಅಭಾಗಿನಿಯಾದೆನು!!' (ಪಾಂಚಾಲರಾಜನ ಕಾಲಮೇಲೆ ಬೀಳುವಳು)

ಪಾಂಚಾಲ:— (ಚಿತ್ರಕಲೆಯ ತಲೆಯನ್ನು ಹಿಡಿದೆತ್ತಿ) 'ಮಗುವೇ! ದುಃಖವನ್ನು ತಡೆದುಕೊ. ನಿನ್ನ ಮಾವನಿದೋ-ನೋಡು ತಾಯಿ! ಹೇಳು, ನಿನ್ನ ಪತಿಯ ವೃತಾಂತವೇನಾಗಿದೆ?

ಚಿತ್ರ:—ಅಪ್ಪ! ಏನಾಗಿದೆಯೆಂದು ಹೇಳಲಿ? ನೆಲದಲ್ಲಿ ಮಲಗಿದ್ದ ಪತಿಯು ಕಣ್ಮರೆಯಾಗಿರುವರು. ಈ ವರೆಗೆ ನೆಲೆ-ಸುಳಿವೆಲ್ಲಿಯೂ ತಿಳಿದುಬಂದುದಿಲ್ಲ. ತಂಗಿಯಾದರೋ, ಪತಿಯು ದೇವನಾರಿಯರ ಮಾಯೆಗೊಳಗಾಗಿ ಅವರ ಬಂಧನದಲ್ಲಿ ತಪಿಸುತ್ತಿರುವರೆಂದೂ, ಅವರನ್ನು ತನ್ನ ತಪಃಪ್ರಭಾವದಿಂದ ಕರೆಯಿಸಿಕೊಳ್ಳುವೆನೆಂದೂ ಹಟತೊಟ್ಟು ಕುಳಿತು ತಪಿಸುತ್ತಿರುವಳು. ನಾನು ಅಹೋರಾತ್ರಿಯೂ ಈ ಬಗೆಯಾಗಿ ಹಂಬಲಿಸುತ್ತ ಕುಳಿತಿರುವೆನು

ಆಂಧ್ರಪತಿ:—(ಕಂಪಿತಸ್ವರದಿಂದ) 'ಹಾ! ಹಾ!! ಅಯ್ಯೋ! ಕಷ್ಟ ಕಷ್ಟ! ಮಗುವೇ! ಮತ್ತೆ ನಿನ್ನನ್ನು ನೋಡುವೆನೇ? ಅಯ್ಯೋ! ದೇಶಸಂಚಾರಕ್ಕೆಂದು ಹೊರಟುಬಂದ ನಿನ್ನನ್ನು ಮತ್ತೆ ನೋಡಲಿಲ್ಲವೇ? ಕಂದಾ!—ಪ್ರೇಮದ ದುಕ್ಕಂದಾ!! ನನಗಿನ್ನು ದಿಕ್ಕಾರು! ಯಾರನ್ನು ನಂಬಿದ್ದೆನೋ ಅಂತಹ ನೀನೇ ನನ್ನ ಕೈಬಿಟ್ಟು ಹೋದೆಯಾ!!!. ಈ ಮುಪ್ಪಿನಲ್ಲಿ ನನಗೀದುಃಖವನ್ನು ತಂದಿಟ್ಟೆಯಾ?-ಅಯ್ಯೋ! ಅಯ್ಯೋ! (ಕೆಳಗೆ ಬೀಳುವನು).

ಸತ್ಯವರ್ಮ:—(ಮೆಲ್ಲನೆತ್ತಿ ಕುಳ್ಳಿರಿಸಿ ಹಿಡಿದು ವಿಷೀತನಾಗಿ) 'ಪೂಜ್ಯರೇ! ತಾವು ಹಿರಿಯರು; ಬಲ್ಲವರು-ಹೀಗೆ ದುಃಖಿಸುವದು ಸರಿಯಲ್ಲ. ಇಲ್ಲಿರುವ ನಾವು ಮೂವರೂ ಸಮಾನದುಃಖಿಗಳೇಆಗಿರುವೆ

ವಾದರೂ, ದೇವ! ನಾನು ಗುರುಚರಣಸಾಕ್ಷಿಯಾಗಿ ಪ್ರಮಾಣ ಮಾಡಿ ಹೇಳಬಲ್ಲೆನು! ಸಮಾಧಾನಹೊಂದಿರಿ. ಸುಕುಮಾರಿ, ಚಂದ್ರವದನೆಯ ಸತ್ಯಪ್ರತಿಜ್ಞೆಯಲ್ಲಿ ನನಗೆ ಪೂರ್ಣವಿಶ್ವಾಸ ವಿರುವುದು. ಭಗವಂತನು ಪ್ರಸನ್ನನಾಗುವನು!

ಆಂಧ್ರ:—(ಸತ್ಯವರ್ಮನನ್ನು ಬಿಗಿದಪ್ಪಿ) 'ತಮ್ಮ ಹೇಳು ; ನಿನ್ನ ಸುಕುಮಾರಿ—ಅವಳೆಲ್ಲಿರುವಳು ? ನನಗೆ ಅವಳನ್ನಾದರೂ ತೋರಿಸಿ, ಶಾಂತಿಯನ್ನುಂಟುಮಾಡು. '

ಚಿತ್ರ: -(ನಿಟ್ಟುಸಿರಿಟ್ಟು)'ತಂಗಿಯು ಇಲ್ಲಿಯೇ ಮಂಟಪದೊಳಗಡೆಯಲ್ಲಿ ಕುಳಿತು ಮೈಮರೆದು ತಪಮಾಡುತ್ತಿರುವಳು.

ಆಂಧ್ರ:—(ಎದ್ದುನಿಂತು ಆತುರದಿಂದ)'ತಮ್ಮ ! ನನ್ನನ್ನು ಕರೆದೊಯ್ದು ಆ ದೇವಿಯಮುಂದೆ ನಿಲ್ಲಿಸು'(ಸೊಸೆಯನ್ನು ನೋಡಿ)'ತಾಯಿ ! ನಿನ್ನ ತಂಗಿಯು ಕುಳಿತಿರುವಲ್ಲಿಗೆ ನಮ್ಮನ್ನು ಕರೆದುಕೊಂಡು ಹೋಗು. '

(ಚಿತ್ರಕಲೆಯು ಮೂವರನ್ನೂ ಕರೆತಂದು, ಸಮಾಧಿಯಲ್ಲಿ ಕುಳಿತಿದ್ದ ಚಂದ್ರವದನೆಯ ಮುಂದೆ, ನಿಲ್ಲಿಸಿ ಕೈತೋರಿಸುತ್ತ) 'ಪೂಜ್ಯರೇ ! ಇದೋ ಕಟಾಕ್ಷಿಸಬೇಕು, ಇದೇ ಬಗೆಯಾಗಿ ದೇಹಸ್ಮೃತಿಯಿಲ್ಲದೆ ಧ್ಯಾನಾಸಕ್ತೆಯಾಗಿ ಕುಳಿತಿರುವಳು. ಅಲ್ಲದೆ ಅವಳು 'ಪ್ರಸಂಗವಶದಿಂದ ಹಿರಿಯರೇನಾದರೂ ಬಂದರೆ ಅವರಿಗೆ ನನ್ನ ವಂದನೆಯನ್ನು ಸಮರ್ಪಿಸುವುದಲ್ಲದೆ, ಕರ್ತವ್ಯದಲ್ಲಿ ಕಣ್ಣಿಟ್ಟಿರುವ ನನ್ನನ್ನು ಕೃತಾರ್ಥಳಾಗುವಂತೆ ಆಶಿರ್ವದಿಸಬೇಕಲ್ಲದೆ, ಶೋಕಕಾತರದಿಂದ ವಿಘ್ನವನ್ನು ತಂದೊಡ್ಡಬಾರದೆಂದೂ ನಿವೇದಿಸುವಂತೆ ಹೇಳಿ ಕುಳಿತಿರುವಳು. '

ಸತ್ಯ:— (ಸಖೇದಾಶ್ಚರ್ಯದಿಂದ) 'ಭಗವಾನ್—ಗುರುದೇವ ! ಅನುಗ್ರಹಿಸು!-ನಿನ್ನ ಆಶಿರ್ವಾದವು ಫಲ-ಾರಿಯಾಗಲೆಂದು ಆಶಿರ್ವದಿಸು!!

(ಆಂಧ್ರಪತಿಯನ್ನು ಕುರಿತು) 'ಆರ್ಯ! ತಮ್ಮ ಪುತ್ರವಧು ಚಂದ್ರವದನೆಯು, ಆರಂಭದಿಂದಲೂ ದೃಢವ್ರತೆಯು! ಇವಳ ಸಂಕಲ್ಪವನ್ನು ತಿರುಗಿಸಲು ನಮಗಾರಿಗೂ ಸಾಧ್ಯವಲ್ಲ. ಅಲ್ಲದೆ, ಇಂತಹ ಉತ್ತಮೋತ್ತಮಕಾರ್ಯದಲ್ಲಿ ಕೃತನಿಶ್ಚಯಳಾಗಿರುವವಳನ್ನು ಆತಂಕಪಡಿಸುವದೂ ನಮಗೆ ಸರಿಯಲ್ಲ. ಆದುದರಿಂದ ಇವಳ ತಪಃಸಿದ್ಧಿಲಾಭವಾಗುವವರೆಗೆ ನಾವು ನಿರೀಕ್ಷಿಸುತ್ತಿರುವದೇ ಮೇಲು.

ಆಂಧ್ರ:—(ಕಣ್ಣೀರುಸುರಿಸುತ್ತ ಸತ್ಯವರ್ಮನ ಹೆಗಲಮೇಲೆ ಕೈಯೂರಿ) 'ತಮ್ಮ! ಇಂತಹ ಸಾಧ್ವೀಮಣಿಯನ್ನು ಸುತೆಯನ್ನಾಗಿ ಹೊಂದಿದ ನೀನೇ ಧನ್ಯನು! ನೀನು ಹೇಳಿದಂತೆ ನಡೆಯುವುದಲ್ಲದೆ ನನಗಿನ್ನಾವ ದಾರಿಯಿದೆ?'

ಪಾಂಚಾಲ:— ಆರ್ಯ! ಶಾಂತರಾಗಿರಿ. (ಸತ್ಯವತಿಯನ್ನು ನೋಡಿ)'ಮಗುವೇ! ನಿನ್ನೀ ತಂಗಿಯದೇಹವನ್ನು ಜಾಗರೂಕತೆಯಿಂದ ಕಾಪಾಡುತ್ತಿರು! ಭಗವಂತನು ಈ ದೇವಿಯ ಮೂಲಕವಾಗಿ ನಮಗೆಲ್ಲರಿಗೂ ಪ್ರಸನ್ನನಾಗುವನು,—ಸಂಶಯವಿಲ್ಲ. (ಸತ್ಯವರ್ಮನನ್ನು ನೋಡಿ)'ಅಣ್ಣಾ! ಪೂಜ್ಯರಾದ ಇವರೊಡನೆ ನಾವೂ ಸ್ಥಾನಾಂತರವನ್ನು ಸೇರಿ, ಕ್ರೂರಗ್ರಹಶಾಂತಿಕ್ರಿಯೆಗಳನ್ನು ನಡೆಯಿಸುವುದು ಆವಶ್ಯಕವಲ್ಲವೆ?'

ಸತ್ಯ:—ಅದೂ ಆಗಬಹುದು. 'ವಿಪ್ರವಾಕ್ಯೋ ಜನಾರ್ದನಃ' ಎಂದು ಹಿರಿಯರಾಡುವರು. ಭಗವಂತನು ಯಾವ ವಿಪ್ರರೂಪದಿಂದಲಾದರೂ ಬಂದು ವಿಪತ್ತನ್ನು ಪರಿಹರಿಸಿ ಉದ್ಧಾರಮಾಡಿದರೆ ಸಾಕು. (ಆಂಧ್ರಭೂಪಾಲನನ್ನು ಕುರಿತು)'ಪೂಜ್ಯರೇ! ಬರುವಿರಷ್ಟೆ? ಶಾಂತಿಕ್ರಿಯಾಕಲಾಪಕ್ಕೆ.'

ಆಂಧ್ರ:—ತಮ್ಮ! ನಾನು ಹುಚ್ಚನಾಗಿದ್ದೇನೆ. ನನಗೊಂದೂ ತಿಳಿಯದು. ನೀವಿಬ್ಬರಿದ್ದಲ್ಲಿ ನಾನಿದ್ದು, ನೀವು ಮಾಡುವ ಕಾರ್ಯದಲ್ಲಿನನ್ನ ಶಕ್ತಿಯಿದ್ದಷ್ಟು ಮಾಡುವೆನು; ಕರೆದೊಯ್ಯಿರಿ. ಭಗವಂತ! ಅನುಗ್ರಹಮಾಡು. ಮಂಗಳಾಂಗಿಯ ಮನೋಯೋಗಕ್ಕೆ ಮಂಗಳಾಶಾಸನವನ್ನು ಮಾಡು. (ಹೊರಡುವರು).

ಇಷ್ಟಕ್ಕೆ ಚತುರ್ಥಾಂಕವು

——○——

||ಶ್ರೀ||

ಪಂಚಮಾಂಕವು.

——○——

ಇಂದ್ರಸಭಾ.

(ರಾಜರ್ಷಿ - ದೇವರ್ಷಿ - ಮಹರ್ಷಿ ಗಣದಿಂದ ಕೂಡಿದ ಇಂದ್ರನು ಒಡ್ಡೋಲಗದಲ್ಲಿ ಕುಳ್ಳಿರುವನು.)

ಇಂದ್ರ:—(ಮಹರ್ಷಿಗಳ ಕಡೆಗೆ ತಿರುಗಿ ವಿನಯದಿಂದ) 'ತಪೋಧನರೇ! ವರ್ತಮಾನ ಸ್ಥಿತಿಯಲ್ಲಿ, ಭೂಲೋಕದಲ್ಲಿರುವವರೊಳಗೆ, ಮಾತಾಪಿತೃಸೇವಕನೂ, ಸತ್ಯವ್ರತನೂ ಆದ ಸತ್ಪುತ್ರನೂ, ಪತಿಪಾದ ಸೇವಾ ನಿರತವ್ರತೆಯೂ, ತಪಸ್ವಿನಿಯೂ, ಗುರುವಿಧೇಯಳೂ ಆದ, ವಧೂಮಣಿಯೂ-ಯಾರಾದರಿರುವರೇ ? ಸತ್ಯವಾನ-ಸಾವಿತ್ರಿ, ಮತ್ತು ರಾಮಚಂದ್ರ - ಜಾನಕೀದೇವಿಯರ ಕೀರ್ತಿಲತೆಗಳು ವಿಶೇಷವಾಗಿ ಪ್ರೋತ್ಸಾಹವನ್ನು ಹೊಂದುವುದಾರಿಂದ ? ತಿಳಿಯಸಲಾಗುವುದೇ !

ತಪೋಧನರು:—ದೇವರಾಜ ! ನಿನ್ನ ಪ್ರಶ್ನೆಗೆ ಒಳಪಟ್ಟಿರುವ ಧನ್ಯಾತ್ಮರು, ಭೂಲೋಕದಲ್ಲಿ, ಎಷ್ಟೋಮಂದಿಯಿರುವರು. ಆದರೂ, ಅವರೆಲ್ಲರಲ್ಲಿಯೂ, ಆಂಧ್ರದೇಶದ ಯುವರಾಜನೂ, ಕಾಶ್ಮೀರದೇಶದ ರಾಜಪುತ್ರಿಯೂ, ವರ್ತಮಾನಕಾಲದ ಸತ್ಯವಾನ-ಸಾವಿತ್ರೀದೇವಿಯರೆಂದೇ ಹೇಳುವಂತಿರುವರು.

ಇಂದ್ರ:—(ಆಶ್ಚರ್ಯದಿಂದ) 'ಹಾಗೆಯೇ? ಆಶ್ಚರ್ಯ ! ಆದರೆ, ಆ ಪುಣ್ಯಾತ್ಮರು ಯಾವ ಮಹರ್ಷಿಯ ಶಿಷ್ಯವರ್ಗಕ್ಕೆ ಸೇರಿದವರು ?

ತಪೋಧನರು:—ನಮ್ಮ ಪರಮಪೂಜ್ಯಪಾದರಾದ ಭೃಗುಮಹರ್ಷಿಗಳ ಶಿಷ್ಯರು.

(ವ್ಯೋಮಸಂಚಾರಿಗಳಾದ ಗಂಧರ್ವರಪ್ರವೇಶ)

ಗಂಧರ್ವ—(ಶಂಕಾತಂಕಗಳಿಂದ)'ದೇವರಾಜಾ! ಕಾಪಾಡು! ಕಾಪಾಡು!! (ಮುಂದೆ ಅಡ್ಡಬೀಳುವರು.)

ತಪೋಧನರು:—(ಭಯಚಕಿತರಾಗಿ ನೋಡುವರು.)

ಇಂದ್ರ:—ಗಂಧರ್ವರೇ ! ವಿಚಾರವೇನು? ಹೀಗೇಕೆ ಆರ್ತರಾಗಿಬಂದಿರಿ?

ಗಂಧರ್ವರು:—ದೇವ ! ಏನೆಂದು ಹೇಳಲಿ ? ಒಬ್ಬ ತಪಸ್ವಿನಿಯಿಂದ ಘೋರಟ ತಪೋಗ್ನಿಯು, ವ್ಯೋಮಮಾರ್ಗವನ್ನು ಮೀರಿ, ಅಮರಾವತಿಯನ್ನೂ ಸಮೀಪಿಸಿರುವುದು. ಅದರ ತಾಪವನ್ನು ಸಹಿಸದೆ ಓಡಿಬಂದೆವು. ಈಗಲೇ ನಿವಾರಿಸದಿದ್ದರೆ ಹಾನಿ ತಪ್ಪದು!

ಇಂದ್ರ:—ತಪೋಧನರೇ ! ಹೀಗಾಗಲು ಕಾಣವೇನಿರಬೇಕು ?

ತಪೋಧನರು:—(ಯೋಚಿಸುತ್ತ ಮೆಲ್ಲನೆ,) 'ಅಯ್ಯಾ ! ದೇವರಾಜ ! ನಾರಿಯು ಘೋರವಾದ ತಪಸ್ಸಿನಲ್ಲಿ ತೊಡಗಬೇಕಾದರೆ, ಅವಳ ಮನೋದ್ವಿಗ್ನತೆಗೆ ಅವುದೋ ಪ್ರಬಲ ಕಾರಣಗಳುಂಟಾಗಿರಬೇಕು, ಹಾಗೂ, ಅವಳ ತಪೋಗ್ನಿಯು-ಇಲ್ಲಿಗೇ ಬರುತ್ತಿರುವ

ದೆಂದರೆ, ನಿನ್ನ ದೇವರಾಜ್ಯದ ಪ್ರಜೆಗಳಲ್ಲಿ ಯಾರಿಂದಲೋ ಬ್ರಹ್ಮದ್ರೋಹವು ನಡೆದಿರಬೇಕೆಂದೇ ತಿಳಿದುಬರುತ್ತಿದೆ.

ಇಂದ್ರ:—(ಸ್ವಲ್ಪಹೊತ್ತು ಚಿಂತಿಸುತ್ತಿದ್ದು ಬಳಿಕ ತಲೆಯೆತ್ತಿ) 'ಗಂಧರ್ವರೇ ! ನೀವು ಈಗಲೇ ಹೋಗಿ, ಆತಪಸ್ವಿನಿಯ ಮುಖ್ಯ ಗುರಿಯೆಲ್ಲಿರುವದೆಂಬುದನ್ನೂ, ಅವಳ ಸಂತಾಪಕ್ಕೆ ಕಾರಣರಾರೆಂಬುದನ್ನೂ ತಿಳಿದು ಬನ್ನಿರಿ.'

ಗಂಧರ್ವರು:—'ಅಪ್ಪಣೆ' (ಹೊರಟು ಹೋಗುವರು.)

ಇಂದ್ರ:—(ಗಾನವಿದ್ಯಾ ಶಿಕ್ಷಕನಾದ ಚಿತ್ರಸೇನನನ್ನು ಕುರಿತು.) 'ಅಯ್ಯಾ ! ಚಿತ್ರಸೇನ ! ನರ್ತಕಿಯರಲ್ಲಿ ಒಬ್ಬಿಬ್ಬರಾದರೂ ಇಂದು ಸಮ್ಮುಖಕ್ಕೆ ಬಾರದಿರುವದನ್ನು ನೋಡಿ, ಸಂಶಯವುಂಟಾಗುತ್ತಿದೆ. ಅವರಿಂದಲೇನಾದರೂ ವಿಶೇಷಗಳು ನಡೆದಿರುವುದಾದರೆ - ತಿಳಿದು ಬೇಗ ಬರಬೇಕು.

ಚಿತ್ರಸೇನ:—'ಅಪ್ಪಣೆ ! ' (ಹೋಗುವನು.)

ಇಂದ್ರ:—ತಪೋಧನರೇ ! ದೇವಲೋಕವನ್ನೂ ತಲ್ಲಣಿಸುವಂತೆ ಮಾಡಿರುವ ಆ ತಪಸ್ವಿನಿಯ ಪ್ರಭಾವವು ಅತ್ಯದ್ಭುತವಲ್ಲವೆ ?

ತಪೋ:—ಆಶ್ಚರ್ಯವೇನು ? ದೇವರಾಜ ! ಸಾಧ್ವಿಯರಿಗೆ ಅಸಾಧ್ಯವಾದುದೊಂದೂ ಇರುವುದಿಲ್ಲ. ಇದಕ್ಕೆ ದೃಷ್ಟಾಂತವನ್ನು ನೋಡಬೇಕೆಂದರೆ, ಹಿಂದೆ, ಸಾವಿತ್ರಿಯನ್ನೂ, ಮತ್ತು ನಿನ್ನೊಡನೆ ದಿಕ್ಪಾಲಕರನ್ನೂ ಜಯಿಸಿ, ನಳನನ್ನು ವರಿಸಿದ ದಮಯಂತಿಯನ್ನೂ, ಸ್ವಲ್ಪಮಟ್ಟಿಗೆ ಸ್ಮರಿಸಿಕೊಂಡರೂ ಸಾಕಾಗಿದೆಯಲ್ಲವೆ !

(ಗಂಧರ್ವರು ಪ್ರವೇಶಿಸುವರು.)

ಗಂಧರ್ವರು:—ದೇವರಾಜ ! ತಪಸ್ವಿನಿಯು ಕಾಶ್ಮೀರ ರಾಜಪುತ್ರಿಯೆಂದೂ, ಅವಳು ಅಗೋಚರನಾಗಿರುವ ತನ್ನ ಪತಿಯನ್ನು ಹೊಂದಬೇಕೆಂದು ಉಗ್ರತಪಸ್ಸಿಗೆ ಕುಳಿತಿರುವಳೆಂದೂ ತಿಳಿದೆವು.

(ಚಿತ್ರಸೇನನು ಆತುರದಿಂದ ಪ್ರವೇಶಿಸುವನು.)

ಚಿತ್ರಸೇನ:—ದೇವರಾಜ ! ತ್ವರೆಮಾಡು ! ನಿನ್ನ ಸಭಾನರ್ತಕಿಯರಿಂದ ಅಪರಾಧವು ನಡೆದಿದೆ. ಆಂದ್ರದೇಶದ ಯುವರಾಜನು ನರ್ತಕಿಯರ ನಿರ್ಬಂಧದಿಂದ, ಅವರ ಕ್ರೀಡಾಮಂದಿರದ ಗುಪ್ತ ಗೃಹದಲ್ಲಿ ಅಳುತ್ತಿರುವನು.

ಇಂದ್ರ:—(ದಿಗ್ಗನೆದ್ದು ಕೋಪಾವೇಶದಿಂದ) 'ಹಾ ! ಪ್ರಮಾದ ! ಪ್ರಮಾದ !! ಎಲ್ಲಿ, ಹೊರಡಿರಿ; ಈಗಲೇಹೋಗಿ! ಆಧೂರ್ತೆಯರನ್ನು ಶಿಕ್ಷಿಸಿ ಆ ತಪಸ್ವಿನಿಯನ್ನು ಸಂತೈಸಿ ಬರುವ-ನಡೆಯಿರಿ.)

(ಎಲ್ಲರೂ ಹೊರಡುವರು)

(ಅಪ್ಸರಿಯರ ಕ್ರೀಡಾಗಾರದ ಗುಪ್ತ ಗೃಹ)

(ಹಾಸಿಗೆಯಮೇಲೆ ಕುಳಿತು ವಿಂದಾಕ್ಷನು ಹಲುಬುತ್ತಿರುವನು.)

ವಿಂದಾಕ್ಷ:—(ದುಗುಡದಿಂದ) 'ಅಯ್ಯೋ, ಕಷ್ಟ ! ಕಷ್ಟ !! ಸಹಿಸುವುದು ಬಹುಕಷ್ಟ !!! ಹಾ ! ನಾನೇಕೆ ಜನ್ಮವೆತ್ತಿದೆನು? ನನ್ನಿಂದ ಯಾರೇನು ಸುಖಪಟ್ಟರು ? ಹೆತ್ತ ತಾಯಿ ತಂದೆಗಳಿಗೆ ಮುಪ್ಪಿನಲ್ಲಿ, ಅವರ ಆತ್ಮ ಸುಖಕ್ಕೆ ಮೃತ್ಯುವಾಗಿ ತಿರುಗಿದೆನು. ಇತ್ತ ಅತ್ತೆಮಾವಂದಿರ ಅಂತಸ್ತಾಪಕ್ಕೆ ಕಾರಣನಾದೆನು. ಮತ್ತೆ ನನ್ನನ್ನೇನೆರೆನಂಬಿ, ಸ್ವಜನ ಬಾಂಧವರೆಲ್ಲರನ್ನೂ ತೊರೆದು ಬಂದ ಆ ಪ್ರಾಣಾಧಿಕರಾದ ಪತ್ನಿಯರನ್ನು, ಆ ಪರಮಪ್ರೇಮದಾಯಿನಿಯರನ್ನು ಕಾಡಿಗೆ ಈಡುಮಾಡಿ ಬಂದೆನು. ಇವರಪಾಡೇ ಇಷ್ಟಾದಮೇಲೆ, ಉಳಿದ ಆಶ್ರಿತನಾಥರಿಗೆ ನನ್ನಿಂದಾದುದನ್ನು ಹೇಳುವದೇನು ? ಅಯ್ಯೋ ! ನಿರ್ಭಾಗ್ಯ, ವಿಂದಾಕ್ಷಹತಕ!! ನೀನೇಕೆ ಜನ್ಮವೆತ್ತಿದೆ ? ಛಿ:!! ಛಿ:!! ನಿನ್ನಿಂದ ಎಷ್ಟೊಂದು ಅನಿಷ್ಟಗಳುಂಟಾಗುತ್ತಿರುವದು ನೋಡಬಾರದೆ? ನಿನ್ನನ್ನು ಅಗಲಿ, ಚಂದ್ರವದನಾದೇವಿಯು ಕ್ಷಣವೂ ಜೀವಿಸಲಾರಳು. ಅವಳೀ

ವೇಳೆಗೆ ದೇಹತ್ಯಾಗವನ್ನೇ ಮಾಡಿರಬೇಕು. ಅವಳು, ಹಾಗೆ ಪ್ರಾಣತ್ಯಾಗಮಾಡಿದಳೆಂದರೆ ಚಿತ್ರಕಲೆಗೂ ಅದೇ ಮಾರ್ಗವೇ ಸಿದ್ಧವಾಗಿ ನಿಲ್ಲುವುದು. ಇವರಿಬ್ಬರ ವಿಯೋಗದಿಂದ ಇತ್ತ ಅವರ ತಾಯಿ ತಂದೆಗಳೂ, ನನ್ನ ವಿಯೋಗದಿಂದ ಅತ್ತ ಆ ನನ್ನ ಪರದೈವಸ್ವರೂಪರಾದ ತಾಯಿ ತಂದೆಗಳೂ ದುಃಖವನ್ನು ತಡೆಯದೆ ದೇಹತ್ಯಾಗಮಂತ್ರವನ್ನೇ ಜಪಿಸಬೇಕಾಗುವುದು. ಇಷ್ಟು ಅನರ್ಥಗಳೂ ಯಾರಿಂದ? ಅಯ್ಯೋ! ನನ್ನಿಂದಲೇ ಅಲ್ಲವೆ? ಸುಡುಸುಡು!! ಈ ವ್ಯರ್ಥದೇಹಧಾರಣೆಯನ್ನು ಸುಡು!!! ದೇವ! ಮಾಯಾಪಾಶಬದ್ಧನಾಗಿ ನಾನು ಈ ನರ್ತಕಿಯರ ನಿರ್ಬಂಧದಲ್ಲಿ ಇನ್ನೆಷ್ಟುಕಾಲ ಬಿದ್ದು ಒದ್ದಾಡಬೇಕು? ನನಗೆ ವಿಮೋಚನವೆಂದು! ಹಾ! ಹಾ!! '

(ರಂಭಾ ಊರ್ವಶಿಯರು ಪ್ರವೇಶಿಸುವರು.)

ರಂಭೆ:— (ವಿಂದಾಖ್ಯನ ಕೈಹಿಡಿದು)'ಸುಕುಮಾರದೇಹ! ಇದೇಕೆ ಹೀಗಾಡುವೆ? ನಾವಾಗಿ ಒಲಿದು ಬಂದು ಬೇಡುತ್ತಿದ್ದರೂ ನೀನು ಕಣ್ಣೆತ್ತಿನೋಡದಿರಬಹುದೇ? ಬಿಡು, ದುಗುಡವನ್ನು ಬಿಟ್ಟುಬಿಡು! ನಮ್ಮನ್ನು ನೋಡು; ನಲಿದಾಡು!!

ಊರ್ವಶಿ:—(ವಿಂದಾಖ್ಯನ ಭುಜದಮೇಲೆ ಕೈಯಿಟ್ಟು)'ರಾಜಪುತ್ರ! ಸುಂದರಗಾತ್ರ! ಹೆಂಗಸಿನಹಾಗೆ ಅಳುವದು ಸಾಕು. ಕೇವಲ ನಮ್ಮ ಸಂಭೋಗಸುಖಕ್ಕಾಗಿಯೇ ಅನ್ನ ನೀರನ್ನು ಬಿಟ್ಟು ಎಷ್ಟೋ ಅರಸುಗಳು ತಪಿಸುತಿದ್ದರೂ, ಅವರನ್ನು ಬಿಟ್ಟು ಪ್ರಯತ್ನಪಡದೆಯೇ ನಿನ್ನಲ್ಲಿ ನಾವಾಗಿ ಪ್ರಸನ್ನತೆಯನ್ನು ಹೊಂದಿ, ನಿಂತು ಬಲಾತ್ಕರಿಸುತ್ತಿರುವೆವು. ಹೀಗಿದ್ದರೂ, ಆ ಕ್ಷಣಿಕ ಜೀವಿಗಳಿಗಾಗಿ ಮೂವಾಗಲೂ ಅಳುತ್ತಿರುವ ನೀನೇನು, ಹುಚ್ಚನೋ? ಭ್ರಾಂತನೋ?–ಮತ್ತೆ ನಪುಂಸಕನೋ?

ವಿಂಪಾಕ್ಷ್ಯ;—'ಜಗುಪ್ಸೆಯಿಂದ ಬಿಡಿಸಿಕೊಂಡು ನೆಲವನ್ನೇ ನೋಡುತ್ತ 'ದಯಾಶೂನ್ಯೆಯರಾದ ಅಪ್ಸರಿಯರೇ! ನನ್ನನ್ನೇಕೆ ಕಾಡುತ್ತಿರುವಿರಿ? ನನಗೆ ನೀವು ವಂದನಾಯೋಗ್ಯರುಮಾತ್ರರಲ್ಲದೆ, ಸ್ಪರ್ಶಾದಿಸುಖಭೋಗಾರ್ಹರಲ್ಲ. ನಿಮ್ಮ ಮಾಯಾಪಾಶದಲ್ಲಿ ನನ್ನನ್ನು ಇನ್ನೆಷ್ಟುಕಾಲ ಕಟ್ಟಿಹಾಕಿದ್ದರೂ ಫಲವಿಲ್ಲ. ನನ್ನ ಆತ್ಮನು ನನ್ನ ದೈವಸ್ವರೂಪರಾದ ತಾಯಿ ತಂದೆಗಳ ಪಾದಸೇವೆಯಲ್ಲಿಯೂ, ಆ ನನ್ನ ಸಹಕಾರಪಾತ್ರರಾದ ಆ ಧರ್ಮ ಪತ್ನಿಯರ ಅಚಲಪ್ರೇಮ ಭಾವನೆಯಲ್ಲಿಯೂ ವಿಕ್ರೀತವಾಗಿ ಹೋಗಿರುವುದು. ವೃಥಾ ಸತ್ಪುರುಷರಲ್ಲಿ ಮಾಡಿದ ದ್ರೋಹವು ನಿಮ್ಮನ್ನು ಸುಮ್ಮನೆ ಬಿಡಲಾರದೆಂದು ತಿಳಿಯಿರಿ! ಮತ್ತೊಂದು ಬಾರಿಯಾದರೂ ನನ್ನನ್ನು ಮುಟ್ಟಿ ರೇಗಿಸದೆ ಕ್ಷಮಿಸಿ, ನನ್ನನ್ನು ಬಿಡುಗಡೆ ಮಾಡಿರಿ.'

ಊರ್ವಶಿ:—(ವ್ಯಂಗ್ಯದಿಂದ ನಕ್ಕು)'ಓಹೋ! ಬಲ್ಲೆವು-ಬಲ್ಲೆವು! ನೀವು ಮಹಾಪರಾಕ್ರಮಿಗಳು! ಸಾಕು. ಈ ಹುರುಳಿಲ್ಲದ ಹಟದಿಂದ ಏನೂ ಸಾಗುವಂತಿಲ್ಲ.

(ಗಾಬರಿಗೊಂಡು ಮೇನಕಿ ತಿಲೋತ್ತಮೆಯರು ಓಡಿಬರುವರು.)

ಮೇನಕಿ:—ಪ್ರಮಾದ! ಪ್ರಮಾದ!! ಸಖಿಯರೇ! ಎದ್ದುಬನ್ನಿರಿ.

ರಂಭಾ ಊರ್ವಶಿಯರು:— (ಧಿಗ್ಗನೆದ್ದು) 'ಅದೇನದು ? ಸಖಿ! ವಿಚಾರವೇನು ?

ತಿಲೋತ್ತಮೆ:—ಹೇಳಲು ವೇಳೆ ಸಾಲದು. ದೇವರಾಜನು ನಮ್ಮನ್ನು ಶಿಕ್ಷಿಸಲು ಇದೋ ಇಲ್ಲಿಗೇ ಬರುತ್ತಿರುವನು. ಹಾ! ಹಾ! ಕಷ್ಟ! ಕಷ್ಟ!! ಬಂದೇ ಬಂದನು.

(ಚಿತ್ರಸೇನನೊಡನೆ ದೇವರಾಜನು ಒಳಹೊಗುವನು.)

'ರಂಭಾದ್ಯರು ನಾಲ್ವರೂ ಆರ್ತರಾಗಿ ಓಡಿಬಂದು ದೇವ ರಾಜನ ಕಾಲನ್ನು ಹಿಡಿದು "ಪ್ರಭುವೇ! ಕ್ಷಮಿಸಿ ಕಾಪಾಡು! ಕಾಪಾಡು!'

ದೇವರಾಜ:—(ಹಲ್ಗಡಿದು) 'ಧೂರ್ತೆಯರೇ! ದೂರಸಾರಿರಿ! ಪರಮ ಪತಿವ್ರತೆಯನ್ನು ಕೆಣಕಿದುದಕ್ಕೆ ಪ್ರಾಯಶ್ಚಿತ್ತವನ್ನು ಮಾಡು ವೆನು. (ಪಕ್ಕಕ್ಕೆ ತಿರುಗಿ) 'ಚಿತ್ರಸೇನ! ಇವರನ್ನು ನಿರ್ಬಂಧ ದಲ್ಲಿಡು; ನಡೆ!)

ಚಿತ್ರ:—ವಿನಯದಿಂದ ದೇವರಾಜ! ಇವರನ್ನು ನಿರ್ಬಂಧದಲ್ಲಿಟ್ಟು ಫಲವಿಲ್ಲ. ಇವರು ಆ ತಪಸ್ವಿನಿಯ ಪ್ರಭಾವವನ್ನು ಕಣ್ಣಾರೆ ನೋಡಿ, ಆ ದೇವಿಗೆ ಶರಣಾಗತರಾಗಿ ಕ್ಷಮೆಬೇಡಿ ಬರುವುದ ರಿಂದ ಗುಣವುಂಟು.

ದೇವರಾಜ:—ಹೂಂ! ನಡೆಯಿರಿ! ಚಿತ್ರಸೇನನೊಡನೆ ನೀವೀಗಲೇ ತೆರಳಿ, ಆ ದೇವಿಯ ಕ್ಷಮೆಯನ್ನು ಕೇಳಿಕೊಳ್ಳಿರಿ.

(ರಂಭಾದ್ಯರು ನಾಲ್ವರೂ ಚಿತ್ರಸೇನನೊಡನೆ ಹೊರಡುವರು)

ವಿಂಧಾಕ್ಷ್ಯ (ಮೆಲ್ಲನೆ ನಡೆತಂದು ನಡುನಡುಗುತ್ತ) 'ದೇವರಾಜಾ! ಕಾಪಾಡು.'

ದೇವರಾಜ:—(ಕೈಹಿಡಿದೆಬ್ಬಿಸಿ) 'ಧನ್ಯ ವಿಂದಾಕ್ಷ್ಯ! ನೀನೇ ಧನ್ಯ! ಇನ್ನು ವಿಳಂಬವಿಲ್ಲ; ಸಾಕು. ರಾಜಪುತ್ರ! ನಿನ್ನನ್ನು ಈ ಕ್ಷಣದಲ್ಲಿಯೇ ಕರೆದೊಯ್ದು, ನಿನ್ನ ಪತ್ನಿಯಮುಂದೆ ನಿಲ್ಲಿಸಿ, ಆ ದೇವಿಯು ಪ್ರಸನ್ನಳಾಗುವಂತೆ ಮಾಡುವೆನು. ಬಾ, ನಾವಿನ್ನು ಹೊರಡುವ.

ವಿಂಧಾಕ್ಷ್ಯ:— (ಆನಂದಬಾಷ್ಪವನ್ನು ಸುರಿಸುತ್ತ) 'ದೇವರಾಜಾ! ಸಾಕ್ಷಾತ್ ತ್ರಿಲೋಕಾಧಿಪತಿಯಾದ ನೀನೇ ಪ್ರಸನ್ನನಾಗಿರಲು ನನಗೇನು ಕೊರತೆ? ಇದೋ ಆಜ್ಞಾಧೀನನಾಗಿರುವೆನು.

(ಇಬ್ಬರೂ ಹೊರಡುವರು.)

(ಮಕರಂದಮಂಟಪದಲ್ಲಿ ಚಂದ್ರವದನೆಯ ಸಮಾಧಿಮಂದಿರ)

(ಭದ್ರಾಸನಾಸೀನೆಯಾಗಿ ಚಂದ್ರವದನೆಯು ಊರ್ಧ್ವ ಮುಖದಲ್ಲಿ ಧ್ಯಾನಾಸಕ್ತಳಾಗಿ ಕುಳಿತಿರುವಳು. ಮುಂದೆ ಸಖಿಯರೊಡನೆ ಚಿತ್ರಕಲೆಯು ಕುಳಿತು ಚಿಂತಿಸುತ್ತಿರುವಳು.)

ಚಿತ್ರ:— (ನಿಟ್ಟುಸಿರಿಟ್ಟು) 'ಪ್ರಿಯಸಖಿಯರೇ! ಈ ದೆಸೆಯುಂಟಾಗಿ ಇಂದಿಗೆ ತಿಂಗಳಾಯಿತು. ಇನ್ನೆಂದಿಗೆ ಪತಿ ಸಂದರ್ಶನ ಭಾಗ್ಯವನ್ನು ಹೊಂದುವೆವು? ಸ್ವಪ್ನವಾದರೂ ಸುಳ್ಳಾಗುವುದೇ? ನಿಜವಾಗುವದಾದರೆ ಮತ್ತೆಂದಿಗೆ?

ಸಖಿಯರು:— ಪ್ರಿಯಸಖಿ! ಗ್ರಹಚಾರಕಾಲವು ಪರಿಪಕ್ವವಾಗುತ್ತ ಬಂದಿದೆ; ನಿಮ್ಮ ಹಿರಿಯರು ಬರುವ ವೇಳೆಯಾಯ್ತು ಚಿಂತಿಸಬಾರದು, ಶಾಂತಳಾಗು.

(ಆಂಧ್ರ, ಪಾಂಚಾಲ, ಕಾಶ್ಮೀರ ರಾಜರು ಪ್ರವೇಶಿಸುವರು.)

ಚಿತ್ರ:—(ವಿನೀತೆಯಾಗಿ ಎದ್ದುಬಂದು) 'ಪೂಜ್ಯಪಾದರಿಗೆ ಇದೋ ವಂದಿಸುನೆನು. ' (ನಮಸ್ಕರಿಸುವಳು)

ಆಂಧ್ರ:—(ವಾತ್ಸಲ್ಯದಿಂದ ಚಿತ್ರಕಲೆಯ ತಲೆಯನ್ನು ಹಿಡಿದೆತ್ತಿ) 'ಮಗಳೇ! ಭಗವಂತನು ನಿನ್ನಲ್ಲಿ ಪ್ರಸನ್ನನಾಗಲಿ! ನಿನ್ನ ತಂಗಿಯು ಸ್ಥಿತಿಯೇನಾವುಗಿರುವುದು? '

ಚಿತ್ರ:—(ನಿಟ್ಟುಸಿರಿಟ್ಟು) 'ಒಂದೇ ಬಗೆಯಾಗಿರುವುದು.

ಆಂಧ್ರ:—(ಮುಂದಕ್ಕೆ ಬಂದು, ಚಂದ್ರವದನೆಯನ್ನು ನೋಡಿ, ಕನಿಕರದಿಂದ) ಆಕಟಾ! ಕುಸುಮಕೋಮಲೆಯಾದ ಇವಳೆಲ್ಲಿ? ಮಹರ್ಷಿಗಳಿಗೂ ಅರಿದಾದ ಈ ಕಠಿಣತರ ತಪವೆಲ್ಲಿ! ಭೀಷಣ ಪ್ರತಿಜ್ಞೆಯಿಂದ ಹೀಗೆ ಕೃಶಳಾಗುತ್ತಿರುವ ಸುಕುಮಾರಿಯನ್ನು ನೋಡಿ ಯಾರಿಂದ ಸಹಿಸಲಾಗುವುದು?

ಸತ್ಯ:—ಆರ್ಯ ! ಈ ಸುಕುಮಾರಿಯು ಹೀಗೆ ಕುಳ್ಳಿರುವದಕ್ಕೆ ಇದೇ ಮೊದಲಲ್ಲ. ಇವಳು ಪ್ರಾಪಂಚಿಕ ತತ್ವವನ್ನು ತಿಳಿಯುವಂತಾದುದು ಮೊದಲು, ಹೀಗೆಯೇ ತಪಶ್ಚರ್ಯೆಯಲ್ಲಿ ತನ್ನ ದೇಹವನ್ನು ದಂಡಿಸುತ್ತ ಬಂದಿರುವಳು.

ಪಾಂಚಾಲ:—(ಚಂದ್ರವದನೆಯನ್ನು ಚೆನ್ನಾಗಿನೋಡಿ ವಿಸ್ಮಯಕೌತುಕಗಳಿಂದ) ಆರ್ಯರೇ ! ನೋಡಿರಿ!! ಸುಕುಮಾರಿಯ ಮುಖದಲ್ಲಿ ಹೊರಹೊಮ್ಮುತ್ತಿರುವ ಈ ಅದ್ಭುತಪ್ರಕಾಶವನ್ನು ಚನ್ನಾಗಿ ನೋಡಿರಿ! ಈ ಕೃಶವಾಗುತ್ತಿದ್ದ ಸುಕುಮಾರದೇಹದಲ್ಲಿ, ಇಂದು ತೋರುತ್ತಿರುವ ಈ ಅಪೂರ್ವಶೋಭಾರಾಶಿಯನ್ನು ಲಕ್ಷ್ಯವಿಟ್ಟು ನೋಡಿರಿ ! ಆಶ್ಚರ್ಯವಾಶ್ಚರ್ಯವು !! ಆರ್ಯರೇ ! ಪರಮಾಶ್ಚರ್ಯವು!!! ಇದೋ ದೇವಿಯ ಹಸ್ತದ್ವಯಗಳಿಂದಲೂ ಸುರಿಯುತ್ತಿರುವ ಸಿದ್ಧಿರಸವನ್ನಾದರೂ ನೋಡಿರಿ!

(ಆಂಧ್ರ ಕಾಶ್ಮೀರರಾಜರು ವಿಸ್ಮಿತರಾಗಿ ನೋಡುವರು.)

(ಗಗನದಲ್ಲಿ)

"ಧನ್ಯ ! ಸತ್ಯವರ್ಮಮಹಾರಾಜ ! ನೀನೇ ಧನ್ಯ ! ಉಭಯ ಕುಲೋದ್ಧಾರಿಣಿಯಾದ ಸಾಧ್ವೀಮಣಿ ಚಂದ್ರವದನೆಯನ್ನು ಪುತ್ರಿಯನ್ನಾಗಿ ಪಡೆದ ನಿನ್ನ ಸುಕೃತವೇ ಸುಕೃತವು ! ಆಹಾ ! ಅದ್ಭುತವು ! ದೇವರಾಜನೇ ಪತಿಯನ್ನು ಕರೆತಂದೊಪ್ಪಿಸುವಂತೆ ಮಾಡಿದ ಚಂದ್ರವದನೆಯ ತಪಃಪ್ರಭಾವವು ಅತ್ಯದ್ಭುತವು. ಸಾಧು ! ಸಾಧ್ವಿ !! ಸಾಧು! ಸಾಧು!!

(ಗಗನದಿಂದ ಅದ್ಭುತವಾದ ಪ್ರಕಾಶವು ನಾಲ್ಕು ಕಡೆಗೂ ಪ್ರಸರಿಸುವುದು)

ಸತ್ಯವರ್ಮಾದಿಗಳು (ತಲೆಯೆತ್ತಿ ನೋಡಿ ಸಂಭ್ರಮದಿಂದ ಕೈಜೋಡಿಸಿ)"ನಮಸ್ಕಾರ ! ನಮಸ್ಕಾರ !! ನಮಸ್ಕಾರ !!! ಸಾಕ್ಷಾತ್ಕಾರವಾಗಿರುವ ದೇವರಾಜನಿಗೆ ಇದೋ ಇದೋ ಸಾಷ್ಟಾಂಗನಮಸ್ಕಾರ".

ವಿಂದಾಖ್ಯ—(ತಂದೆಯ ಕಾಲನ್ನು ಬಲವಾಗಿ ಹಿಡಿದು ಗದ್ಗದ ಸ್ವರದಿಂದ) "ಅಪ್ಪ ! ತಪ್ಪಿದೆನು, ಮಾತಿಗೆ ತಪ್ಪಿದೆನು-ಪಾಪಿಯಾದೆನು! ಕ್ಷಮಿಸಿ, ಕಾಪಾಡಬೇಕು.''

ಆಂಧ್ರ—(ಸ್ನೇಹಾಧಿಕ್ಯದಿಂದ ಹಿಡಿದೆತ್ತಿ ಬಿಗಿದಪ್ಪಿ) ಮಗುವೇ ; ನಿನ್ನ ಪತ್ನಿಯ ತಪಃಪ್ರಭಾವದಿಂದಲೂ, ದೇವರಾಜನ ಅನುಗ್ರಹದಿಂದಲೂ, ಮತ್ತೆ ಪುತ್ರವಂತನಾದೆನು. ಮೊದಲು ನಿನ್ನ ಅಭ್ಯುದಯಕ್ಕೆಕಾರಣಳಾದ ಈ ತಪಸ್ವಿನಿಯನ್ನು ಎಚ್ಚರಿಸು.

ದೇವ:—(ವಿಂದಾಖ್ಯನ ಕೈಹಿಡಿದು ಕರೆತಂದು ಚಂದ್ರವದನೆಯ ಮುಂದೆ ನಿಲ್ಲಿಸಿ, ಕರುಣಾವ್ಯಂಜಕಸ್ವರದಿಂದ, ಮೃದು ಮಧುರ ವಾಣಿಯಿಂದ) 'ತಪಸ್ವಿನಿ ! ಮಹಾಭಾಗೆ ! ಚಂದ್ರವದನಾದೇವಿ !! ಕಟಾಕ್ಷಿಸಿ ನೋಡು. ನಿನ್ನ ಸ್ವಾಮಿ, ನಿನ್ನ ಮುಂದಿರುವನು. ಪ್ರಸನ್ನಳಾಗಿ ನೋಡು ! ತಾಯಿ! ಯೋಗವನ್ನು ಉಪಸಂಹರಿಸಿ, ಕೃಪಾಪೂರ್ಣವಾದ ಕಟಾಕ್ಷಗಳಿಂದ ಅವಲೋಕಿಸು. '

ವಿಂದಾಖ್ಯ:—(ಆನಂದೋದ್ರೇಕವನ್ನು ತಡೆಯಲಾರದೆ ಚಂದ್ರವದನೆಯ ಕೈಹಿಡಿದು) 'ದೇವಿ ! ದೇವಿ !! ಕಣ್ದೆರೆ ! ನಾನಿದೋ-ಬಂದಿರುವೆನು. ಪ್ರಸನ್ನಳಾಗು! '

ಚಂದ್ರ:—(ಪ್ರಸನ್ನಮುಖಿಯಾಗಿ ಕಣ್ದೆರದು ನೋಡಿ, ಆನಂದಭರದಿಂದ ಎದ್ದು ನಿಂತು ಎಲ್ಲರನ್ನೂ ಕೌತುಕದಿಂದ ನೋಡುವಳು.)

ದೇವ:—' ಸುಭಾಗೇ ! ನಿನ್ನ ಸ್ವಾಮಿಯನ್ನು ಕರೆತಂದು ಒಪ್ಪಿಸಿರುವೆನು; ನನ್ನ ಸಮುಖದ ನರ್ತಕಿಯರಿಂದ ಮಾಡಲ್ಪಟ್ಟ ಈ ಮಹಾಪರಾಧವನ್ನು ನನಗಾಗಿ ಕ್ಷಮಿಸು !

ವಿಂದಾಖ್ಯ:—ದೇವಿ ! ಇದೇಕೆ ಹೀಗೆ ಸ್ತಬ್ಧಳಾಗಿ ನಿಂತೆ ? ಮುಂದೆ ನಿಂತಿರುವ ದೇವರಾಜನನ್ನೂ, ಮೇಲೆ ನೋಡುತ್ತಿರುವ ಸುರಸಂ

ದೋಹವನ್ನೂ ನೋಡು! ಸುತ್ತಲಿರುವ ನಮ್ಮ ಗುರುಜನರನ್ನು ನೋಡು. ಸ್ವಸ್ಥಚಿತ್ತಳಾಗಿ-ಇವರೆಲ್ಲರಿಗೂ ವಂದಿಸು.

ಚಂದ್ರ:—(ಸ್ಥಿರಭಾವನೆಯಿಂದ) 'ಸಕಲ ಗುರುಜನ ಪರಿವೃತನಾಗಿರುವ ದೇವರಾಜನಿಗೆ-ಇದೋ ನಮುಸ್ಕರಿಸುವೆನು ; ಅನುಗ್ರಹಿಸುವದಾಗಲಿ.' (ನಮಸ್ಕರಿಸುವಳು.)

ದೇವ:—(ಕೈಮೇಲಕ್ಕೆತ್ತಿ) 'ವತ್ಸೇ! ಭಗವದನುಗ್ರಹದಿಂದ ನಿನಗೆ ಸಕಲ ಸಂಪದಭ್ಯುದಯಗಳೂ ಉಂಟಾಗಿರುವವು ; ಸಂಶಯವಿಲ್ಲ.'

ಚಂದ್ರ:—ಅನುಗೃಹೀತೆಯಾದೆನು.

ದೇವ:—ಮಗಳೇ! ನಿನ್ನಲ್ಲಿ ಅಪರಾಧಿನಿಯರಾಗಿರುವ ಈ ಅಪ್ಸರಿಯರು ಇದೊ ನಿನಗೆ ಶರಣಾಗತರಾಗಲು ಬಂದಿರುವರು, 'ಕ್ಷಮಿಸು.' (ತೆರೆಮುಕಡೆ ನೋಡುವನು. ಅಪ್ಸರಿಯರು ತಲೆಬಾಗಿ ಮುಂದೆ ನಿಲ್ಲುವರು.)

ಚಂದ್ರ:—(ಕೈ ಮುಗಿದು ಪ್ರಸನ್ನತೆಯಿಂದ)—'ತಾಯಿಯರೇ! ನಾನು ನಿಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ. ನಿಮ್ಮ ಉಪಕಾರದಿಂದ ನನಗಿಂದು ದೇವರಾಜನ ಪ್ರತ್ಯಕ್ಷದರ್ಶನ ಲಾಭವೂ, ಅಪಾರವಾದ ಕೀರ್ತಿಯೂ ದೊರೆತವು. ಇದಕ್ಕಾಗಿ ನೀವು ನನಗೆ ಚಿರಸ್ಮರಣೀಯರಾಗಿರುವಿರಿ. ಆದರೆ-ತಮ್ಮಲ್ಲಿ, ನನ್ನ ಇದೊಂದು ಪ್ರಾರ್ಥನೆಯುಂಟು. ಭಗವನ್ಮಹಿಮೆಯು ಅತ್ಯದ್ಭುತವು. ಆತನ ಚರಣಸೇವಕರಾದ ಸತ್ಪುರುಷರು ಅಜೇಯರು ; ಆ ಪರಮಾತ್ಮನ ಪೂರ್ಣಾನುಗ್ರಹಕ್ಕೆ ಪಾತ್ರರಾದ ಸಾಧ್ವಿಯರ ಸತ್ಸಂಕಲ್ಪವು, ಅಮೋಘವು. ನೀವು ಇನ್ನು ಮುಂದೆಯಾದರೂ, ಸತ್ಪುರುಷರ, ಮತ್ತು ಸಾಧ್ವಿಯರಗೊಡವೆಗೆ ಬಾರದೆ, ದುರ್ಮಾರ್ಗದಲ್ಲಿ ಬಿದ್ದು ಹೋಗುತ್ತಿರುವ

ಭ್ರಾಂತಜೀವಿಗಳನ್ನು ಎಚ್ಚರಿಸಬೇಕೆಂಬ ಸದ್ಭಾವನೆಯನ್ನು ಹೊಂದಿ, ಲೋಕವನ್ನುದ್ಧರಿಸಬೇಕು. ಇದೋ- ಮತ್ತೊಮ್ಮೆ ವಂದನೆ ! ನೀವಿನ್ನು ತೆರಳಬಹುದು.'

(ರಂಭಾದ್ಯರು ಲಜ್ಜಿತೆಯರಾಗಿ ಹೊರಟುಹೋಗುವರು.)

ಚಂದ್ರ:—(ಹಿಂದಿರುಗಿ ನೋಡಿ ಸ್ನೇಹಾಧಿಕ್ಯದಿಂದ)-'ಅಕ್ಕಾ ! ಇದೇಕೆ ಭ್ರಾಂತಳಾಗಿ ನಿಂತಿರುವೆ ! ಇತ್ತ ಬಾ-'

ಚಿತ್ರ:—(ಎಚ್ಚೆತ್ತು ಮುಂದೆ ಬಂದು ಆನಂದೋದ್ರೇಕದ ಕಂಪಿತ ಸ್ವರದಿಂದ) 'ಗುರುಜನರೊಡಗೂಡಿರುವ ದೇವರಾಜನಿಗೂ, ಸ್ವಾಮಿಗೂ, ನಮುಸ್ಕರಿಸುವೆನು.' (ನಮಸ್ಕರಿಸುವಳು)

ದೇವ:—(ಸಂಭ್ರಮದಿಂದ)-'ಸತೀಮಣಿ ! ಶುಭದಿಂದ ಬಾಳ್ವೆ ! ಏಳು-ಏಳು.'

ಚಿತ್ರ;—ವಿನೀತೆಯಾಗಿ ಎದ್ದು ನಿಲ್ಲುವಳು.

ದೇವ:—(ಪಾರ್ಶ್ವಕ್ಕೆ ತಿರುಗಿ) ಎಲೈ ಸತ್ಯವರ್ಮರಾಜನೇ ! ಪಾಂಚಾಲರಾಜನೇ !! ತಪಸ್ವಿನಿಯಾದ ಚಂದ್ರವದನೆಯನ್ನೂ, ಪತಿಸೇವಾತತ್ಪರಳಾದ ಚಿತ್ರಕಲೆಯನ್ನೂ ಪುತ್ರಿಯರನ್ನಾಗಿ ಪಡೆದು, ನೀವೀರ್ವರೂ ಕೃತಾರ್ಥರೆನ್ನಿಸಿದಿರಿ ! ತಪಃಪ್ರಭಾವದಿಂದ ನಿಮ್ಮ ಪಿತೃಕರ್ತವ್ಯದಕ್ಷತೆಯು ಜಗದ್ವಿಖ್ಯಾತವಾಯ್ತು !! ಆಗಲಿ ಸಂತೋಷ! (ಆಂಧ್ರರಾಜನನ್ನು ನೋಡಿ) 'ಅಯ್ಯಾ, ರಾಜರ್ಷಿಯೇ ! ನಿನ್ನ ಸುಕೃತಕ್ಕೆ ಕೊನೆ ಮೊದಲೇ ಇಲ್ಲ. ಸತ್ಯಸಂಕಲ್ಪನೂ, ಜಿತೇಂದ್ರಿಯನೂ, ಪಿತೃಭಕ್ತನೂ ಆದ ಈ ವಿಂದಾಖ್ಯನನ್ನು ಪುತ್ರರತ್ನವಾಗಿಯೂ, ಅಜೇಯರಾದ ಈ ಸಾಧ್ವೀ ಮಣಿಯರನ್ನು ಪುತ್ರವಧೂಗಳನ್ನಾಗಿಯೂ ಹೊಂದಿದ ನೀನೇ ಧನ್ಯನು.

ಮೂವರೂ:—'ದೇವರಾಜನ ಈ ಅನಿಮಿತ್ತ ವಾತ್ಸಲ್ಯದಿಂದ ಜನ್ಮ ಸಾರ್ಥಕ್ಯ ಹೊಂದಿದೆವು.'

ದೇವ:—(ವಿಂದಾಖ್ಯನನ್ನು ನೋಡಿ)—'ಸುಕುಮಾರನೇ! ವಿಂದಾಖ್ಯ ಭೂಪಾಲನೇ! ಮಾತಾಪಿತೃಸೇವಕನೇ! ಅಭ್ಯುದಯಪ್ರಾಪ್ತ ಸಾದವನ್ನೇರಲು ಇದೋ ಸ್ವರ್ಣಮಯವಾದ ಈ ಭದ್ರ ಪೀಠವನ್ನು ಆರೋಹಿಸು (ಪಕ್ಕಕ್ಕೆ ತಿರುಗಿ) 'ಚಿತ್ರಸೇನನೆ! ರಥದಲ್ಲಿರುವ ನನ್ನ ಭದ್ರಪೀಠವನ್ನು ತಂದಿಲ್ಲಿರಿಸು. ಕುಮಾರನು ಅದನ್ನೇರಲಿ'

ಚಿತ್ರಸೇನ:—(ಪೀಠವನ್ನು ತಂದು ಮಂಟಪದ ಮಧ್ಯದಲ್ಲಿರಿಸಿ) 'ಸುಭಗ; ಭದ್ರಾಸನಾರೋಹಣಕ್ಕೆ ಸುಮುಹೂರ್ತವಾಗಿದೆ'

ದೇವ:—ಸುಕುಮಾರ! ವಿಳಂಬವೇಕೆ? ಉಭಯಪಾರ್ಶ್ವವರ್ತಿನಿಯರಾದ ಪತ್ನಿಯರೊಡನೆ ಭದ್ರಾಸನವನ್ನೇರಿ, ನೇತ್ರಾನಂದವನ್ನುಂಟುಮಾಡು.

ವಿಂದಾಖ್ಯ:—ಪೂಜ್ಯರ ಆಜ್ಞೆಯನ್ನು ಶಿರಸಾವಹಿಸಿದೆನು. ಇದೋ ಗುರುಜನರ ಪಾದದಲ್ಲಿ ಮತ್ತೊಮ್ಮೆ ಅಣತಿಯನ್ನು ತೆಗೆದುಕೊಳ್ಳುವೆನು? (ಪೀಠವನ್ನೇರಿ ಕುಳಿತುಕೊಳ್ಳುವನು)

ದೇವ:—ಸುಕುಮಾರಿಯರೇ! ನೀವೂ ಪತಿಯ ಪಾರ್ಶ್ವವರ್ತಿನಿಯರಾಗಿರಿ.

ಆಂಧ್ರ+ಪಾಂಚಾಲ+ಕಾಶ್ಮೀರಪತಿಗಳು;—"ದೇವ, ದಯಾರ್ಣವ, ಇದೆಲ್ಲವೂ ನಿನ್ನ ಕೃಪೆ; ನಿನ್ನಲೀಲೆ!! ಇಂದಿನ ಸಂತೋಷೋತ್ಸವಗಳು ನಿನಗೆ ಅರ್ಪಿತವಾಗಲಿ; ಹೀಗೆಯೇ ಅಭಿವರ್ಧಿತವಾಗುತ್ತಿರಲಿ!!!

ತೆರೆಯಲ್ಲಿ 'ಜಯ, ಸಾಧ್ವೀ ಚಂದ್ರವದನೆಗೆ ದಿಗ್ವಿಜಯ, ದೇವರಾಜನಿಗೆ ವಿಜಯ.'

ದೇವ:—ಸಂಭ್ರಮದಿಂದ ಕೈ ಮೇಲಕ್ಕೆತ್ತಿ 'ಸುಸ್ವಾಗತವು, ತಪೋಧನರಾದ ಭೃಗುಮಹರ್ಷಿಗಳಿಗೆ; ಇತ್ತ ಬರಬೇಕಿತ್ತ ಬರಬೇಕು

(ಶುಭ್ರವಸ್ತ್ರಧರನಾದ ಭೃಗುಮುನಿಯ ಪ್ರವೇಶ)

ಎಲ್ಲರೂ (ಭಕ್ತಿಯಿಂದ ಕೈಜೋಡಿಸಿ)–'ಪೂಜ್ಯರಿಗೆ ವಂದನೆ!'

ಭೃಗು:—(ಕೈ ಮೇಲಕ್ಕೆತ್ತಿ)–'ನೃಪಸ್ತೋಮಕ್ಕೆ ಸ್ವಸ್ತಿಯಾಗಲಿ। ಪತ್ನೀಸಹಿತನಾದ ಸತ್ಪುತ್ರರತ್ನ– ವಿಂದಾಖ್ಯ ರಾಜಕುಮಾರನಿಗೆ ಅಭ್ಯುದಯವಾಗಲಿ! ತಪಸ್ವಿನಿ ಚಂದ್ರವದನೆಗೆ–ದಿಗ್ವಿಜಯವಾಗಲಿ!

ಎಲ್ಲರೂ—(ಏಕವಾಕ್ಯತೆಯಿಂದ) –'ಸದ್ಗುರುಕೃಪೆಯಿಂದ ಕೃತಾರ್ಥರಾದೆವು.'

ಭೃಗು:—ಹೂಂ! ಪತ್ನೀದ್ವಯ ಸಂಶೋಭಿತನಾದ ಸುಕುಮಾರನಿಗೆ ಮಂಗಳಗೀತೆಯಾಗಲಿ.

ಸಖಿಯರು:—(ಕೈ ಜೋಡಿಸಿ ನಿಂತು)

ರಾಗ ಇಂಗ್ಲೀಷ್ ನೋಟ್. (ಯಾರುಸೀನುದಾರನಂತೆ)

ರಂಗನೊಲಿಯು–ಲಿಂದು ಜಗಕೆ–ಮಂಗಳಂಶುಭಂ।
ಅಂಗನಾಮಣಿ–ಯುಮಲಕೀರ್ತಿ–ತುಂಬಿತೆತ್ತಲುಂ॥
ಸುರಪನೊಡನೆ–ಗುರುಗಳಿತ್ತ–ವರದ ಮಹಿಮೆಯಿಂ।
ತರುಣಿಯರಿಗೆ–ಪರಮಭಾಗ್ಯ–ದೊರೆತುದೀದಿನಂ॥
ಚಂದ್ರವದನೆ–ಚಿತ್ರಲೇಖೆ–ಯಿಂದವೆರೆಸುತಾ।
ನಂದವಡೆಯೆ–ವಿಂದಾಖ್ಯನು–ಪೇಂದ್ರನಂದದಿಂ॥
ಪಿತೃಮಾತೃಭಕ್ತರಾಗಿ ಬೆಳಗಲಾವಗಂ।
ಕರ್ತೃಶೇಷ ಶೈಲನಿಲಯ–ನೆಮಗೆಸಂತತಂ॥

ಭೃಗು:—'ಸುಕುಮಾರಿ! ಚಂದ್ರವದನಾ! ಪ್ರಸನ್ನನಾಗಿರುವ ನಾನು ನಿನಗೆ ಮತ್ತಾವವರವನ್ನು ಕೊಡಲಿ?'

ಚಂದ್ರ:— (ವಿನಯದಿಂದ ಕೈಜೋಡಿಸಿ) 'ದೇವರಾಜ! ಗುರುದೇವ!! ನಿಮ್ಮ ಸಾಕ್ಷಾದ್ದರ್ಶನದ ಅಲಭ್ಯಲಾಭವುಂಟಾಯ್ತು! ತಪೋಧನರೂ, ಭಗವತ್ಕೃಪಾಪಾತ್ರರೂ ಆದ ಸದ್ಗುರುಗಳ ಆಶಿರ್ವಾದ, ಉಪದೇಶ ರೂಪವಾದವು ದಿಕ್ಪ್ರಕಾಶತ್ವವನ್ನು ಹೊಂದಿತು. ಯೋಗದಂಡವು, ಅಜೇಯವೂ, ಅತ್ಯದ್ಭುತವೂ, ವಿಜಯಪ್ರದವೂ ಆಗಿರುವದೆಂಬುದು ನಿದರ್ಶನಕ್ಕೆ ಬಂದಿತು. ಕೈಬಿಟ್ಟಿದ್ದ ಪತಿಭಾಗ್ಯವು ಮತ್ತೆ ಲಭಿಸಿ, ಅನಂತವಾದ ಆತ್ಮಾನಂದಕ್ಕೆ ಆಶ್ರಯವನ್ನುಂಟುಮಾಡಿತು. ಅಪ್ಸರಿಯರ ಸಹಕಾರಿತ್ವದಿಂದ ನಮ್ಮ ಸ್ತ್ರೀಜನ್ಮದ ಪ್ರಾಶಸ್ತ್ಯವೂ ಪುನರುತ್ಥಾಪನ ಹೊಂದಿತು. ಇವೆಲ್ಲವೂ ಪ್ರಸನ್ನಚಿತ್ತರಾದ ನಿಮ್ಮ ಅನುಗ್ರಹದಿಂದಲೇ ಆಗಿರುವುದು. ಇಷ್ಟಾದರೂ ಮತ್ತೆ ನಿಮ್ಮಲ್ಲಿ ನನ್ನ ಪ್ರಾರ್ಥನೆಯೆಂದರೆ ಇಷ್ಟೆ!

ದೇವರಾಜ.—ಸಂತೋಷದಿಂದ ಸಲ್ಲಿಸುವೆನು.

ಚಂದ್ರ:—ದೇವರಾಜಾ! ನಾಸ್ತಿಕಯುಗದ ದೆಸೆಯಿಂದ ಕಲಿಕಲುಷಿತವಾಗುತ್ತಿರುವ ನಮ್ಮ ಮಾನವವರ್ಗವು, ಪೂರ್ವಜರ ತಪಃಪ್ರಭಾವದಿಂದ ಮತ್ತೆ ಪ್ರಕಾಶಕ್ಕೆ ಬರುವಂತಾಗಲಿ! ಜಗತ್ತಿನಲ್ಲಿ, ಆಸ್ತಿಕ್ಯಬುದ್ಧಿಯು ಸರ್ವತ್ರ ವ್ಯಾಪಿಸಲಿ! ನಮ್ಮ ಸೋದರೀಸೋದರರು ಪರಮಾತ್ಮ ಸದ್ಗುಣಾನುಭವ, ಸಂಕೀರ್ತನ, ಸ್ವರೂಪಧ್ಯಾನ, ಸಾಕ್ಷಾತ್ಕಾರಗಳಿಂದ ಸ್ಥಿರಪ್ರಜ್ಞೆ ಹೊಂದಿ, ಪರಸ್ಪರ ಬಂಧುಪ್ರೇಮದಿಂದ ಸಂಭಾವಿಸುತ್ತ ಪೂಜ್ಯಳಾದ ಭಾರತಮಾತೆಯನ್ನು ಸರ್ವತೋಮುಖದಿಂದ ಸ್ತುತಿಸಲ್ಪಡುವಂತೆ ಮಾಡಲಿ! ಮಾತಾಪಿತೃ, ಗುರುದೈವ ಭಕ್ತಿಯೂ, ವಿಶ್ವಸೇವಾತತ್ಪರತೆಯೂ ಸರ್ವತ್ರನೆಲೆಗೊಂಡು ನಮ್ಮ ಸೋದರರನ್ನು ಕೃತಾರ್ಥರನ್ನಾಗಿ ಮಾಡಲಿ! ಪತಿಪ್ರೇಮಪರಾಕಾ

ಷ್ಠೆಯೂ, ಸತೀಕರ್ತವ್ಯಪರಿಪಾಲನೈಕತತ್ಪರತೆಯೂ, ಗೃಹ ಕಾರ್ಯದಕ್ಷತೆಯೂ, ಸಮಸ್ತಸ್ತ್ರೀಜಗತ್ತನ್ನು ಸರ್ವಾವಸ್ಥೆಗಳ ಲ್ಲಿಯೂ ಎಡೆಬಿಡದೆ ಪರಿಪೋಷಿಸುತ್ತಿರಲಿ. ನಮ್ಮ ಧರಾಮಾ ತೆಯು ಸತ್ಪುತ್ರಸಂತಾನದಿಂದಲೂ, ನ್ಯಾಯತತ್ಪರರಾದ ಪ್ರಭು ಗಳಿಂದಲೂ ಸುಖದಾಯಿನಿಯಾಗಿ ಪ್ರಕಾಶಿಸಲಿ !

ಭೃಗು.—ದೇವರಾಜ:— ತಥಾಸ್ತು ! ತಥಾಸ್ತು !! ತಥಾಸ್ತು !!!

ಭೃಗು:—(ಸಂಭ್ರಮದಿಂದ) "ಎಲ್ಲಿ ? ಮದೀಯ ಪ್ರಿಯಶಿಷ್ಯರೇ! ಇಂದಿನ ಅಭ್ಯುದಯಕ್ಕೆ ಕಾರಣನಾದ- ಪರಮಾತ್ಮನನ್ನು ಕುರಿ ತು-ದೇವರಾಜನ ಸಮಕ್ಷದಲ್ಲಿ ಎಲ್ಲರೂ ಒಟ್ಟಾಗಿ ಮಂಗಳವನ್ನು ಹೇಳಿರಿ-" (ಎಲ್ಲರೂ ಬದ್ಧಾಂಜಲಿಪುಟರಾಗಿ ಹಾಡುವರು.)

ಮಂಗಳ

ರಾಗ|| ಇಂಗ್ಲೀಷ್ ನೋಟ್, (ಕಮಲಶರ-ಸಮನೆನಿಪ)

ಶ್ರೀರಮಣ-ಭಯಹರಣ-ಭವಾಬ್ಧಿತರಣ-ಸಾರಸುಗುಣ|
ಭೂರಿಕರುಣಾ- ಪೂರಿತೇಕ್ಷಣ | ಶರಧಿಶಯನ-
ಗರುಡಗಮನ- ಶರಣರಕ್ಷಣ || ಆರ್ಯಮವಂಶಾ
ರ್ಣವರಾಕಾಸಿತಕಿರಣ | ದುರಿತದಮನ- ದೀನಭರಣ-
ಪರಮಪಾವನ || ಸುರಾರಿ, ವಿರೋಧಿ, ಖರಾರಿ,
ಪುರಾರಿ ಪ್ರಿಯರಘೂತ್ತಮ || ಅರಿಜನೈಕ ತ್ರಿವಿಕ್ರಮ |
ಅನಘಚರಿತ ರಾಮಚಂದ್ರಮ | ರಂಗಧಾಮ ಮಂಗಳಂ
ಭವಂತು ತೇ ಸದಾ ಶ್ರೀನಿಧಾ ||

—— —— o —— ——

ಇಲ್ಲಿಗೆ ಪಂಚಮಾಂಕಂ,

ಕೃಷ್ಣಾರ್ಪಣಮಸ್ತು.

ಕರ್ನಾಟಕ ನಂದಿನಿ.

ಮಾಸಪತ್ರಿಕೆ.

ನಳಸಂವತ್ಸರದ ಆಶ್ವಯುಜ ಶುದ್ಧ ದಶಮಿ
(ವಿಜಯದಶಮಿ) ಯಿಂದ ಪ್ರಾರಂಭವು.

ವಾರ್ಷಿಕ ಚಂದಾ ೧-೮-೦ ಹಿತೈಷಿಣೀ ವರ್ಗಣೀದಾರರಿಗಾದರೆ ೧-೪-೦
(ಅಂಚೆವೆಚ್ಚ ಉಚಿತ)

ಸತೀಹಿತೈಷಿಣೀಯ ಚಂದಾದಾರರಲ್ಲಿ ಆರಾರು ನಂದಿನೀ ಧೇನುವನ್ನು ವರ್ಗಣಿಯೆಂಬ ಗ್ರಾಸವಿತ್ತು ಪರಿಪೋಷಿಸಲಿಷ್ಟ ಪಡುವರೋ-ಅವರೆಲ್ಲರೂ ದಯೆಯಿಟ್ಟು ತಿಳಿಸಬಹುದು. ಬಲಾತ್ಕಾರಪಡಿಸುವುದಿಲ್ಲ. ತಾವಾಗಿ ತಮ್ಮ ಆತ್ಮವಿಶ್ವಾಸದಿಂದ ಮುಂದಾಗಿ ಬಂದು ಪ್ರೋತ್ಸಾಹಿಸುವವರು ಪ್ರೋತ್ಸಾಹಿಸಲಿ.

ನಂದಿನಿಯ ಪ್ರಥಮಸಂಚಿಕೆಯಲ್ಲಿರುವ ವಿಷಯಗಳು.